RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಗುರುವಾರ, ಮಾರ್ಚ್ ೮, ೨೦೧೮ (ಫಾಲ್ಗುಣ ೧೭, ಶಕ ವರ್ಷ ೧೯೩೯) Bengaluru, Thursday, March 8, 2018 (Phalguna 17, Shaka Varsha 1939)	ನಂ. ೩೫೮ No. 358

ಕರ್ನಾಟಕ ಸರ್ಕಾರದ ನಡವಳಿಗಳು

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಕಾರವಾರ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ(ಪ–1)ಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ನಅಇ 272 ಬೆಮಪ್ರಾ:2011, ದಿನಾಂಕ:17.10.2011.
2. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ಕಾನಪ್ರಾ:ಕಾರವಾರ: ಮಹಾಯೋಜನೆ (ಪ–1)ಅಂ.ಮೋ–1:2013–14, ದಿನಾಂಕ:15–02–2014.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕ ಕಡತ ಸಂ:ನಗ್ರಾಯೋ(15): ಕಾರವಾರ:ಮಯೋ(ಪ–1):ಅಂತಿಮ:2013–14 ರಲ್ಲಿ ನೀಡಿರುವ ಅಭಿಪ್ರಾಯ ದಿನಾಂಕ:24–04–2014.
4. ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 24–05–2017 ರಂದು ಜರುಗಿದ ಸಭೆಯ ನಡಾವಳಿ.
5. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ದಿನಾಂಕ:03–06–2017.
6. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಕಾನಪ್ರಾ: ಕಾರವಾರ: ಮಹಾಯೋಜನೆ(ಪ–1) :ಅಂ.ಮೋ:1:2013–14, ದಿನಾಂಕ:11–08–2017.
7. ಸರ್ಕಾರದ ಏಕ ಕಡತ ಸಂಖ್ಯೆ:ನಅಇ:179:ಬೆಮಪ್ರಾ:2014 ರಲ್ಲಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ನೀಡಿರುವ ಅಭಿಪ್ರಾಯ ದಿನಾಂಕ:28–10–2017.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕಾರವಾರ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪ–1) ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರವು ಕಾರವಾರ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾ ಯೋಜನೆ(ಪ–I) ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾ ಯೋಜನೆ(ಪ–I)ಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿದೆ. ಹಾಗೂ ಮೇಲೆ ಓದಲಾದ (3)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮಹಾಯೋಜನೆ (ಪ–1)ಕ್ಕೆ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (4)ರಲ್ಲಿ ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಕಾರವಾರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ–I)ಯಲ್ಲಿ ಮಾನ್ಯ ಶಾಸಕರು, ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರ ಇವರು ತಿಳಿಸಿರುವಂತೆ ಕೆಲವು ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಮಂಗಳೂರು ಹಾಗೂ ಉಡುಪಿ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 298 ಬೆಂರೂಪ್ರಾ 2013 ದಿನಾಂಕ:26.06.2014 ರಲ್ಲಿ 0.10 ಹೆಕ್ಟೇರ್ಸ್ ಅದಕ್ಕಿಂತ ಕಡಿಮೆ ಇರುವ ವಿಸ್ತೀರ್ಣದ ಖಾಸಗಿ ವಿನ್ಯಾಸಗಳಲ್ಲಿ ಉದ್ಯಾನವನ/ಬಯಲುಜಾಗೆ ಹಾಗೂ ನಾಗರೀಕ ಸೌಲಭ್ಯದ ವಿನಾಯಿತಿ

ನೀಡಿರುವಂತೆ ಕಾರವಾರ ಮಹಾಯೋಜನೆಯಲ್ಲಿಯೂ ಅವಕಾಶ ಕಲ್ಪಿಸಲು ಮಾನ್ಯ ಶಾಸಕರು ಕೋರಿರುವಂತೆ ಈ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಪರಿಶೀಲಿಸಿ ತಾಂತ್ರಿಕವಾಗಿ ಸರಿಯಿದ್ದುದನ್ನು ಅಳವಡಿಸಿಕೊಂಡು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಮೇಲೆ ಓದಲಾದ (5)ರ ಪ್ರಾಧಿಕಾರದ ಸಭೆಯಲ್ಲಿ ಮಾರ್ಪಾಡುಗಳೊಂದಿಗೆ ನಕ್ಷೆ ಮತ್ತು ವರದಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿದೆ.

ಮೇಲೆ ಓದಲಾದ (6)ರ ಪತ್ರದಲ್ಲಿ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:03.06.2017ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ನಕ್ಷೆಗಳನ್ನು ಹಾಗೂ ವರದಿ ತಯಾರಿಸಿ ಪ್ರಸ್ತಾವನೆಯನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿದ್ದು, ಕಾರವಾರ ನಗರದ ಜನಸಂಖ್ಯೆಯು 2021ರಲ್ಲಿ 2,00,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆಯನ್ನು ತಯಾರಿಸಲಾಗಿದೆ. ಕಾರವಾರ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 9656.00 ಹೆಕ್ಟೇರ್ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ (12)ರಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಾಗಿ ಪ್ರಸ್ತಾಪಿಸಿರುವ ಒಟ್ಟು 3444.55 ಹೆಕ್ಟೇರ್ ಕನರ್‌ಬೇಷನ್ ಪ್ರದೇಶದಲ್ಲಿ ವಸತಿಗಾಗಿ 1986.27 ಹೆಕ್ಟೇರ್ (ಶೇ.57.66), ವಾಣಿಜ್ಯಕ್ಕಾಗಿ 132.44 ಹೆಕ್ಟೇರ್ (ಶೇ.3.85), ಕೈಗಾರಿಕೆಗಾಗಿ 191.42 ಹೆಕ್ಟೇರ್, (ಶೇ.5.56), ಸಾರ್ವಜನಿಕ/ ಅರೆ ಸಾರ್ವಜನಿಕ ಉಪಯೋಗಕ್ಕೆ 103.38 ಹೆಕ್ಟೇರ್, (ಶೇ.3.00) ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 344.97 ಹೆಕ್ಟೇರ್ (ಶೇ.10.01) ಹಾಗೂ ಸಾರಿಗೆ/ ಸಂಪರ್ಕ ವಲಯಕ್ಕೆ 658.65 ಹೆಕ್ಟೇರ್ (ಶೇಕಡ 19.12), ನಾಗರೀಕ ಸೌಲಭ್ಯಕ್ಕಾಗಿ 27.42 ಹೆಕ್ಟೇರ್ (ಶೇ.0.80) ಪ್ರದೇಶವನ್ನು ನಿಗದಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ಸೂಕ್ತವಾಗಿ ರೂಪಿಸಲಾಗಿದ್ದು, ಸದರಿ ಮಹಾ ಯೋಜನೆ(ಪ–I)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಅಂತಿಮ ಅನುಮೋದನೆ ನೀಡಲು ಪರಿಶೀಲಿಸಬಹುದೆಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 179 ಬೆಮಪ್ರಾ 2014, ಬೆಂಗಳೂರು, ದಿನಾಂಕ: 07.03.2018

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರವಾರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆ(ಪ–I)ಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(3)ರನ್ವಯ ಸರ್ಕಾರವು ಅಂತಿಮ ಅನುಮೋದನೆಯನ್ನು ನೀಡಿದೆ. ಮಹಾ ಯೋಜನೆ (ಪ– I)ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಷರತ್ತು:

1) ಪ್ರಾಧಿಕಾರವು ಮಹಾಯೋಜನೆ (ಪ–I)ಯನ್ನು 2021ರ ಯೋಜನಾ ಅವಧಿಗೆ ತಯಾರಿಸಿದ್ದು, ಯೋಜನಾ ಅವಧಿಯು ಪೂರ್ಣಗೊಳ್ಳುವುದರ ಒಳಗಾಗಿ ಮಹಾಯೋಜನೆ (ಪ–2)ನ್ನು ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸತಕ್ಕದ್ದು.
2) ಈ ಆದೇಶದ ದಿನಾಂಕದಿಂದ ಎರಡು ವರ್ಷಗಳವರೆಗೆ ಪ್ರಾಧಿಕಾರವು ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಕೂಡದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ನಾಗರಾಜ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೨೦೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಶುಕ್ರವಾರ, ಮಾರ್ಚ್ ೧೬, ೨೦೧೮ (ಫಾಲ್ಗುಣ ೨೫, ಶಕ ವರ್ಷ ೧೯೩೯) Bengaluru, Friday, March 16, 2018 (Palguna 25, Shaka Varsha 1939)	ನಂ. ೪೫೮ No. 458

ಕರ್ನಾಟಕ ಸರ್ಕಾರದ ನಡವಳಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಗೆ ಅಡಳಿತಾಧಿಕಾರಿಯನ್ನು ನೇಮಿಸುವ ಕುರಿತು

ಓದಲಾಗಿದೆ: 1. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ರಾಜೀನಾಮೆ ಪತ್ರ ದಿನಾಂಕ:01–03–2018.

2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 98 ಜಿಪಸ 2018 ದಿನಾಂಕ:16–03–2018.

3. ಅಧ್ಯಕ್ಷರು ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಅಧಿಸೂಚನೆ ಸಂಖ್ಯೆ: ಜಿಪಂಚಿ:ಆಕಾ:ಆಶಾ:1111/2017–18 ದಿನಾಂಕ: 09–03–2018.

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಜಿಪಂಚಿ:ಸಭಾ–012:ಸಿಆರ್–62:2017–18 ದಿನಾಂಕ: 16–03–2018

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಬಿ.ಎಸ್.ಚೈತ್ರಶ್ರೀ, ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು ಇವರು ದಿನಾಂಕ:01–03–2018 ರಂದು ಸರ್ಕಾರಕ್ಕೆ ರಾಜೀನಾಮೆ ಪತ್ರ ಸಲ್ಲಿಸಿ, ಸ್ವ–ಇಚ್ಛೆಯಿಂದ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ತಿಳಿಸಿರುವ ರಾಜೀನಾಮೆ ಪತ್ರವನ್ನು ಸರ್ಕಾರವು ದಿನಾಂಕ: 01–03–2018 ರಂದು ಸ್ವೀಕರಿಸಿರುತ್ತದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ಪ್ರಕರಣ 179 (1) ರ ಪ್ರಕಾರ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರು ದಿನಾಂಕ:15–03–2018 ರವರೆವಿಗೂ ರಾಜೀನಾಮೆಯನ್ನು ಹಿಂಪಡೆದಿರುವುದಿಲ್ಲ. ಆದುದರಿಂದ ದಿನಾಂಕ:16–03–2018 ರಂದು ನಿಯಮಾನುಸಾರ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರ ರಾಜೀನಾಮೆಯನ್ನು ಸರ್ಕಾರವು, ಅಂಗೀಕಾರ ಮಾಡಲಾಗಿರುತ್ತದೆ.

ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಆಯ್ಕೆಯಾಗುವವರೆಗೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ಪ್ರಕರಣ 194 ರನ್ವಯ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್, ಉಪಾಧ್ಯಕ್ಷರು, ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ, ಮೇಲೆ ಓದಲಾದ (3) ರ ಅಧಿಸೂಚನೆ ಅನ್ವಯ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರ ಸ್ಥಾನವು ಖಾಲಿಯಾಗಿರುತ್ತದೆ.

ಆದುದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ಪ್ರಕರಣ 179 (6) ರನ್ವಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳೆರಡೂ ತೆರವಾದಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ

ಮತ್ತು ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಆದರೆ, ಮೇಲೆ ಓದಲಾದ (4) ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು ಇವರು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳ ಮೊದಲನೇ ಅವಧಿಯ ದಿನಾಂಕ:31–01–2018 ಕ್ಕೆ ಕೊನೆಗೊಂಡಿದ್ದು, ಈ ಸಂಬಂಧ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ದಿನಾಂಕ: 31–01–2018 ರಂದು ಸ್ಥಾಯಿ ಸಮಿತಿ ರಚನೆ ಬಗ್ಗೆ ಸಭೆಯನ್ನು ಕರೆದಿದ್ದು, ಕಾರಣಾಂತರದಿಂದ ಸದರಿ ಸಭೆಯು ಮುಂದೂಡಲ್ಪಟ್ಟಿರುತ್ತದೆ. ಆದುದರಿಂದ, ಎರಡನೇ ಅವಧಿಗೆ ಯಾವುದೇ ಸ್ಥಾಯಿ ಸಮಿತಿಗಳು ರಚನೆಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರ ಆಯ್ಕೆಯಾಗುವವರೆಗೆ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಆಡಳಿತವು ಸುಗಮವಾಗಿ ನಡೆಯಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ಪ್ರಕರಣ 321 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸುವುದು ಅವಶ್ಯಕತೆ ಇರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 98 ಜಿಪಸ 2018, ಬೆಂಗಳೂರು, ದಿನಾಂಕ: 16–03–2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 177 ಮತ್ತು 186 ರನ್ವಯ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ಉಳಿದ ಅವಧಿಗೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಆಯ್ಕೆಯಾಗುವವರೆಗೆ ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ಆಡಳಿತವನ್ನು ನಿರ್ವಹಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 321 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚುಲಾಯಿಸಿ ಸರ್ಕಾರವು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಯ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ. ದೇವಸಹಾಯಂ
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಮಾರ್ಚ್ ೧೬, ೨೦೧೮ (ಫಾಲ್ಗುಣ ೨೫, ಶಕ ವರ್ಷ ೧೯೩೯)	ನಂ. ೪೮೦
Part–I	Bengaluru, Friday, March 16, 2018 (Palguna 25, Shaka Varsha 1939)	No. 480

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಟಿ. ಸುನೀಲ್‌ಕುಮಾರ್, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ದಿನಾಂಕ: 23.03.2018ರಿಂದ ದಿನಾಂಕ: 06.04.2018 ರವರೆಗೆ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಲು ಪ್ರತಿಬಂಧಕಾಜ್ಞೆಯನ್ನು ವಿಧಿಸುವ ಬಗ್ಗೆ.

ಉಲ್ಲೇಖ : ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆರವರ ಕಛೇರಿಯ ಪತ್ರ ಸಂಖ್ಯೆ: ಆ4.ಎಸ್.ಎಸ್.ಎಲ್.ಸಿ.–ಪ.ಕೇ.ರಚನೆ/27/2017–18, ದಿನಾಂಕ: 07.03.2018.

ಪ್ರಸ್ತಾವನೆ:

ದಿನಾಂಕ: 23.03.2018 ರಿಂದ ದಿನಾಂಕ: 06.04.2018ರವರೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಮಾರ್ಚ್/ಏಪ್ರಿಲ್–2018 ರ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಪ್ರದೇಶಕ್ಕೆ ಅನ್ವಯಿಸುವಂತೆ ನಿಷೇದಾಜ್ಞೆ ಹೊರಡಿಸಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಅಂಗಡಿಗಳನ್ನು ಬೆಳಿಗ್ಗೆ 08–00 ಗಂಟೆಯಿಂದ ಮದ್ಯಾಹ್ನ 1–30 ಗಂಟೆಯವರೆಗೆ ಮುಚ್ಚುವಂತೆ ಆದೇಶ ಹೊರಡಿಸಲು ಉಲ್ಲೇಖಿತ ಪತ್ರದಲ್ಲಿ ಉಪ ನಿರ್ದೇಶಕರು (ಆಡಳಿತ), ಬೆಂಗಳೂರು ದಕ್ಷಿಣ ಜಿಲ್ಲೆರವರು ಕೋರಿರುತ್ತಾರೆ.

ಈ ವಿಷಯದ ಬಗ್ಗೆ ನಾನು ಖುದ್ದಾಗಿ ಮಾಡಿದ ವಿಚಾರಣೆಯಿಂದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಗಳನ್ನು ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಪ್ರದೇಶಕ್ಕೆ ಅನ್ವಯಿಸುವಂತೆ ನಿಷೇದಾಜ್ಞೆ ಹೊರಡಿಸುವುದು ಅಗತ್ಯವಿರುವುದನ್ನು ಮನಗಂಡಿರುತ್ತೇನೆ. ಆದ್ದರಿಂದ ಈ ಆದೇಶ–

ಆದೇಶ ಸಂಖ್ಯೆ :ಎಸ್.ಬಿ/ಗು.ವಾ/ನಿಷೇದಾಜ್ಞೆ–07/2018, ದಿನಾಂಕ: 16.03.2018

ಈ ದಿಸೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ನಡೆಸುವ ದೃಷ್ಟಿಯಿಂದ, ನನಗೆ ದಂಡ ಪ್ರಕ್ರಿಯಾಸಂಹಿತೆಯ ಕಲಂ 144ನೇ ಪ್ರಕರಣದ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಟಿ.ಸುನೀಲ್‌ಕುಮಾರ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರಆದ ನಾನು, ದಿನಾಂಕ: 23.03.2018 ರಿಂದ ದಿನಾಂಕ: 06.04.2018 ರವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯು ನಡೆಯುವ ಸಮಯದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಲಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ಬೆಳಿಗ್ಗೆ 09–00 ಗಂಟೆಯಿಂದ ಮದ್ಯಾಹ್ನ 1–30 ಗಂಟೆಯವರೆಗೆ ಮುಚ್ಚುವಂತೆ ಘೋಷಿಸಿ ಪ್ರತಿಬಂಧಕಾಜ್ಞೆಯನ್ನು ವಿಧಿಸಿ ಆದೇಶ ಹೊರಡಿಸಿರುತ್ತೇನೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018ರ ಮಾರ್ಚ್ ಮಾಹೆಯ ದಿನಾಂಕ 16ರಂದು ಹೊರಡಿಸಲಾಗಿದೆ.

ಟಿ. ಸುನೀಲ್‌ಕುಮಾರ್
ಪೊಲೀಸ್‌ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಬುಧವಾರ, ಮಾರ್ಚ್ ೨೧, ೨೦೧೮ (ಫಾಲ್ಗುಣ ೩೦, ಶಕ ವರ್ಷ ೧೯೪೦) Bengaluru, Wednesday, March 21, 2018 (Palguna 30, Shaka Varsha 1940)	ಸಂ. ೫೧೧ No. 511

ಕರ್ನಾಟಕ ಸರ್ಕಾರದ ನಡವಳಿಗಳು

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಸಿ.ಬಿ.ಐ ಸಂಸ್ಥೆಗೆ ವಹಿಸಿದ್ದ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಲೋಕಾಯುಕ್ತ ಸಂಸ್ಥೆಗೆ (ವಿಶೇಷ ತನಿಖಾ ತಂಡಕ್ಕೆ) (SIT) ತನಿಖೆ ನಡೆಸಲು ವಹಿಸುವ ಬಗ್ಗೆ.

ಓದಲಾಗಿದೆ: 1. ಒಳಾಡಳಿತ ಇಲಾಖೆಯ ಆದೇಶ ಸಂಖ್ಯೆ: ಹೆಚ್‌ಡಿ 98 ಸಿಐಡಿ 2013, ದಿನಾಂಕ: 18.11.2013.

2. Supdt. Of Police & Head of Branch CBI / ACB, Gao, No. DP 027 / 2016 / 3981 / PE.2 / A / 2015 / CBI / ACB / Goa, dated 29.12.2016
3. Supdt. Of Police & Head of Branch CBI / ACB, Chennai. No. C-3/MISC/2017/AC/CHEN, Dated: 12.05.2017.
4. Supdt. Of Police & Head of Branch CBI / ACB, Bangalaore, No.PE2(A)/2014-CBI/ACB/ BLR /5315, Dated:20.09.2017 & No.PE3(A)/2014-CBI/ACB/ BLR /5313, Dated:20.09.2017.
5. ಸಚಿವ ಸಂಪುಟ ಉಪ ಸಮಿತಿಯ ಸಭೆ ದಿನಾಂಕ:04.11.2017
6. ಒಳಾಡಳಿತ ಇಲಾಖೆಯ ಆದೇಶ ಸಂಖ್ಯೆ: ಹೆಚ್‌ಡಿ 98 ಸಿಐಡಿ 2013, ದಿನಾಂಕ:19.03.2018.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಒಳಾಡಳಿತ ಇಲಾಖೆಯ ಆದೇಶದಲ್ಲಿ ಅಕ್ರಮ ಗಣಿಗಾರಿಕೆ ಸಂದರ್ಭದಲ್ಲಿ ರಾಜ್ಯದಿಂದ ದೇಶದ 09 ಬಂದರುಗಳ ಮೂಲಕ ಅಕ್ರಮವಾಗಿ ಕಬ್ಬಿಣದ ಅದಿರನ್ನು ರಪ್ತು ಮಾಡಿರುವ ಈ ಕೆಳಕಂಡ ಪ್ರಕರಣಗಳನ್ನು ಸಿ.ಬಿ.ಐ ಸಂಸ್ಥೆಗೆ ತನಿಖೆಗಾಗಿ ವಹಿಸಲಾಗಿತ್ತು ಮತ್ತು ಅವುಗಳ ಪ್ರಸ್ತುತ ವಸ್ತುಸ್ಥಿತಿ ಈ ಕೆಳಕಂಡಂತಿದೆ:

ಕ್ರ.ಸಂ	ರಾಜ್ಯ/ಬಂದರು	PE	ಷರಾ
1.	**ಆಂಧ್ರಪ್ರದೇಶ** 1. ಕೃಷ್ಣ ಪಟ್ಟಣಂ 2. ಖಾಕಿನಾಡ 3. ವಿಶಾಖಿಪಟ್ಟಣಂ	 PE 01(A)/2015-CBI/VSP 14.05.2015 PE(2)(A)/2015 14.05.2015 PE(3)(A)/2015 14.05.2015	ತನಿಖೆಯು ಜಾರಿಯಲ್ಲಿದೆ
2.	**ಗೋವಾ** 1. ಮರ್ಮಗೋವಾ 2. ಪಣಜಿ	 PE 1 / A / 2015 / CBI / ACB / GOA 31.03.2015 PE 2 / A / 2015 / CBI / ACB / GOA 31.03.2015	 ಮುಕ್ತಾಯಗೊಳಿಸಲಾಗಿದೆ ಮುಕ್ತಾಯಗೊಳಿಸಲಾಗಿದೆ
3.	**ತಮಿಳುನಾಡು** 1. ಎನ್ನೋರ್ 2. ಚೆನ್ನೈ	 NIL	 DSPE Act, 1946 Sec 5 (1)ರಡಿ ಅಧಿಸೂಚನೆಯನ್ನು ನಿರೀಕ್ಷಿಸಲಾಗಿದೆ
4.	**ಕರ್ನಾಟಕ** 1. ನವ ಮಂಗಳೂರು 2. ಕಾರವಾರ	 PE2(A)/2014-CBI/ACB/Bangalore 29.04.2014 PE3(A)/2014-CBI/ACB/Bangalore 29.04.2014	 ಮುಕ್ತಾಯಗೊಳಿಸಲಾಗಿದೆ ಮುಕ್ತಾಯಗೊಳಿಸಲಾಗಿದೆ

ಮೇಲೆ ಓದಲಾದ (2) ರ ಸೂಪರಿಡೆಂಟ್ ಆಫ್ ಪೋಲಿಸ್ ಮತ್ತು ಹೆಡ್ ಬ್ರಾಂಚ್ ಆಫ್ ಸಿ.ಬಿ.ಐ / ಎ.ಸಿ.ಬಿ, ಗೋವಾ ಇವರ ಪತ್ರದಲ್ಲಿ ಗೋವಾ ರಾಜ್ಯದ ಮರ್ಮಗೋವಾ ಮತ್ತು ಪಣಜಿ ಬಂದರುಗಳ ಮೂಲಕ ಕಬ್ಬಿಣದ ಅದಿರು ರಫ್ತಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಿಸಿದ್ದ 02 ಪ್ರಕರಣಗಳ Preliminary Enquiry ತನಿಖೆಯನ್ನು ನಡೆಸಿರುವ ಸಿ.ಬಿ.ಐ ಸಂಸ್ಥೆಯು ಗೋವಾ ರಾಜ್ಯದ ಮರ್ಮಗೋವಾ, ಪಣಜಿ ಬಂದರು ಪ್ರಕರಣಗಳನ್ನು, ಮೇಲ್ನೋಟಕ್ಕೆ ಸಾಕ್ಷ್ಯಾಧಾರಗಳು ಲಭ್ಯವಿಲ್ಲದೆ ಮೊಕದ್ದಮೆಗಳನ್ನು ದಾಖಲಿಸಲು ಅರ್ಹ ಪ್ರಕರಣವಲ್ಲವೆಂದು 02 Preliminary Enquiry (PE) ಗಳನ್ನು ಮುಕ್ತಾಯಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ಓದಲಾದ (3) ರ ಸೂಪರಿಡೆಂಟ್ ಆಫ್ ಪೋಲಿಸ್ ಮತ್ತು ಹೆಡ್ ಬ್ರಾಂಚ್ ಆಫ್ ಸಿ.ಬಿ.ಐ / ಎ.ಸಿ.ಬಿ, ಚೆನ್ನೈ ಇವರ ಪತ್ರದಲ್ಲಿ ತಮಿಳುನಾಡಿನ ಎನ್ನೋರ್ ಮತ್ತು ಚೆನ್ನೈ ಬಂದರುಗಳ ಮೂಲಕ ರಫ್ತಾದ ಪ್ರಕರಣಕ್ಕೆ ಸಂಬಂಧಿಸಿದಂತೆ Delhi Special Police Establishment Act, 1946 ರ ಸೆಕ್ಷನ್ 6 ರಡಿ ತಮಿಳುನಾಡಿನ ರಾಜ್ಯ ಸರ್ಕಾರವು ಸಿಬಿಐ ಸಂಸ್ಥೆಯಿಂದ ತನಿಖೆಗೆ ಒಳಪಡಿಸಲು ತನ್ನ ಅನುಮೋದನೆಯನ್ನು ನೀಡಿದ್ದು, ಆದರೆ ಇದೇ ಕಾಯ್ದೆಯ ಸೆಕ್ಷನ್ 5 (1) ರಡಿ ಕೇಂದ್ರ ಸರ್ಕಾರದ Department of Personnel and Training (DoPT) ಇಲಾಖೆಯಿಂದ ಅಧಿಸೂಚನೆಯು ಇದುವರೆಗೂ ಬಾರದಿರುವ ಕಾರಣ ಯಾವುದೇ ಪ್ರಕರಣಗಳನ್ನು ದಾಖಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರ ಸೂಪರಿಡೆಂಟ್ ಆಫ್ ಪೋಲಿಸ್ ಮತ್ತು ಹೆಡ್ ಬ್ರಾಂಚ್ ಆಫ್ ಸಿ.ಬಿ.ಐ / ಎ.ಸಿ.ಬಿ, ಬೆಂಗಳೂರು ಇವರ ಪತ್ರಗಳಲ್ಲಿ ಸಿಬಿಐ ಮುಖ್ಯಸ್ಥರು, ನವ ಮಂಗಳೂರು ಬಂದರು ಮೂಲಕ 2006 ರಿಂದ 2010 ರ ಅವಧಿಯಲ್ಲಿ 66,51,433 ಮೆಟ್ರಿಕ್ ಟನ್ ಗಳಷ್ಟು ಕಬ್ಬಿಣದ ಅದಿರು ರಫ್ತಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಸಂಬಂಧ Preliminary Enquiry ಗಳನ್ನು PE 2(A) / 2014 – CBI / ACB / Bangalore ರಲ್ಲಿ NMPT ಬಂದರು ಪ್ರಾಧಿಕಾರದ ಗೊತ್ತಿಲ್ಲದ ಅಧಿಕಾರಿಗಳು, ರಾಜ್ಯ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅರಣ್ಯ ಇಲಾಖೆಯ ಗೊತ್ತಿಲ್ಲದ ಅಧಿಕಾರಿಗಳು, ರಫ್ತುದಾರರು, ಸಾಗಾಣಿಕೆದಾರರು, ಗಣಿ ಮಾಲೀಕರು ಮತ್ತಿತರರ ವಿರುದ್ಧ Preliminary Enquiry ಪ್ರಕರಣವನ್ನು ದಿನಾಂಕ 29.04.2014 ರಂದು ದಾಖಲಿಸಿಕೊಂಡು ತನಿಖೆಯನ್ನು ನಡೆಸಿದೆ ಎಂದು ತಿಳಿಸಿರುತ್ತಾರೆ. ತನಿಖೆಯಲ್ಲಿ ದಿನಾಂಕ 01.04.2006 ರಿಂದ ದಿನಾಂಕ 31.12.2010 ರ ನಡುವಿನ ಅವಧಿಯಲ್ಲಿ 76 ಕಂಪನಿಗಳು/ಸಂಸ್ಥೆಗಳು/ವ್ಯಕ್ತಿಗಳು ಒಟ್ಟು 2,85,98,975.6 ಮೆಟ್ರಿಕ್ ಟನ್ ಪ್ರಮಾಣದ ಕಬ್ಬಿಣದ ಅದಿರನ್ನು ರಫ್ತು ಮಾಡಿದ್ದು, ಈ ಪೈಕಿ 40 ರಫ್ತುದಾರ ಕಂಪನಿಗಳ ಒಟ್ಟು 57,53,039 ಮೆಟ್ರಿಕ್ ಟನ್‌ಗಳಷ್ಟು ಪ್ರಮಾಣವು ರುಜುವಾತು ಪಡಿಸಲಾಗದ (unexplained) ಪ್ರಮಾಣವೆಂದು ಅಂದಾಜಿಸಿರುತ್ತಾರೆ.

ಇದೇ ರೀತಿ ಕಾರವಾರ ಬಂದರಿಗೆ ಸಂಬಂಧಿಸಿದಂತೆ ಸಿ.ಬಿ.ಐ / ಎ.ಸಿ.ಬಿ ಬೆಂಗಳೂರು PE 3(A) / 2014 – CBI / ACB / Bangalore ದಿನಾಂಕ:29.04.2014 ರಂದು ಪ್ರಕರಣವನ್ನು ದಾಖಲಿಸಿಕೊಂಡು ಕಾರವಾರ ಬಂದರು ಪ್ರಾಧಿಕಾರದ ಗೊತ್ತಿಲ್ಲದ ಅಧಿಕಾರಿಗಳು, ರಾಜ್ಯ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅರಣ್ಯ ಇಲಾಖೆಯ ಗೊತ್ತಿಲ್ಲದ ಅಧಿಕಾರಿಗಳು, ರಫ್ತುದಾರರು, ಸಾಗಾಣಿಕೆದಾರರು, ಗಣಿ ಮಾಲೀಕರು ಮತ್ತಿತರರ ವಿರುದ್ಧ ದಾಖಲಿಸಿ ತನಿಖೆಯನ್ನು ನಡೆಸಿರುತ್ತಾರೆ. ತನಿಖೆಯಲ್ಲಿ ದಿನಾಂಕ 01.04.2006 ರಿಂದ 31.02.2010 ರ ನಡುವಿನ ಅವಧಿಯಲ್ಲಿ 37 ಕಂಪನಿಗಳು ಒಟ್ಟು 79,06,564 ಮೆ.ಟನ್ ಗಳಷ್ಟು ಪ್ರಮಾಣದ ಅದಿರನ್ನು ರಫ್ತು ಮಾಡಿದ್ದು, ಈ ಪೈಕಿ 20,27,080 ಮೆ.ಟನ್ ಕಬ್ಬಿಣದ ಅದಿರು ರುಜುವಾತುಪಡಿಸಲಾಗದ (unexplained) ಪ್ರಮಾಣವಾಗಿರುತ್ತದೆ ಎಂದು ತಿಳಿಸಿ, ಮೇಲ್ಕಂಡ PE ಯನ್ನು RC ಪ್ರಕರಣವನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲವೆಂದು ತಿಳಿಸುತ್ತಾ, ರಾಜ್ಯ ಸರ್ಕಾರವೇ ಸಕ್ಷಮ ಪ್ರಾಧಿಕಾರಿಯಾಗಿರುವುದರಿಂದ ಎಂಎಂಡಿಆರ್ ಕಾಯ್ದೆ, 1957 ರ ಸೆಕ್ಷನ್ 4(1)(ಎ) ರಡಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಸಚಿವ ಸಂಪುಟ ಉಪಸಮಿತಿಯು ಲೋಕಾಯುಕ್ತ ವರದಿಗಳಲ್ಲಿ ಮಾಡಿರುವಂತಹ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಲ್ಲಿ ಸಂಬಂಧಪಟ್ಟ ಇಲಾಖೆಗಳು ಕೈಗೊಂಡಿರುವ ಕ್ರಮಗಳನ್ನು ಕಾಲಕಾಲಕ್ಕೆ ಮೇಲುಸ್ತುವಾರಿ ಮಾಡಿ, ಇಲ್ಲಿಯವರೆಗೆ ಒಟ್ಟು 11 ಸಭೆಗಳನ್ನು ನಡೆಸಿ, ಸಚಿವ ಸಂಪುಟ ಉಪ ಸಮಿತಿಯು ದಿನಾಂಕ:04.11.2017 ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಅಕ್ರಮ ಗಣಿಗಾರಿಕೆ ಎಸಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವವರಿಂದ ನಷ್ಟ ವಸೂಲಾತಿಯನ್ನು The Criminal Law Amendment Ordinance, 1944 ರಡಿ ವಸೂಲು ಮಾಡಲು ಹಾಗೂ ಸಿಬಿಐ ಸಂಸ್ಥೆಯು ಪಿ.ಇ. ಗಳನ್ನು ದಾಖಲಿಸಿ ಅವುಗಳನ್ನು ಕ್ರಿಮಿನಲ್ ಮೊಕದ್ದಮೆಗಳಾಗಿ Registered Case (RC) ಪರಿವರ್ತಿಸಲು ವಿಫಲವಾಗಿ ರಾಜ್ಯ ಸರ್ಕಾರವೇ ಎಂ.ಎಂ.(ಡಿ & ಆರ್) ಕಾಯ್ದೆ, 1957 ರ ಸೆಕ್ಷನ್ 4(1)(ಎ) ರಡಿ ಕ್ರಮ ಕೈಗೊಳ್ಳುವಂತೆ ಕೋರಿ ಹಿಂದಿರುಗಿಸಿರುವಂಥ ಪ್ರಕರಣಗಳನ್ನು ಲೋಕಾಯುಕ್ತ (ಎಸ್.ಐ.ಟಿ)ಗೆ ವಹಿಸಲು ನಿರ್ಣಯಗಳನ್ನು ಕೈಗೊಂಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಆದೇಶದಲ್ಲಿ ಒಳಾಡಳಿತ ಇಲಾಖೆಯು ಮೇಲೆ (1) ರಲ್ಲಿ ಓದಲಾದ ಆದೇಶವನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡಿರುತ್ತದೆ.

"The Government of Karnatak hereby amends its earlier order dated 18.11.2013 as follows with regard to sanction and continuing investigation by the Central Bureau of Investigation under secton 5 & 6 of Delhi Special Police Establishment Act, 1946 for

i) Investigation into illegal exports of iron ore from the 06 ports vix.., a) Karwar – State of Karnatak b) New Mangalore Port Trust, Mangalore – State of Karnataka, c) Ennore – State of Tamil Nadu d) Chennai – State of Tamil Nadu e) Panaji – State of Goa f) Mormugao – State of Goa, enumerated in earlier order stands withdrawn.

ii) The Government of Karnataka accords sanction to continue investigation into illegal exports of iron ore from the 3 ports viz.., Krishna Pattanam – State of Andhra Pradesh; Kakinada - State of Andhra Pradesh; and Vishakapatnam - State of Andhra Pradesh & to determine the extent of illegal ore which has been exported and to find out whether any criminal prosecution against any persons/Iron ore Mining Companies Involved in such cases if necessary".

ಸಿ.ಬಿ.ಐ ಸಂಸ್ಥೆಯು preliminary enquiry ಗಳನ್ನು ನಡೆಸಿ ಮುಕ್ತಾಯಗೊಳಿಸಿರುವ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ, 4(1) ರ ಅನುಸಾರ ರಾಜ್ಯ ಸರ್ಕಾರವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಹಿಂದಿರುಗಿಸಿರುವ ಪ್ರಕರಣಗಳು ಹಾಗೂ ಚೆನ್ನೈ ಬಂದರುಗಳ ಮೂಲಕ ಕಬ್ಬಿಣದ ಅದಿರನ್ನು ರಫ್ತು ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ Department of Personnel and Training (DoPT) ಇಲಾಖೆಯಿಂದ ಡಿ.ಎಸ್.ಪಿ ಕಾಯ್ದೆ, 1946 ರ ಸೆಕ್ಷನ್ 5(1) ರಡಿ ಅಧಿಸೂಚನೆಯನ್ನು ಹೊರಡಿಸದೇ ಇರುವ ಪ್ರಕರಣಗಳನ್ನು ಲೋಕಾಯುಕ್ತ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸಲು ವಹಿಸುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 282 ಎಂಎಂಎಂ 2011 (ಭಾ–2), ಬೆಂಗಳೂರು, ದಿನಾಂಕ:21.03.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಸಿ.ಬಿ.ಐ ಸಂಸ್ಥೆಯು ಪ್ರಾಥಮಿಕ ತನಿಖೆ ನಡೆಸಿ ಮುಕ್ತಾಯಗೊಳಿಸಿರುವ ಮತ್ತು ಪ್ರಾಥಮಿಕ ತನಿಖೆ ನಡೆಸಿ ರಿಜಿಸ್ಟರ್ಡ್ ಕೇಸುಗಳನ್ನಾಗಿ (Registered Case) ಪರಿವರ್ತಿಸಲು ವಿಫಲವಾದ ಎಲ್ಲಾ ಪ್ರಕರಣಗಳು ಹಾಗೂ ಕೇಂದ್ರ ಸರ್ಕಾರದಿಂದ DSPE Act, 1946 ರ ಕಲಂ 5(1) ರಡಿ ಅಧಿಸೂಚನೆಯನ್ನು ನಿರೀಕ್ಷಿಸಲಾದ ಪ್ರಕರಣಗಳನ್ನು ಒಳಗೊಂಡಂತೆ ಕಬ್ಬಿಣದ ಅದಿರನ್ನು ಅಕ್ರಮವಾಗಿ ರಫ್ತು ಮಾಡಿರುವ ಈ ಕೆಳಕಂಡ ಬಂದರುಗಳ ಪ್ರಕರಣಗಳನ್ನು ಮುಂದಿನ ತನಿಖೆಗಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಸೆಕ್ಷನ್ 7(2–ಎ) ರನ್ವಯ ಲೋಕಾಯುಕ್ತ ಸಂಸ್ಥೆಗೆ (ವಿಶೇಷ ತನಿಖಾ ತಂಡಕ್ಕೆ) (SIT) ವಹಿಸಿದೆ.

ಕರ್ನಾಟಕ	–	1. ನವ ಮಂಗಳೂರು ಬಂದರು.
		2. ಕಾರವಾರ ಬಂದರು.
ಗೋವಾ	–	3. ಮರ್ಮಗೋವಾ ಬಂದರು.
		4. ಪಣಜಿ ಬಂದರು.
ತಮಿಳುನಾಡು	–	5. ಎನ್ನೋರ್ ಮತ್ತು ಚೆನ್ನೈ ಬಂದರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಅನ್ವರ್ ಬಾಷ
ಸರ್ಕಾರದ ಅಧೀನ ಕಾರ್ಯದರ್ಶಿ
ವಿಶೇಷ ತನಿಖಾ ಮತ್ತು ಸಮನ್ವಯ ಕೋಶ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಗುರುವಾರ, ಮಾರ್ಚ್ ೨೨, ೨೦೧೮ (ಚೈತ್ರ ೦೧, ಶಕ ವರ್ಷ ೧೯೪೦)	ನಂ. ೫೧೨
Part–I	Bengaluru, Thursday, March 22, 2018 (Chaitra 01, Shaka Varsha 1940)	No. 512

ಕರ್ನಾಟಕ ಸರ್ಕಾರದ ನಡವಳಿಗಳು

ಶಿಕ್ಷಣ ಸಚಿವಾಲಯ

ವಿಷಯ: ರಾಜ್ಯದಲ್ಲಿ ಹಾಲಿ ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ ಹೊಸದಾಗಿ 6ನೇ ತರಗತಿ/ 9ನೇ ತರಗತಿ/ ಪ್ರಥಮ ಪಿ.ಯು.ಸಿ ತರಗತಿಗಳನ್ನು 2018–19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸುವ ಬಗ್ಗೆ.

ಪ್ರಸ್ತಾವನೆ:

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಅಡಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದ್ದು, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ. ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಮಕ್ಕಳು ಹಾಲಿ ವ್ಯಾಸಂಗ ಮಾಡುತ್ತಿರುವ ಶಾಲೆಗಳಲ್ಲಿ ಮುಂದಿನ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಹಿರಿಯ ಪ್ರಾಥಮಿಕ ಶಾಲೆಗಳನ್ನು, ಪ್ರೌಢಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ಹೆಚ್ಚಿನ ಒತ್ತಾಯವಿರುತ್ತದೆ.

ಈ ಹಿನ್ನೆಲೆಯಲ್ಲಿ 1 ರಿಂದ 5ರ ವರೆಗೆ ತರಗತಿಗಳು ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 6ನೇ ತರಗತಿಗಳನ್ನು ಪ್ರಾರಂಭಿಸಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ನಡೆಸಲು ಹಾಗೂ 1 ರಿಂದ 8ನೇ ತರಗತಿ ಮತ್ತು 6 ರಿಂದ 8ನೇ ತರಗತಿ ನಡೆಯುತ್ತಿರುವಂತಹ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 9ನೇ ತರಗತಿಯನ್ನು ಪ್ರಾರಂಭಿಸಿ ಪ್ರೌಢಶಾಲೆಯನ್ನು ತೆರೆಯಲು ಹಾಗೂ 1 ರಿಂದ 10ನೇ ತರಗತಿ ನಡೆಯುತ್ತಿರುವಂತಹ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಪ್ರಥಮ ಪದವಿ ಪೂರ್ವ ತರಗತಿಯನ್ನು ಪ್ರಾರಂಭಿಸಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಕೇಂದ್ರ ಸರ್ಕಾರದ ಎನ್.ಸಿ.ಟಿ.ಇ ನಿಯಮಾವಳಿಗಳನ್ವಯ, 6 ರಿಂದ 8ನೇ ತರಗತಿಯವರೆಗಿನ ಹಂತವನ್ನು ಹಿರಿಯ ಪ್ರಾಥಮಿಕ ಶಾಲಾ ಹಂತ ಎಂದು ಪರಿಗಣಿಸಲಾಗಿದ್ದು, ಇದರನ್ವಯ 1 ರಿಂದ 7ನೇ ತರಗತಿಗಳು ನಡೆಯುತ್ತಿರುವಂತಹ ಶಾಲೆಗಳಲ್ಲಿ ಸ್ವಾಭಾವಿಕ ಬೆಳವಣಿಗೆ ಮೇರೆಗೆ ಹಾಲಿ ಇರುವ ಶಿಕ್ಷಕರುಗಳ ಸೇವೆಯನ್ನು ಬಳಸಿಕೊಂಡು 8ನೇ ತರಗತಿಯನ್ನು ಪ್ರಾರಂಭಿಸಲು ಅವಕಾಶವಿರುತ್ತದೆ.

ಹಾಲಿ ಇರುವ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೊಸದಾಗಿ ಮುಂದಿನ ತರಗತಿಗಳನ್ನು ಪ್ರಾರಂಭಿಸುವಂತಹ ಸಂದರ್ಭದಲ್ಲಿ ಬೇಡಿಕೆ, (ವಿದ್ಯಾರ್ಥಿಗಳ ಸಂಖ್ಯಾಬಲ), ಹಾಲಿ ಶಾಲೆಯಲ್ಲಿ ಇರುವಂತಹ ಕೊಠಡಿಗಳು, ಕಟ್ಟಡ, ಕಾಂಪೌಂಡ್, ಆಟದ ಮೈದಾನ ಇತರೆ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿರುವಂತಹ ಶಾಲೆಗಳನ್ನು ಗುರುತಿಸಿ, ಅಂತಹ ಶಾಲೆಗಳಲ್ಲಿ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಮುಂದಿನ ತರಗತಿಗಳನ್ನು ಹೊಸದಾಗಿ ಪ್ರಾರಂಭಿಸಲು ಯೋಜಿಸಲಾಗಿರುತ್ತದೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ 1,03,000 ಶಿಕ್ಷಕರುಗಳ ಸೇವೆಯ ಅವಶ್ಯಕತೆ ಇದ್ದು, ಪ್ರಸ್ತುತ 1,52,630 ಶಿಕ್ಷಕರುಗಳ ಸೇವೆ ಲಭ್ಯವಿರುತ್ತದೆ. ಇದರಲ್ಲಿ

ಹಲವರು ಪದವೀಧರ ಶಿಕ್ಷಕರುಗಳಿದ್ದು, ಈ ಹೆಚ್ಚುವರಿ ಶಿಕ್ಷಕರುಗಳ ಸೇವೆಯನ್ನು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅವಶ್ಯಕತೆಗನುಗುಣವಾಗಿ ಬಳಸಿಕೊಳ್ಳಲು ಅವಕಾಶವಿರುತ್ತದೆ.

ಹಾಗೆಯೇ 1 ರಿಂದ 8ನೇ ತರಗತಿ ಇರುವಂತಹ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕೊಠಡಿಗಳು, ಕಟ್ಟಡ, ಆಟದ ಮೈದಾನ ಹೀಗೆ ಸಮರ್ಪಕ ಮೂಲಭೂತ ಸೌಕರ್ಯಗಳು ಇರುವಂತಹ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹೊಸದಾಗಿ 9ನೇ ತರಗತಿಯೊಂದಿಗೆ ಸರ್ಕಾರಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಮೂಲಕ ಇಲಾಖೆಯಲ್ಲಿ ಹಾಲಿ ಹೆಚ್ಚುವರಿಯಾಗಿ ಇರುವಂತಹ ಪದವೀಧರ ಶಿಕ್ಷಕರುಗಳ ಸೇವೆಯನ್ನು ಹಾಗೂ ಹಾಲಿ ಇರುವಂತಹ ಮೂಲಭೂತ ಸೌಕರ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಹಾಗೆಯೇ, ಪ್ರಥಮ ಪಿ.ಯು.ಸಿ ತರಗತಿಗಳನ್ನು ಪ್ರಾರಂಭಿಸಲು ಬೇಡಿಕೆ ಇರುವಂತಹ ಸ್ಥಳಗಳಲ್ಲಿ ಹಾಲಿ 1 ರಿಂದ 10ನೇ ತರಗತಿ ನಡೆಯುತ್ತಿರುವಂತಹ ಶಾಲೆಗಳಲ್ಲಿ ಕೊಠಡಿಗಳು, ಕಟ್ಟಡ, ಕಾಂಪೌಂಡ್, ಪ್ರಯೋಗಾಲಯ, ಆಟದ ಮೈದಾನ ಈ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿದ್ದಲ್ಲಿ ಅಂತಹ ಶಾಲೆಗಳಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನೇ ಬಳಸಿಕೊಂಡು ಒಟ್ಟು 500 ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಥಮ ಪಿ.ಯು.ಸಿ ತರಗತಿಯನ್ನು 2018–19ನೇ ಶೈಕ್ಷಣಿಕ ಸಾಲಿನಲ್ಲಿ ಮೇ ತಿಂಗಳ 15ನೇ ದಿನಾಂಕದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಪ್ರಸ್ತುತ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 1,204 ಉಪನ್ಯಾಸಕರುಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದ್ದು ಮಾರ್ಚ್ 2018ರ ಅಂತ್ಯದ ವೇಳೆಗೆ ಇವರುಗಳ ಸೇವೆಯು ಇಲಾಖೆಗೆ ಲಭ್ಯವಾಗಲಿದೆ. ಸದರಿ ಉಪನ್ಯಾಸಕರುಗಳು ಹಾಗೂ ಇಲಾಖೆಯಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲದ ಕೊರತೆಯ ಹಿನ್ನೆಲೆಯಲ್ಲಿ ಹಲವು ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿಯಾಗಿರುವ ಉಪನ್ಯಾಸಕರುಗಳ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಒಟ್ಟು 500 ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಥಮ ಪಿ.ಯು.ಸಿ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 132 ಪಿಬಿಎಸ್ 2018, ಬೆಂಗಳೂರು, ದಿನಾಂಕ: 20/03/2018.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಇರುವಂತಹ ಮೂಲಭೂತ ಸೌಕರ್ಯಗಳು ಮತ್ತು ಹಾಲಿ ಇರುವ ಶಿಕ್ಷಕರುಗಳ ಮತ್ತು ಉಪನ್ಯಾಸಕರುಗಳ ಸೇವೆಯನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡು, ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗದಂತೆ 2018–19ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ/ಪ್ರೌಢಶಾಲೆ/ ಪದವಿ ಪೂರ್ವ ಕಾಲೇಜು/ತರಗತಿಗಳನ್ನು ತೆರೆಯಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

- 1 ರಿಂದ 5 ರವರೆಗೆ ತರಗತಿಗಳು ನಡೆಯುತ್ತಿರುವ 1,000 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 6ನೇ ತರಗತಿಯನ್ನು ಪ್ರಾರಂಭಿಸಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ನಡೆಸಲು;
- 1 ರಿಂದ 7ನೇ ತರಗತಿ ನಡೆಯುತ್ತಿರುವಂತಹ 500 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎನ್.ಸಿ.ಟಿ.ಇ ನಿಯಮಾವಳಿಗಳನ್ವಯ 8ನೇ ತರಗತಿಯನ್ನು ಪ್ರಾರಂಭಿಸಲು;
- 1 ರಿಂದ 8ನೇ ತರಗತಿ ನಡೆಯುತ್ತಿರುವಂತಹ 500 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 9ನೇ ತರಗತಿಯನ್ನು ಪ್ರಾರಂಭಿಸಿ ಪ್ರೌಢಶಾಲೆಯನ್ನು ತೆರೆಯಲು ಹಾಗೂ
- 1 ರಿಂದ 10 ರವರೆಗೆ ತರಗತಿ ನಡೆಯುತ್ತಿರುವಂತಹ 500 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೊಸದಾಗಿ ಪ್ರಥಮ ಪಿ.ಯು.ಸಿ ತರಗತಿಯನ್ನು ಪ್ರಾರಂಭಿಸಿ ಪದವಿ ಪೂರ್ವ ಕಾಲೇಜನ್ನು ತೆರೆಯಲು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ.ನಾಗೇಶ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I Part–I	ಬೆಂಗಳೂರು, ಶುಕ್ರವಾರ, ಮಾರ್ಚ್ ೨೩, ೨೦೧೮ (ಚೈತ್ರ ೦೨, ಶಕ ವರ್ಷ ೧೯೪೦) Bengaluru, Friday, March 23, 2018 (Chaitra 02, Shaka Varsha 1940)	ಸಂ. ೫೧೪ No. 514

ಕರ್ನಾಟಕ ಸರ್ಕಾರದ ನಡವಳಿಗಳು

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಶ್ರೀ ಎಸ್. ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ವಿರುದ್ಧ ಲೋಕಾಯುಕ್ತ ವರದಿ – ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಐ 59 ಎಂಜಿಎಸ್ 2014, ದಿನಾಂಕ: 19.06.2014.
2. ಮಾನ್ಯ ಹೆಚ್ಚುವರಿ ನಿಬಂಧಕರು ವಿಚಾರಣೆಗಳು, ಕರ್ನಾಟಕ ಲೋಕಾಯುಕ್ತ, ಇವರ ವರದಿ ಸಂಖ್ಯೆ:Lok / ARE-8 / 14-A / Enq / 388 / 2014 ದಿನಾಂಕ: 18.04.2016,
3. ಮಾನ್ಯ ಉಪ ಲೋಕಾಯುಕ್ತರು, ಇವರ ಪತ್ರ ಸಂಖ್ಯೆ: Lok / ARE-8 / 14-A / Enq / 388 / 2014 ದಿನಾಂಕ: 23.04.2014.
4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಸಿಐ 59 ಎಂಜಿಎಸ್ 2014 ದಿನಾಂಕ:30.08.2016.
5. ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಲಿಖಿತ ಹೇಳಿಕೆ ದಿನಾಂಕ:05.09.2017.

ಪ್ರಸ್ತಾವನೆ:–

ಮೇಲೆ (1) ರಲ್ಲಿ ಓದಲಾದ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ ಇವರು ಈ ಹಿಂದೆ ಭೂವಿಜ್ಞಾನಿ, ಉಡುಪಿ ಜಿಲ್ಲೆ, ಉಡುಪಿ ಇವರು ಲಂಚದ ಹಣವನ್ನು ಪಡೆಯುತ್ತಿರುವುದಾಗಿ ಶ್ರೀ ಸಂದೀಪ್ ಕೋಟ್ಯಾನ್ ಬಿನ್ ಭೋಜ ಪೂಜಾರಿ, ರಾಮಮಂದಿರ ಹತ್ತಿರ ಹೆರ್ಗ ಇವರು ದೂರು ನೀಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ, ಉಡುಪಿ ಇವರು ತನಿಖೆ ನಡೆಸಿ ಟ್ರ್ಯಾಪ್ ಪಂಚನಾಮ ನಡೆಸಲಾಗಿ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ ಇವರು ಲಂಚದ ಮೊತ್ತ ರೂ.4,500/– ಗಳನ್ನು ಪಡೆಯುವಾಗ ಲೋಕಾಯುಕ್ತರ ಬಲೆಗೆ ಸಿಲುಕಿದ್ದು, ಸದರಿಯವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1)(ii) ಮತ್ತು (iii) ರನ್ವಯ ದುರ್ನಡತೆ ಎಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ–14(ಎ) ರಡಿ ಅನುಮತಿ ನೀಡಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ಉಪ ಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ವಿಚಾರಣಾ ವರದಿಯಲ್ಲಿ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಜಿಲ್ಲೆ ಇವರ ವಿರುದ್ಧ ಹೆಚ್ಚುವರಿ ನಿಬಂಧಕರು ವಿಚಾರಣೆ–8, ಕರ್ನಾಟಕ ಲೋಕಾಯುಕ್ತ ಇವರು ದಿನಾಂಕ: 18–4–2016 ರಂದು ಈ ಕೆಳಕಂಡ ಅಂತಿಮ ವರದಿಯನ್ನು ನೀಡಿರುತ್ತಾರೆ:–

"The Disciplinary Authority has proved that the DGO while working as geologist in the office of Senior Geologist, Mines and Geology Department, Manipal in Udupi district, demanded Rs. 3000/- of bribe on 18.03.2013 from the complainant who was working as manager for Sri Prashanth Shetty, for renewal of sand mining license and on 19.03.2013, when the complainant approached the DGO, he demanded for a further sum of Rs. 1500/- saying that Rs. 3000/- of bribe was not sufficient and received tainted bribe amount Rs. 3000/- and further amount of Rs. 1500/-, in all Rs. 4500/- from the complainant, for doing official work, and thereby failed to maintain absolute integrity, devotion to duty and acted in a manner unbecoming of a government servant and thereby DGO Sri S.N. Girish Mohan, Geologist, Mines and Geology Department, Udupi has committed misconduct under Rule 3(1)(i) to (iii) of KCS (Conduct) Rules, 1966".

ಮೇಲೆ (3) ರಲ್ಲಿ ಓದಲಾದ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತರು ದಿನಾಂಕ:23–4–2016 ರಂದು ಈ ಕೆಳಕಂಡ ಶಿಫಾರಸ್ಸನ್ನು ಮಾಡಿರುತ್ತಾರೆ:–

"On reconsideration of oral and documentary evidence, I do not find any reason to differ with the finding recorded by the Inquiry Officer"

"Having regard to the nature of charge proved against the DGO (demand and acceptance of bribe), it is hereby recommended to the Government to impose penalty of "**Compulsory Retirement from Service on DGO** - Shri S.N. Girish Mohan, Geologist, Mines and Geology Department, Udupi".

ಮೇಲೆ (4) ರಲ್ಲಿ ಓದಲಾದ ಆಪಾದಿತ ಸರ್ಕಾರಿ ನೌಕರರ ಮೇಲಿನ ಆರೋಪವು ಸಾಬೀತಾಗಿದೆ ಎಂದು ಮಾನ್ಯ ಉಪ ಲೋಕಾಯುಕ್ತರು ತಿಳಿಸಿ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವಂತೆ ಕಠಿಣ ದಂಡನೆ ವಿಧಿಸಲು ಶಿಫಾರಸು ಮಾಡಿರುವ ಶಿಫಾರಸ್ಸಿನ ಪ್ರತಿ ಹಾಗೂ ಇಲಾಖಾ ವಿಚಾರಣಾ ವರದಿಯನ್ನು 2ನೇ ಕಾರಣ ಕೇಳುವ ನೋಟೀಸ್‌ನ ಮೂಲಕ ಜಾರಿ ಮಾಡಿ ಅವರ ಲಿಖಿತ ಸಮಜಾಯಿಷಿ ಹೇಳಿಕೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 12 ಸೇಇವಿ 94, ದಿನಾಂಕ: 07–12–1994 ರನ್ವಯ ಆಪಾದಿತರಿಗೆ ದಂಡನೆ ವಿಧಿಸುವ ಪೂರ್ವದಲ್ಲಿ ವಿಚಾರಣಾ ಪ್ರಾಧಿಕಾರಿಯ ವರದಿಯನ್ನು ಆರೋಪಿತರಿಗೆ ಕಳುಹಿಸುವುದು ಕಡ್ಡಾಯವಾಗಿದ್ದು ಅದರನ್ವಯ ದಿನಾಂಕ:30.08.2016 ರಂದು ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ: ಸಿಐ 59 ಎಂಜಿಎಸ್ 2014 ಅನ್ನು ನೀಡಿ ಆಪಾದಿತರಿಗೆ ದಂಡನೆ ವಿಧಿಸುವ ಪೂರ್ವದಲ್ಲಿ ರಕ್ಷಣಾ ಹೇಳಿಕೆ ನೀಡಲು ಅವರಿಗೆ ಒಂದು ಅವಕಾಶ ನೀಡಲಾಗಿದೆ.

ಮೇಲೆ (5) ರಲ್ಲಿ ಓದಲಾದ ದಿನಾಂಕ:05.09.2017 ರ ಪತ್ರದಲ್ಲಿ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಜಿಲ್ಲೆ ಇವರ ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ case laws ಗಳನ್ನು ಪರಿಶೀಲಿಸಲಾಗಿದೆ. ಅಪರ ನಿಬಂಧಕರು–08, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಎಆರ್‌ಇ–8/ಇಎನ್‌ಕ್ಯೂ–388/2014 ದಿನಾಂಕ:16–11–2017ರ ಪತ್ರದಲ್ಲಿ ಶ್ರೀ ಎಸ್.ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ಇವರಿಗೆ ಸಂಬಂಧಿಸಿದ ಉಡುಪಿ/ಸ್ಪೆಷಲ್ ನ್ಯಾಯಾಲಯದ ಪ್ರಕರಣ 30/2013 ರಲ್ಲಿ ಲೋಕಾಯುಕ್ತ ಸಂಸ್ಥೆಯಿಂದ ಸಕ್ಷಮ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ತಿಳಿಸುತ್ತಾ, ಸದರಿ ಅಧಿಕಾರಿಯವರನ್ನು ಆರೋಪದಿಂದ ಮುಕ್ತಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ಹಾಗೂ ಇಲಾಖಾ ವಿಚಾರಣೆ ಎರಡೂ ಬೇರೆ ಬೇರೆಯಾಗಿದ್ದು, ಕ್ರಿಮಿನಲ್ ಪ್ರಕರಣದಲ್ಲಿನ ತೀರ್ಪು ಇಲಾಖಾ ವಿಚಾರಣೆಯಲ್ಲಿ ಈಗಾಗಲೇ ನೀಡಿರುವ ಶಿಫಾರಸ್ಸಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲವೆಂದು ತಿಳಿಸಲಾಗಿದೆ.

ಈ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ನಿಯಮಾನುಸಾರ ಪರಿಶೀಲಿಸಿದ ನಂತರ ಶ್ರೀ ಎಸ್. ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಕ್ಷಿಣ ಕನ್ನಡ ಇವರನ್ನು ಮಾನ್ಯ ಕರ್ನಾಟಕ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಪರಿಗಣಿಸಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು

ಮೇಲ್ಮನವಿ) ನಿಯಮಗಳು, 1957 ರನ್ವಯ ಸರ್ಕಾರಿ ಸೇವೆಯಿಂದ ಕಡ್ಡಾಯವಾಗಿ ನಿವೃತ್ತಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 59 ಎಂಜಿಎಸ್ 2014, ಬೆಂಗಳೂರು, ದಿನಾಂಕ:22.03.2018

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಶ್ರೀ ಎಸ್. ಎನ್. ಗಿರೀಶ್ ಮೋಹನ್, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ (ಪ್ರಸ್ತುತ ಭೂವಿಜ್ಞಾನಿ ದಕ್ಷಿಣ ಕನ್ನಡ) ಇವರ ವಿರುದ್ಧ ಉಪ ಲೋಕಾಯುಕ್ತ, ಕರ್ನಾಟಕ ಇವರ ಪತ್ರ ಸಂಖ್ಯೆ: Lok / ARE-8 / 14-A / Enq / 388 / 2014 ದಿನಾಂಕ: 23.04.2014 ರಲ್ಲಿ ಮಾಡಿರುವ ಶಿಫಾರಸ್ಸನ್ನು ಅಂಗೀಕರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 8(vi) ರನ್ವಯ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಅನ್ವರ್ ಬಾಷ
ಸರ್ಕಾರದ ಅಧೀನ ಕಾರ್ಯದರ್ಶಿ (ಗಣಿ–2)(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಮಾರ್ಚ್ ೨೬, ೨೦೧೮ (ಚೈತ್ರ ೫, ಶಕ ವರ್ಷ ೧೯೪೦)	ನಂ. ೫೩೩
Part–I	Bengaluru, Monday, March 26, 2018 (Chaitra 5, Shaka Varsha 1940)	No. 533

ಪೊಲೀಸ್ ಇಲಾಖೆ

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್‌ಆಯುಕ್ತರು, ಬೆಂಗಳೂರು ನಗರ.

ವಿಷಯ : ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಪೂರ್ವ ವಿಭಾಗದ ಪುಲಿಕೇಶಿನಗರ, ಭಾರತೀನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಡಿ.ಜೆ.ಹಳ್ಳಿ ಮತ್ತು ಉತ್ತರ ವಿಭಾಗದ ಜೆ.ಸಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶ್ರೀ ಮುತ್ಯಾಲಮ್ಮ ದೇವಿಯ ರಥೋತ್ಸವ ಮತ್ತು ಹೂವಿನ ಪಲ್ಲಕ್ಕಿ ಉತ್ಸವ ನಡೆಯುವ ಪ್ರಯುಕ್ತ ಮದ್ಯ ಮಾರಾಟ ನಿಷೇಧಿಸುವ ಬಗ್ಗೆ.

ಉಲ್ಲೇಖ : ಉಪ ಪೊಲೀಸ್‌ಆಯುಕ್ತರು, ಪೂರ್ವ ವಿಭಾಗರವರ ಕಛೇರಿಯ ಪತ್ರ ಸಂಖ್ಯೆ: 21/ಬಿಬಿ/ಡಿಸಿಪಿ/ಪೂ/2018, ದಿನಾಂಕ: 21–03–2018.

ಪ್ರಸ್ತಾವನೆ:

ದಿನಾಂಕ: 28.03.2018 ರಿಂದ ದಿನಾಂಕ: 29.03.2018 ರವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಪೂರ್ವ ವಿಭಾಗದ ಭಾರತಿನಗರ ಪೊಲೀಸ್‌ಠಾಣಾ ವ್ಯಾಪ್ತಿಯ ಶ್ರೀ ಮುತ್ಯಾಲಮ್ಮ ದೇವಾಲಯದಲ್ಲಿ ರಥೋತ್ಸವ ಮತ್ತು ಹೂವಿನ ಪಲ್ಲಕ್ಕಿ ಉತ್ಸವಗಳು ನಡೆಯಲಿದೆ. ಈ ರಥೋತ್ಸವದಲ್ಲಿ ನಗರದ ನಾನಾ ಕಡೆಗಳಿಂದ ಸಹಸ್ರಾರುಜನರು ಭಾಗವಹಿಸುವರು. ದೇವರುಗಳ ರಥೋತ್ಸವ ಮತ್ತು ಪಲ್ಲಕ್ಕಿ ಉತ್ಸವಗಳು ನಡೆಯುವ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಪೂರ್ವ ವಿಭಾಗದ ಭಾರತಿನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಪುಲಿಕೇಶಿನಗರ, ಡಿ.ಜೆ.ಹಳ್ಳಿ ಮತ್ತು ಉತ್ತರ ವಿಭಾಗದ ಜೆ.ಸಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮದ್ಯದಂಗಡಿ, ಬಾರ್& ರೆಸ್ಟೋರೆಂಟ್‌ಗಳಲ್ಲಿ ಮದ್ಯ ಮಾರಾಟವನ್ನು ನಿಷೇದಿಸುವಂತೆ ಪೊಲೀಸ್ ಇನ್ಸ್‌ಪೆಕ್ಟರ್, ಭಾರತಿನಗರ ಪೊಲೀಸ್ ಠಾಣೆ ರವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಮೇಲ್ಕಂಡ ವಿಷಯದ ಬಗ್ಗೆ ನಾನು ಸ್ವತಃ ಪರಿಶೀಲಿಸಲಾಗಿ ಹಾಗೂ ಸಂಗ್ರಹಿಸಿದ ಮಾಹಿತಿಯಿಂದ ಸಾಕಷ್ಟು ಸತ್ಯಾಂಶವಿದೆಎಂದು ತಿಳಿದುಬಂದಿರುತ್ತದೆ. ಶ್ರೀ.ಮುತ್ಯಾಲಮ್ಮ ದೇವಾಲಯದಲ್ಲಿ ನಡೆಯುವ ರಥೋತ್ಸವ ಮತ್ತು ಹೂವಿನ ಪಲ್ಲಕ್ಕಿಗಳ ಮೆರವಣಿಗೆ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗವುಂಟಾಗದಂತೆ ಅಹಿತಕರ ಘಟನೆಗಳನ್ನು ತಡೆಯುವ ಅವಶ್ಯಕತೆ ಇರುವುದರಿಂದ ಮೇಲ್ಕಂಡ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮದ್ಯ ಮಾರಾಟವನ್ನು ನಿಷೇದಿಸುವುದು ಸೂಕ್ತವೆಂದು ಮನಗಂಡಿರುತ್ತೇನೆ. ಆದ್ದರಿಂದ ಈ ಆದೇಶ–

ಆದೇಶ ಸಂಖ್ಯೆ :ಎಸ್.ಬಿ./ಗು.ವಾ/ಮದ್ಯ ಮಾರಾಟನಿಷೇದಾಜ್ಞೆ/08/2018, ದಿನಾಂಕ: 24.03.2018

ಈ ದಿಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಭಾರತೀಯ ದಂಡ ಪ್ರಕ್ರಿಯ ಸಂಹಿತೆಯ ಕಲಂ.144 ರ ಉಪ ಕಲಂ.(1) ಮತ್ತು (3) ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರವೀಣ್‌ಸೂದ್, ಭಾ.ಪೊ.ಸೇ. ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ: 28.03.2018 ರಂದು ಬೆಳಿಗ್ಗೆ 06.00 ಗಂಟೆಯಿಂದ ದಿನಾಂಕ: 29.03.2018 ರ ಬೆಳಿಗ್ಗೆ 11.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಪೂರ್ವ ವಿಭಾಗದ ಪುಲಿಕೇಶಿನಗರ, ಭಾರತೀನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಡಿ.ಜೆ.ಹಳ್ಳಿ ಮತ್ತು ಉತ್ತರ ವಿಭಾಗದ ಜೆ.ಸಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೀತಿಯ ಬಾರ್‌ಗಳು, ವೈನ್ಸ್‌ಷಾಪ್‌ಗಳು, ಪಬ್‌ಗಳು ಹಾಗೂ ಎಲ್ಲಾ ರೀತಿಯ ಮದ್ಯ ಮಾರಾಟ ಮಾಡುವ ಅಂಗಡಿಗಳನ್ನು ಮುಚ್ಚಲು ಹಾಗೂ ಮಾರಾಟವನ್ನು ಮಾಡದಿರಲು ನಿಷೇದಾಜ್ಞೆಯನ್ನು ವಿಧಿಸಿರುತ್ತೇನೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018ರ ಮಾರ್ಚ್ ಮಾಹೆಯ ದಿನಾಂಕ 24ರಂದು ಹೊರಡಿಸಲಾಗಿದೆ.

ಟಿ.ಸುನೀಲ್‌ಕುಮಾರ್
ಪೊಲೀಸ್‌ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಮಾರ್ಚ್ ೨೬, ೨೦೧೮ (ಚೈತ್ರ ೫, ಶಕ ವರ್ಷ ೧೯೪೦)	ನಂ. ೫೩೪
Part–I	Bengaluru, Monday, March 26, 2018 (Chaitra 5, Shaka Varsha 1940)	No. 534

ಪೊಲೀಸ್ ಇಲಾಖೆ

ಪೊಲೀಸ್‌ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರರವರ ನಡವಳಿಗಳು

ಉಪಸ್ಥಿತರು: ಟಿ.ಸುನೀಲ್‌ಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಪಶ್ಚಿಮ ವಿಭಾಗದ ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಗಾಳಿ ಆಂಜನೇಯಸ್ವಾಮಿ ಬ್ರಹ್ಮರಥೋತ್ಸವದ ಪ್ರಯುಕ್ತ ಮದ್ಯ ಮಾರಾಟ ನಿಷೇಧಿಸುವ ಬಗ್ಗೆ.

ಉಲ್ಲೇಖ : ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ ರವರ ಕಛೇರಿಯ ಪತ್ರ ಸಂಖ್ಯೆ:ಎಸ್‌ಬಿ/ ಡಿಸಿಪಿ (ಪ)/ ಬಿಬಿ/150/2018, ದಿನಾಂಕ: 24–03–2018.

ಪ್ರಸ್ತಾವನೆ:

ದಿನಾಂಕ: 26.03.2018ರಂದು ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿರುವ ಪಶ್ಚಿಮ ವಿಭಾಗದ ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಶ್ರೀ ಗಾಳಿ ಆಂಜನೇಯ ಸ್ವಾಮಿದೇವಸ್ಥಾನದ ವತಿಯಿಂದ ಬ್ರಹ್ಮರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ನಡೆಯಲಿದೆ. ನಗರದ ನಾನಾ ಕಡೆಗಳಿಂದ ಸುಮಾರು 10000 ಕ್ಕಿಂತ ಹೆಚ್ಚಿನ ಜನರು ಭಾಗವಹಿಸುವರು. ಈ ಸಂದರ್ಭದಲ್ಲಿ ಶ್ರೀರಾಮನವಮಿ ಹಬ್ಬದ ಆಚರಣೆ ಹಾಗೂ ಬ್ರಹ್ಮರಥೋತ್ಸವದ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡುವ ಈ ಕೆಳಕಂಡ ಮದ್ಯ ಮಾರಾಟ ಮಾಡುವ ಅಂಗಡಿಗಳಲ್ಲಿ ಮದ್ಯ ಮಾರಾಟವನ್ನು ನಿಷೇಧಿಸುವಂತೆ ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗರವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. 1] ಪ್ರಿಯಾಂಕ ಬಾರ್&ರೆಸ್ಟೋರೆಂಟ್ 2] ಎಂ.ಆರ್.ಬಾರ್&ರೆಸ್ಟೋರೆಂಟ್ 3] ಎನ್.ಎಸ್.ಗಾರ್ಡನ್ ಬಾರ್&ರೆಸ್ಟೋರೆಂಟ್ 4] ತ್ರಿಶಕ್ತಿ ವೈನ್ಸ್‌ಸ್ಟೋರ್ 5] ತಿರುಪತಿ ವೈನ್ಸ್‌ಸ್ಟೋರ್ 6] ಎಸ್.ಎಂ.ಎಸ್. ವೈನ್ಸ್‌ಸ್ಟೋರ್ 7] ಚಾಯ್ಸ್ ವೈನ್ಸ್‌ಸ್ಟೋರ್ಸ್ 8] ವೈಭವ್ ವೈನ್‌ಸ್ಟೋರ್ಸ್ 9] ಎಂ.ಎಂ.ಬಾರ್&ರೆಸ್ಟೋರೆಂಟ್ 10] ಹೆಚ್.ಎಸ್.ಆರ್.ಬಾರ್&ರೆಸ್ಟೋರೆಂಟ್ 11] ಎಸ್.ಸಿ.ಎಂ.ಸ್ಪಿರಿಟ್ ವರ್ಲ್ಡ್ 12] ಭವಾನಿ ವೈನ್ಸ್ 13] ಶ್ರೀ ನಂಜುಂಡೇಶ್ವರ ಬಾರ್&ರೆಸ್ಟೋರೆಂಟ್ 14] ವೆಂಕಟೇಶ್ವರ ವೈನ್ಸ್ 15] ತುಂಗಾ ಬಾರ್&ರೆಸ್ಟೋರೆಂಟ್ 16] ಗ್ಯಾಲಾಕ್ಸಿ ಬಾರ್&ರೆಸ್ಟೋರೆಂಟ್ 17] ಮೋಹನ್ ಬಾರ್&ರೆಸ್ಟೋರೆಂಟ್ 18] ಆರ್.ಕೆ.ಬಾರ್&ರೆಸ್ಟೋರೆಂಟ್ 19] ಆದಿತ್ಯ ಬಾರ್&ರೆಸ್ಟೋರೆಂಟ್ 20] ಕಲಾ ವೈನ್ಸ್ 21] ಹೇಮ ವೈನ್ಸ್ 22] ಮಹೇಶ್ ವೈನ್ಸ್ 23] ಅಶ್ವಿನಿ ಬಾರ್&ರೆಸ್ಟೋರೆಂಟ್ 24] ಅಪರ್ಣ ವೈನ್ಸ್ 25] ಗೋಲ್ಡನ್‌ಗೇಟ್ ಬಾರ್&ರೆಸ್ಟೋರೆಂಟ್ 26] ಲಕ್ಷ್ಮಿ ಬಾರ್&ರೆಸ್ಟೋರೆಂಟ್ 27] ಬೆನಕ ವೈನ್ಸ್ 28] ದಿ ಕ್ಲಬ್‌ರೆಸ್ಟೋರೆಂಟ್ 29] ಎಂ.ಆರ್.ಲಿಕ್ಕರ್ ಮಾರ್ಟ್ 30] ಶಕ್ತಿ ಲಿಕ್ಕರ್ ಮಾರ್ಟ್

ಮೇಲ್ಕಂಡ ವಿಷಯದ ಬಗ್ಗೆ ನಾನು ಸ್ವತಃ ಪರಿಶೀಲಿಸಲಾಗಿ ಹಾಗೂ ಸಂಗ್ರಹಿಸಿದ ಮಾಹಿತಿಯಿಂದ ಸಾಕಷ್ಟು ಸತ್ಯಾಂಶವಿದೆ ಎಂದು ತಿಳಿದುಬಂದಿರುತ್ತದೆ.ಶ್ರೀ ರಾಮನವಮಿ ಹಬ್ಬ ಹಾಗೂ ಶ್ರೀ ಗಾಳಿ ಅಂಜನೇಯಸ್ವಾಮಿ ಬ್ರಹ್ಮರಥೋತ್ಸವದ ಸಮಯದಲ್ಲಿಯಾವುದೇಅಹಿತಕರ ಘಟನೆಗಳು ನಡೆಯದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗವುಂಟಾಗದಂತೆ ಅಹಿತಕರ ಘಟನೆಗಳನ್ನು ತಡೆಯುವ ಅವಶ್ಯಕತೆ ಇರುವುದರಿಂದ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗವುಂಟಾಗದಂತೆ ಅಹಿತಕರ ಘಟನೆಗಳನ್ನು ತಡೆಯುವ ಅವಶ್ಯಕತೆ ಇರುವುದರಿಂದ ಮೇಲಿನ ಮೆರವಣಿಗೆಯ ಮಾರ್ಗದಲ್ಲಿ ಮದ್ಯಪಾನ ಮಾರಾಟವನ್ನು ನಿಷೇದಿಸುವುದು ಸೂಕ್ತವೆಂದು ಮನಗಂಡಿರುತ್ತೇನೆ. ಆದ್ದರಿಂದ ಈ ಆದೇಶ–

ಆದೇಶ ಸಂಖ್ಯೆ :ಎಸ್.ಬಿ./ಗು.ವಾ/ಮದ್ಯ ಮಾರಾಟನಿಷೇದಾಜ್ಞೆ/09/2018, ದಿನಾಂಕ: 26.03.2018

ಈ ದಿಸೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಭಾರತೀಯದಂಡ ಪ್ರಕ್ರಿಯ ಸಂಹಿತೆಯ ಕಲಂ.144 ರ ಉಪ ಕಲಂ.(1) ಮತ್ತು (3) ರಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಟಿ.ಸುನೀಲ್‌ಕುಮಾರ್, ಭಾ.ಪೊ.ಸೇ. ಪೊಲೀಸ್ ಆಯುಕ್ತರು, ಬೆಂಗಳೂರು ನಗರಆದ ನಾನು ದಿನಾಂಕ: 26.03.2018 ರಂದು ಬೆಳಿಗ್ಗೆ 06.00 ಗಂಟೆಯಿಂದ ದಿನಾಂಕ: 27.03.2018 ರ ಬೆಳಿಗ್ಗೆ 10.00 ಗಂಟೆಯವರೆಗೆ ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಪಶ್ಚಿಮ ವಿಭಾಗದ ಬ್ಯಾಟರಾಯನಪುರ ಪೊಲೀಸ್‌ಠಾಣಾ ವ್ಯಾಪ್ತಿಯಲ್ಲಿ ಬರುವ ಮೇಲ್ಕಂಡ 30 ಬಾರ್ ಮತ್ತು ವೈನ್ಸ್‌ಷಾಪ್‌ಗಳನ್ನು ಮುಚ್ಚಲು ಹಾಗೂ ಮದ್ಯ ಮಾರಾಟವನ್ನು ಮಾಡದಿರಲು ನಿಷೇದಾಜ್ಞೆಯನ್ನು ವಿಧಿಸಿರುತ್ತೇನೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2018ರ ಮಾರ್ಚ್ ಮಾಹೆಯ ದಿನಾಂಕ 26ರಂದು ಹೊರಡಿಸಲಾಗಿದೆ.

ಟಿ.ಸುನೀಲ್‌ಕುಮಾರ್
ಪೊಲೀಸ್‌ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III Part–III	ಬೆಂಗಳೂರು, ಗುರುವಾರ, ಮಾರ್ಚ್ ೧, ೨೦೧೮ (ಫಾಲ್ಗುಣ ೧೦, ಶಕ ವರ್ಷ ೧೯೩೯) Bengaluru, Thursday, March 1, 2018 (Palguna 10, Shaka Varsha 1939)	ನಂ. ೩೪೦ No. 340

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಸಿಆಸುಇ 639 ಸೆನೆನಿ 2017, ಬೆಂಗಳೂರು, ದಿನಾಂಕ: 28.02.2018

ವಿಷಯ: ಸಿವಿಲ್ ಅಪೀಲ್ ಸಂಖ್ಯೆ: 2368/2011 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ವೃಂದದ ಮುಂಬಡ್ತಿಯನ್ನು ತಾತ್ಕಾಲಿಕವಾಗಿ ತಡೆಹಿಡಿದಿರುವ ಅವಧಿಯನ್ನು ವಿಸ್ತರಿಸುವ ಮತ್ತು ಕೆ.ಸಿ.ಎಸ್.ಆರ್. ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಬಗ್ಗೆ.

ಉಲ್ಲೇಖ: (1) ಸುತ್ತೋಲೆ ಸಂಖ್ಯೆ: ಸಿಆಸುಇ 182 ಸೆನೆನಿ 2011, ದಿನಾಂಕ: 22.03.2017
(2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಸೆನೆನಿ 2011, ದಿನಾಂಕ: 06.05.2017
(3) ಸುತ್ತೋಲೆ ಸಂಖ್ಯೆ: ಸಿಆಸುಇ 182 ಸೆನೆನಿ 2011, ದಿನಾಂಕ: 05.01.2018.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಶ್ರೀ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ: 09.02.2017ರಂದು ನೀಡಿದ ನಿರ್ದೇಶನದ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಎಲ್ಲಾ ವೃಂದದ ಹುದ್ದೆಗಳಿಗೆ ಮುಂದಿನ ಆರು ತಿಂಗಳ ಅವಧಿಗೆ ಮುಂಬಡ್ತಿ ಪ್ರಕ್ರಿಯೆಯನ್ನು ತಡೆಹಿಡಿಯಲು ಉಲ್ಲೇಖ (1) ರ ಸುತ್ತೋಲೆಯ ಮೂಲಕ ಸೂಚನೆಗಳನ್ನು ನೀಡಲಾಗಿತ್ತು.

ಈ ಅವಧಿಯನ್ನು ಉಲ್ಲೇಖ (3)ರ ಸುತ್ತೋಲೆಯಲ್ಲಿ ದಿನಾಂಕ: 15.01.2018ರವರೆಗೆ ವಿಸ್ತರಿಸಲಾಗಿತ್ತು.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 29.01.2018ರ ಆದೇಶದಲ್ಲಿ ದಿನಾಂಕ: 09.02.2017ರ ನಿರ್ದೇಶನಗಳನ್ನು ಪಾಲಿಸಲು ಅಂತಿಮವಾಗಿ ದಿನಾಂಕ: 15.03.2018ರವರೆಗೆ ಸಮಯಾವಕಾಶವನ್ನು ವಿಸ್ತರಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (3)ರ ಸುತ್ತೋಲೆಯನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ವೃಂದಗಳ ಹುದ್ದೆಗಳಿಗೆ ನೀಡುವ ಮುಂಬಡ್ತಿಯನ್ನು ತಾತ್ಕಾಲಿಕವಾಗಿ ತಡೆಹಿಡಿದಿರುವ ಅವಧಿಯನ್ನು ದಿನಾಂಕ: 15.03.2018ರವರೆಗೆ ವಿಸ್ತರಿಸಲಾಗಿದೆ.

ಈ ಅವಧಿಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಬಹುದಾಗಿದೆ. ಈ ವ್ಯವಸ್ಥೆಯನ್ನು ಉಲ್ಲೇಖ (2)ರ ಆದೇಶದಲ್ಲಿ ನೀಡಿರುವ ಮಾರ್ಗಸೂಚನೆಯನ್ವಯ ಸಿದ್ಧಪಡಿಸಿರುವ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಗಳನ್ನಾಧರಿಸಿ ಕ್ರಮಕೈಗೊಳ್ಳಲು ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

ಈ ಸೂಚನೆಗಳು ಸ್ವಾಯತ್ತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಸಾರ್ವಜನಿಕ ಉದ್ದಿಮೆ/ ಆಯೋಗ/ ನಿಗಮ ಮಂಡಳಿಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳಿಗೂ ಅನ್ವಯವಾಗುತ್ತದೆ ಎಂದು ತಿಳಿಸಲಾಗಿದೆ.

ಗಾಯತ್ರಿ ಎಂ.ಆರ್.
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–1)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಮಂಗಳವಾರ, ಮಾರ್ಚ್ ೬, ೨೦೧೮ (ಫಾಲ್ಗುಣ ೧೫, ಶಕ ವರ್ಷ ೧೯೩೯)	ನಂ. ೩೪೬
Part–III	Bengaluru, Tuesday, March 6, 2018 (Phalguna 15, Shaka Varsha 1939)	No. 346

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 171 ಪಿಐಎಂ 2017, ಬೆಂಗಳೂರು, ದಿನಾಂಕ 28–02–2018.

ದಿನಾಂಕ 27–04–1978 ರಿಂದ ಇಲ್ಲಿಯವರೆಗೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ) ವೃಂದದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 182 ಸೇನೆನಿ 2011, ದಿನಾಂಕ 06–05–2017 ರನ್ವಯ ಪರಿಷ್ಕರಿಸಿ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧದಲ್ಲಿ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗೆ ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಆಕ್ಷೇಪಣೆ ಸಲ್ಲಿಸತಕ್ಕದ್ದು. ಕಾಲಮಿತಿ ಮೀರಿ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/182/ಎಸ್.ಆರ್.ಆರ್/2011, ದಿನಾಂಕ 06–05–2017 ರನ್ವಯ ದಿನಾಂಕ 27–04–1978 ರಿಂದ ಇಲ್ಲಿಯವರೆಗೆ

ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ. ಸಂ	ಹಿರಿಯ ವೈದ್ಯಾಧಿಕಾರಿಯ ಹೆಸರು	ನೇರ ನೇಮಕಾತಿ / ಮುಂಬಡ್ತಿ / ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಜೇಷ್ಠತೆಗೆ / ನೇರ ನೇಮಕಾತಿಗೆ ಅರ್ಹ ದಿನಾಂಕ	ಷರಾ
1	2	3	4	5	6	7
1.	ಡಾ: ವಿಜಯ್‌ಕುಮಾರ್ ಎನ್. ಬಿ. ನಾಯಕ್	ಮುಂಬಡ್ತಿ	30–05–1951	20–11–1975	22–05–2001	ವಯೋನಿವೃತ್ತಿ
2.	ಡಾ: ಆರ್. ಶಾಂತಕುಮಾರಿ	ಮುಂಬಡ್ತಿ	20–09–1953	04–07–1986	13–04–1989	ವಯೋನಿವೃತ್ತಿ
3.	ಡಾ: ಎಸ್. ರಮೇಶ್	ಮುಂಬಡ್ತಿ	18–12–1954	31–03–1981	11–06–2003	ವಯೋನಿವೃತ್ತಿ
4.	ಡಾ: ಸಿ.ಬಿ. ನಂಜರಾಜು	ಮುಂಬಡ್ತಿ	21–07–1960	29–10–1986	20–01–2005	ಉಪನಿರ್ದೇಶಕರು (ಹೋ) ಕಾರ್ಯನಿರ್ವಹಿಸುತ್ತಿದ್ದಾರೆ
5.	ಡಾ: ಪಿ. ಎಂ. ಹೂಲಿಕಂತಿ ಮಠ್ಯ	ಮುಂಬಡ್ತಿ	07–05–1948	18–04–1972		ವಯೋನಿವೃತ್ತಿ
6.	ಡಾ: ನಳಿನಿ	ಮುಂಬಡ್ತಿ	17–03–1952	29–10–1986	28–01–2005	ವಯೋನಿವೃತ್ತಿ

7.	ಡಾ: ಹೆಚ್. ಜಿ. ಮಂಜುನಾಥ್ ಕುಮಾರ್	ಮುಂಬಡ್ತಿ	22–07–1962	19–03–1987	24–01–2005	
8.	ಡಾ: ಭಾರತಿ ಹಿರೇಮಠ್	ಮುಂಬಡ್ತಿ	15–10–1965	14–12–190	26–01–2005	
9.	ಡಾ: ಮೂಗಿ ಶೈಲಾ ಗಿರೀಶ್	ಮುಂಬಡ್ತಿ	22–07–1967	09–09–1995	09–08–2006	
10.	ಡಾ: ಸುರೇಶ್ ದುರ್ಗಪ್ಪ ದಡವಡೆ	ಮುಂಬಡ್ತಿ	14–04–1961	10–09–1995	11–02–2005	
11.	ಡಾ: ಎನ್.ಎಂ. ಪಾಟೀಲ್	ಮುಂಬಡ್ತಿ	02–02–1956	03–11–1992	27–08–1997	ವಯೋನಿವೃತ್ತಿ
12.	ಡಾ: ಮಹಮದ್ ಅಪ್ತಾಬ್ ವಾಸೀಮ್	ಮುಂಬಡ್ತಿ	11–04–1962	11–09–1995	27–08–1997	
13.	ಡಾ: ಗಿರಿಜಾ ಎಸ್.ಯು.	ಮುಂಬಡ್ತಿ	26–09–1965	13–09–1995	27–08–1997	
14.	ಡಾ: ಗಂಗನಾಳ ಎ.ಡಿ	ಮುಂಬಡ್ತಿ	10–06–1960	04–09–1995	27–08–1997	
15.	ಡಾ: ಶಾಂತಲಾ ಎಸ್.	ಮುಂಬಡ್ತಿ	12–06–1968	01–09–1995	27–08–1997	
16.	ಡಾ: ಬಿ.ವಿ. ರಜನಿ	ಮುಂಬಡ್ತಿ	02–04–1962	05–09–1995	27–08–1997	
17.	ಡಾ: ಜಿ. ಮಹಾದೇವ	ಮುಂಬಡ್ತಿ	03–05–1961	11–09–1995	27–08–1997	
18.	ಡಾ: ಸೈಯದ್ ಇಸ್ಮಾಯಿಲ್ ಅಬ್ದುಲ್ ರಜಾಕ್	ಮುಂಬಡ್ತಿ	21–09–1971	12–08–1998	12–08–1998	
19.	ಡಾ: ಬಸವಣ್ಣಪ್ಪ ಆದಿ ಸಂಗಪ್ಪ	ಮುಂಬಡ್ತಿ	19–06–1971	13–08–1998	13–08–1998	
20.	ಡಾ: ಕೃಷ್ಣ ಶೃಂಗಾರ ತೋಟ	ಮುಂಬಡ್ತಿ	21–11–1968	12–08–1998	12–08–1998	
21.	ಡಾ: ಹೆಚ್.ವಿಶ್ವನಾಥ ಶೆಟ್ಟಿ	ಮುಂಬಡ್ತಿ	01–10–1971	15–08–1998	15–08–1998	–
22.	ಡಾ: ಅಶ್ವಥ್ ನಾರಾಯಣ	ಮುಂಬಡ್ತಿ	01–02–1968	12–08–1998	12–08–1998	–
23.	ಡಾ: ಪ್ರಸನ್ನ ಹೆಚ್. ಎಸ್.	ಮುಂಬಡ್ತಿ	11–06–1971	07–10–1996	07–10–1996	–
24.	ಡಾ: ಯಡ್ರಾಮಿ	ಮುಂಬಡ್ತಿ	01–06–1958	04–09–1995	04–09–1995	ಹಿರಿಯ ವೈದ್ಯಾಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಿ, ಸರ್ಕಾರಿ ಆದೇಶ ಸಂಖ್ಯೆ: ಆಕುಕ/ 542/ ಪಿಐಎಂ/2015, ದಿನಾಂಕ: 04–06–2016 ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 295884/2014 ರಲ್ಲಿ ನೀಡುವ ತೀರ್ಪಿಗೆ ಒಳಪಟ್ಟಿರುತ್ತದೆ.
25.	ಡಾ: ಭಾರತಿ ಹಿರೇಮಠ	ಮುಂಬಡ್ತಿ	15–10–1965	14–12–1990	14–12–1990	ಹಿರಿಯ ವೈದ್ಯಾಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಿ, ಸರ್ಕಾರಿ ಆದೇಶ ಸಂಖ್ಯೆ: ಆಕುಕ/ 449/ ಪಿಐಎಂ/2013, ದಿನಾಂಕ: 24–06–2013 ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಿದ್ದು, ರಾಜ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ: 5127/2013 ರಲ್ಲಿ ನೀಡುವ ತೀರ್ಪಿಗೆ ಒಳಪಟ್ಟಿರುತ್ತದೆ.
26.	ಡಾ: ಸುರೇಶ್ ದುರ್ಗಪ್ಪ ದೊಡ್ಡವಾಡ	ಮುಂಬಡ್ತಿ	14–04–1961	04–09–1995	04–09–1995	
27.	ಡಾ: ಮೀನಾಕ್ಷಿ ಎಸ್. ರತ್ನ ಹೊನ್ನಾದ್	ಮುಂಬಡ್ತಿ	08–01–1961	13–08–1998	13–08–1998	
28.	ಡಾ: ಮಹಮ್ಮದ್ ಅಪ್ತಾಬ್ ವಾಸೀಮ್	ಮುಂಬಡ್ತಿ	11–04–1962	11–09–1995	11–09–1995	
29.	ಡಾ: ತಿಮ್ಮಾರೆಡ್ಡಿ ಸಂಜೀವ್‌ರೆಡ್ಡಿ	ಮುಂಬಡ್ತಿ	10–10–1965	29–01–2004	29–01–2004	

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಮಂಗಳವಾರ, ಮಾರ್ಚ್ ೬, ೨೦೧೮ (ಫಾಲ್ಗುಣ ೧೫, ಶಕ ವರ್ಷ ೧೯೩೯)	ನಂ. ೩೪೭
Part–III	Bengaluru, Tuesday, March 6, 2018 (Phalguna 15, Shaka Varsha 1939)	No. 347

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 172 ಪಿಐಎಂ 2017, ಬೆಂಗಳೂರು, ದಿನಾಂಕ 28–02–2018.

ದಿನಾಂಕ 27–04–1978 ರಿಂದ ಇಲ್ಲಿಯವರೆಗೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ವೃಂದದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 182 ಸೇನೆನಿ 2011, ದಿನಾಂಕ 06–05–2017 ರನ್ವಯ ಪರಿಷ್ಕರಿಸಿ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧದಲ್ಲಿ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗೆ ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಆಕ್ಷೇಪಣೆ ಸಲ್ಲಿಸತಕ್ಕದ್ದು. ಕಾಲಮಿತಿ ಮೀರಿ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/182/ಎಸ್.ಆರ್.ಆರ್/2011, ದಿನಾಂಕ 06–05–2017 ರನ್ವಯ ದಿನಾಂಕ 27–04–1978 ರಿಂದ ಇಲ್ಲಿಯವರೆಗೆ

ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ.ಸಂ	ವೈದ್ಯಾಧಿಕಾರಿಯ ಹೆಸರು	ನೇರ ನೇಮಕಾತಿ / ಮುಂಬಡ್ತಿ / ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಜೇಷ್ಠತೆಗೆ / ನೇರ ನೇಮಕಾತಿಗೆ ಅರ್ಹ ದಿನಾಂಕ	ಷರಾ
1	2	3	4	5	6	7
1.	ಡಾ: ಶ್ರೀನಿವಾಸ್ ರೆಡ್ಡಿ	ಮುಂಬಡ್ತಿ	07–09–1948	06–08–1976	06–08–1976	ವಯೋನಿವೃತ್ತಿ
2.	ಡಾ: ರಾಮರಾವ್	ಮುಂಬಡ್ತಿ	11–06–1951	09–02–1980	09–02–1980	ವಯೋನಿವೃತ್ತಿ
3.	ಡಾ: ವಿ.ಪಿ. ಸತೀಶ್	ಮುಂಬಡ್ತಿ	21–03–1959	30–10–1986	30–10–1986	–

ಕ್ರ.ಸಂ	ವೈದ್ಯಾಧಿಕಾರಿಯ ಹೆಸರು	ನೇರ ನೇಮಕಾತಿ / ಮುಂಬಡ್ತಿ / ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಜೇಷ್ಠತೆಗೆ / ನೇರ ನೇಮಕಾತಿಗೆ ಅರ್ಹ ದಿನಾಂಕ	ಷರಾ
1	**2**	**3**	**4**	**5**	**6**	**7**
4.	ಡಾ: ಜ್ಯೋತಿ ಗಣಪತಿ ಭಟ್	ಮುಂಬಡ್ತಿ	20–05–1966	09–10–1991	20–04–2006	–
5.	ಡಾ: ಎಸ್. ಹರಿಗಣೇಶ್	ಮುಂಬಡ್ತಿ	30–05–1965	25–01–1992	04–04–2006	–
6.	ಡಾ: ಹರೀಶ್ ಬಾಬು	ನೇ.ನೇ	01–05–1973	03–09–2009	03–09–2009	–

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಮಂಗಳವಾರ, ಮಾರ್ಚ್ ೬, ೨೦೧೮ (ಫಾಲ್ಗುಣ ೧೫, ಶಕ ವರ್ಷ ೧೯೩೯)	ನಂ. ೩೪೮
Part–III	Bengaluru, Tuesday, March 6, 2018 (Phalguna 15, Shaka Varsha 1939)	No. 348

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 173 ಪಿಐಎಂ 2017, ಬೆಂಗಳೂರು, ದಿನಾಂಕ 28–02–2018.

ದಿನಾಂಕ 27–04–1978 ರಿಂದ ಇಲ್ಲಿಯವರೆಗೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಯುನಾನಿ) ವೃಂದದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 182 ಸೇನೆನಿ 2011, ದಿನಾಂಕ 06–05–2017 ರನ್ವಯ ಪರಿಷ್ಕರಿಸಿ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧದಲ್ಲಿ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗೆ ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಆಕ್ಷೇಪಣೆ ಸಲ್ಲಿಸತಕ್ಕದ್ದು. ಕಾಲಮಿತಿ ಮೀರಿ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/182/ಎಸ್.ಆರ್.ಆರ್/2011, ದಿನಾಂಕ 06–05–2017 ರನ್ವಯ ದಿನಾಂಕ 27–04–1978 ರಿಂದ ಇಲ್ಲಿಯವರೆಗೆ

ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಯುನಾನಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ.ಸಂ	ಹಿರಿಯ ವೈದ್ಯಾಧಿಕಾರಿಯ ಹೆಸರು	ನೇರ ನೇಮಕಾತಿ / ಮುಂಬಡ್ತಿ / ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಜೇಷ್ಠತೆಗೆ / ನೇರ ನೇಮಕಾತಿಗೆ ಅರ್ಹ ದಿನಾಂಕ	ಷರಾ
1	2	3	4	5	6	7
1.	ಡಾ: ಜಯೀರುನ್ನಿಸಾ	ಮುಂಬಡ್ತಿ	04–03–1949	01–05–1973	04–07–1986	ವಯೋನಿವೃತಿ
2.	ಡಾ: ಸೈಯಾದ್ ಷಾ ರಹಮತ್ತುಲ್ಲಾ ಹುಸೇನಿ	ಮುಂಬಡ್ತಿ	09–03–1949	01–05–1973	04–07–1986	ವಯೋನಿವೃತಿ
3.	ಡಾ.ಗೌಸಿಯ ತಾಜ್ ಖುರೇಶಿ	ಮುಂಬಡ್ತಿ	01–05–1952	22–07–1978	04–07–1986	ವಯೋನಿವೃತಿ
4.	ಡಾ: ಮಹಮ್ಮದ್ ಅಮೀರುದ್ದಿನ್	ಮುಂಬಡ್ತಿ		19–11–1975	04–07–1986	ವಯೋನಿವೃತಿ
5.	ಡಾ.ಖಲೀಲುರ್ ರೆಹಮಾನ್	ಮುಂಬಡ್ತಿ	01–07–1952	22–08–1979	04–07–1986	–"–
6.	ಡಾ. ಎನ್.ರಫಿಯಾ ಬೇಗಂ	ಮುಂಬಡ್ತಿ	04–05–1955	21–07–1981	04–07–1986	–"–

7.	ಡಾ. ಸೈಯದ್ ತಾಜುದಿನ್ ಅಹಮ್ಮದ್ ಖಾದ್ರಿ	ಮುಂಬಡ್ತಿ	01–09–1959	24–07–1981	04–07–1986	ಕಡ್ಡಾಯ ನಿವೃತ್ತಿ
8.	ಡಾ॥ ಹಫೀಜ್ ಅಶ್ವಾಕ್ ಅಹಮ್ಮದ್	ಮುಂಬಡ್ತಿ	06–04–1956	27–07–1981	04–07–1986	–"–
9.	ಡಾ॥ ಆಶಿಯಾ ಬೇಗಂ	ಮುಂಬಡ್ತಿ	05–03–1949	27–09–1978	04–07–1986	ವಯೋನಿವೃತ್ತಿ
10.	ಡಾ: ಎ.ಎಂ. ರಫಮತುಲ್ಲಾ ಷರೀಫ್	ಮುಂಬಡ್ತಿ	29–05–1958	22–10–1986	22–10–1986	Left service
11.	ಡಾ॥ ಉಮ್ರಾಜ್ ಮುಬೀಂ	ಮುಂಬಡ್ತಿ	01–06–1959	22–10–1986	22–10–1986	–
12.	ಡಾ॥ ಕೈಸರ್ ಪರ್ವೀನ್	ಮುಂಬಡ್ತಿ	25–12–1959	22–10–1986	10–08–2005	
13.	ಡಾ: ಫೈಯಾಸ್ ಅಹಮದ್ ಷರೀಫ್	ಮುಂಬಡ್ತಿ	03–03–1951	23–10–1986	23–10–1986	Left service
14.	ಡಾ: ಯು. ಸನಾವುಲ್ಲಾ	ಮುಂಬಡ್ತಿ	25–12–1959	22–10–1986	22–10–1986	ಉಪನಿರ್ದೇಶಕರ ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ.
15.	ಡಾ॥ ಸಯೀದಾ ಯಾಸ್ಮಿನ್	ಮುಂಬಡ್ತಿ	24—8–1962	23–10–1986	6–1–2016	
16.	ಡಾ: ರೂಹಿ ಜಮಾನ್	ಮುಂಬಡ್ತಿ	07–04–1962	24–10–1986	24–10–1986	Left service
17.	ಡಾ: ಮಹಮದ್ ನೂರುಲ್ಲಾ	ಮುಂಬಡ್ತಿ	01–07–1956	28–10–1986	28–10–1986	ವಯೋನಿವೃತ್ತಿ
18.	ಡಾ॥ ಖತೀಜಾ ಸುಲ್ತಾನ	ಮುಂಬಡ್ತಿ	29–6–1962	20–10–1986	6–1–2016	
19.	ಡಾ॥ ಪಿ.ಎಂ ಇಂದುಮತಿ	ಮುಂಬಡ್ತಿ	31–12–1961	23–10–1986	6–1–2016	
20.	ಡಾ॥ ಶೇಖ್ ಮುಸ್ತಾಕ್ ಅಹಮ್ಮದ್	ಮುಂಬಡ್ತಿ	09–02–1961	27–10–1986	27–08–1997	Dismissed
21.	ಡಾ॥ ಷಹಜಮನಿ ಕುಬ್ರಾ	ಮುಂಬಡ್ತಿ	12–1–1959	30–10–1986	27–08–1997	
22.	ಡಾ॥ ನಿಶಾದ್ ಅಫ್ರೋಜ್	ಮುಂಬಡ್ತಿ	07–03–1967	30–10–1986	27–08–1997	Dismissed
23.	ಡಾ॥ ಎ.ಎಸ್. ಸೈಯ್ಯದ್	ಮುಂಬಡ್ತಿ	25–9–1962	28–08–1986	27–08–1997	
24.	ಡಾ॥ ಸಯೀದಾ ನಾಜ್ ಪರ್ವೀನ್ ಬಾನು	ಮುಂಬಡ್ತಿ	20–10–1960	09–02–1987	27–08–1997	
25.	ಡಾ: ಸೈಯದ್ ಅಬ್ದುಲ್ ಗಫಾರ್	ಮುಂಬಡ್ತಿ	14–05–1958	24–10–1986	24–10–1986	Death
26.	ಡಾ॥ ಲತೀಪಾ ಅಹಮದ್ ಜಿ ಇಂಡಿಕರ್	ಮುಂಬಡ್ತಿ	27–07–1958	30–10–1986	30–10–1986	Left service
27.	ಡಾ॥ ಮಿರ್ಜಾ ಸಿಕಂದರ್ ಬೇಗ್	ಮುಂಬಡ್ತಿ	5–2–1957	26–10–1986	27–08–1997	ವಯೋನಿವೃತ್ತಿ
28.	ಡಾ॥ ಸಯೀದಾ ನಿಲೋಫರ್ ಪಾಪು	ಮುಂಬಡ್ತಿ	25–11–1962	22–10–1986	27–08–1997	ಸ್ವಇಚ್ಛಾ ನಿವೃತ್ತಿ
29.	ಡಾ॥ ನರ್ಗಿಸ ಐಶಾ	ಮುಂಬಡ್ತಿ	30–07–1962	27–10–1986	06–01–2016	
30.	ಡಾ॥ ಸಮೀರಾ ಸುಲ್ತಾನ	ಮುಂಬಡ್ತಿ	30–07–1962	27–10–1986	06–01–2016	

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಗುರುವಾರ, ಮಾರ್ಚ್ ೮, ೨೦೧೮ (ಫಾಲ್ಗುಣ ೧೭, ಶಕ ವರ್ಷ ೧೯೩೯)	ನಂ. ೩೬೦
Part–III	**Bengaluru, Thursday, March 8, 2018 (Phalguna 17, Shaka Varsha 1939)**	**No. 360**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 71 ಐಎಂಎಂ 2017, ಬೆಂಗಳೂರು ದಿನಾಂಕ:26.02.2018

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಎಸ್.ಆರ್.ಆರ್. 2011 ದಿನಾಂಕ:06–05–2017 ರನ್ವಯ ಪರಿಷ್ಕರಿಸಿದ ಔಷಧ ನಿಯಂತ್ರಣ ಇಲಾಖೆಯಲ್ಲಿನ ಔಷಧ ನಿಯಂತ್ರಕ ಹುದ್ದೆಯ (ವೇತನ ಶ್ರೇಣಿ ರೂ.48900–63600) ದಿನಾಂಕ: 27–04–1978ರಿಂದ 06–05–2017ವರೆಗಿನ ಪರಿಷ್ಕೃತ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ **ಸಂಖ್ಯೆ: ಆಕುಕ 71 ಐಎಂಎಂ 2017 ದಿನಾಂಕ:30.11.2017 ರಂದು** ಅನುಬಂಧದಲ್ಲಿ ಪ್ರಕಟಿಸಿ ಭಾದಿತರಿಂದ ಆಕ್ಷೇಪಣೆಗಳನ್ನು 30 ದಿನಗಳೊಳಗಾಗಿ ಸಲ್ಲಿಸುವಂತೆ ಆಹ್ವಾನಿಸಲಾಗಿತ್ತು. ಆದರೆ ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ನಿಗದಿತ ಕಾಲಾವಧಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಸರ್ಕಾರವು ಪರಿಶೀಲಿಸಿ, ಔಷಧ ನಿಯಂತ್ರಣ ಇಲಾಖೆಯ ಔಷಧ ನಿಯಂತ್ರಕ ವೃಂದದ ಅಧಿಕಾರಿಗಳ ಅಂತಿಮ ಜೇಷ್ಟತಾ ಪಟ್ಟಿಯನ್ನು ದಿನಾಂಕ: 06.05.2017ರಲ್ಲಿದ್ದಂತೆ ಅನುಬಂಧ 01 ರಲ್ಲಿ ನಮೂದಿಸಿರುವಂತೆ ಪ್ರಕಟಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
70	ಶಿರೋನಾಮೆ 9983 ಅಥವಾ ಶಿರೋನಾಮೆ 9985 or ಶಿರೋನಾಮೆ 9992	ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಮಂತ್ರಾಲಯದ ತರಬೇತಿ ಡೈರಕ್ಟರ್ ಜನರಲ್‌ರಿಂದ ಕೇಂದ್ರೀಯ ಪಟ್ಟಿಯಲ್ಲಿ ಸೇರಿಸಿದ ಮೌಲ್ಯಮಾಪನ ನಿಕಾಯಗಳಿಂದ ಕೌಶಲ್ಯ ಅಭಿವೃದ್ಧಿ ಉಪಕ್ರಮ ಯೋಜನೆಯ ಅಡಿಯಲ್ಲಿ ಮೌಲ್ಯಮಾಪನ ರೂಪದ ಸೇವೆಗಳು.	ಇಲ್ಲ	ಇಲ್ಲ
71	ಶಿರೋನಾಮೆ 9992	ಭಾರತ ಸರ್ಕಾರದ, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಅನುಷ್ಠಾನಗೊಳಿಸಿದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಅಡಿಯಲ್ಲಿ ತರಬೇತಿ ಒದಗಿಸುವವರಿಂದ (ಯೋಜನೆ ಅನುಷ್ಠಾನ ಏಜೆನ್ಸಿಗಳು), ರಾಷ್ಟ್ರೀಯ ವೃತ್ತಿಪರ ತರಬೇತಿ ಪರಿಷತ್‌ನಿಂದ ಪ್ರಮಾಣೀಕೃತವಾದ ಕೌಶಲ್ಯ ಅಥವಾ ವೃತ್ತಿಪರ ತರಬೇತಿ ಕೋರ್ಸ್‌ನ್ನು ನಡೆಸುವುದರ ಮೂಲಕ ಒದಗಿಸುವ ಸೇವೆಗಳು.	ಇಲ್ಲ	ಇಲ್ಲ
72	ಶಿರೋನಾಮೆ 9992	ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶಕ್ಕೆ ಯಾವುದೇ ತರಬೇತಿ ಯೋಜನೆಯ ಅಡಿಯಲ್ಲಿ ಒದಗಿಸಿದ ಸೇವೆಗಳು, ಅದರ ಸಂಪೂರ್ಣ ವೆಚ್ಚವು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶದಿಂದ ಭರಿಸಲ್ಪಟ್ಟಿರುತ್ತದೆ.	ಇಲ್ಲ	ಇಲ್ಲ
73	ಶಿರೋನಾಮೆ 9993	ಬಳ್ಳಿ ರಕ್ತ ಬ್ಯಾಂಕುಗಳಿಂದ, ಕಾಂಡಕೋಶಗಳ (ಸ್ಟೆಂ) ಸಂರಕ್ಷಣೆ ಸೇವೆಗಳು ಅಥವಾ ಅಂಥ ಸಂರಕ್ಷಣೆಗೆ ಸಂಬಂಧಿಸಿದ ಯಾವುದೇ ಇತರ ಸೇವೆಗಳನ್ನು ಒದಗಿಸುವುದು.	ಇಲ್ಲ	ಇಲ್ಲ
74	ಶಿರೋನಾಮೆ 9993	(ಎ) ಕ್ಲಿನಿಕ್ ಕಾರ್ಯಸ್ಥಳಗಳು, ಪ್ರಾಧಿಕೃತ ವೈದ್ಯಕೀಯ ವೃತ್ತಿಗಾರರು ಅಥವಾ ಪ್ಯಾರಾ–ಮೆಡಿಕ್‌ಗಳಿಂದ ಆರೋಗ್ಯ ಆರೈಕೆ ಸೇವೆಗಳು; (ಬಿ) ಮೇಲ್ಕಂಡ (ಎ)ನಲ್ಲಿ ನಿರ್ದಿಷ್ಟಪಡಿಸಿರುವುಗಳನ್ನು ಹೊರತುಪಡಿಸಿದಂತೆ, ಒಂದು ಆಂಬ್ಯುಲೆನ್ಸ್‌ನಲ್ಲಿ ರೋಗಿಯನ್ನು ಸಾಗಿಸುವ ಮೂಲಕ ಒದಗಿಸುವ ಸೇವೆಗಳು.	ಇಲ್ಲ	ಇಲ್ಲ
75	ಶಿರೋನಾಮೆ 9994	ಸಾಮಾನ್ಯ ಜೈವಿಕ–ವೈದ್ಯಕೀಯ ತ್ಯಾಜ್ಯದ ಸಂಸ್ಕರಣಾ ಸೌಲಭ್ಯದ ನಿರ್ವಾಹಕರು ಕ್ಲಿನಿಕ್ ಕಾರ್ಯಸ್ಥಳಗಳಿಗೆ ಜೈವಿಕ–ವೈದ್ಯಕೀಯ ತ್ಯಾಜ್ಯದ ಚಿಕಿತ್ಸೆ ಅಥವಾ ವಿಲೇವಾರಿ ಅಥವಾ ಅದಕ್ಕೆ ಪ್ರಾಸಂಗಿಕವಾದ ಸಂಸ್ಕರಣಾ ರೂಪದಲ್ಲಿ ಒದಗಿಸಿದ ಸೇವೆಗಳು.	ಇಲ್ಲ	ಇಲ್ಲ
76	ಶಿರೋನಾಮೆ 9994	ಸ್ನಾನಗೃಹಗಳು, ಶುಚಿಗೃಹಗಳು, ಪಾಯಿಖಾನೆಗಳು, ಮೂತ್ರಾಲಯ ಅಥವಾ ಶೌಚಾಲಯಗಳ ಸೌಲಭ್ಯದಂಥ ಮುಂತಾದ ಸಾರ್ವಜನಿಕ ಅನುಕೂಲಕ್ಕಾಗಿ ಒದಗಿಸಿದ ಸೇವೆಗಳು.	ಇಲ್ಲ	ಇಲ್ಲ
77	ಶಿರೋನಾಮೆ 9995	ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾಗಿರುವ ಒಂದು ಅನಿಗಮಿತ ನಿಕಾಯ ಅಥವಾ ಲಾಭೇತರ ಎಂಟಿಟಿಯಿಂದ ಕೆಳಕಂಡಂತೆ, ತನ್ನ ಸದಸ್ಯರಿಗೆ ಚಾರ್ಜುಗಳ ಮರುಪಾವತಿ ಅಥವಾ ಕೊಡುಗೆಯಲ್ಲಿನ ಪಾಲುಗಳ ಮೂಲಕ ಒದಗಿಸಿದ ಸೇವೆಗಳು– (ಎ) ವ್ಯಾಪಾರದ ಒಕ್ಕೂಟವಾಗಿ;	ಇಲ್ಲ	ಇಲ್ಲ

ಕ್ರ.ಸಂ.	ಅಧ್ಯಾಯ, ಪ್ರಕರಣ ಅಥವಾ	ಸೇವೆಗಳ ವಿವರ	ದರ (ಶೇಕಡ)	ಪರತ್ತು
(1)		(3)	(4)	(5)
		(ಬಿ) ಸರಕು ಮತ್ತು ಸೇವೆಗಳ ತೆರಿಗೆ ವಿಧಿಸುವಿಕೆಯಿಂದ ವಿನಾಯಿತಿ ಪಡೆದಿರುವ ಯಾವುದೇ ಚಟುವಟಿಕೆಯನ್ನು ನೆರವೇರಿಸುವುದಕ್ಕಾಗಿ ಅವಕಾಶ ಮಾಡಿಕೊಡಲು; (ಸಿ) ಹೌಸಿಂಗ್ ಸೊಸೈಟಿ ಅಥವಾ ವಸತಿ ಸಮುಚ್ಛಯಗಳಲ್ಲಿ ತನ್ನ ಸದಸ್ಯರ ಸಾಮಾನ್ಯ ಬಳಕೆಗಾಗಿ ಮೂರನೇ ವ್ಯಕ್ತಿಯಿಂದ ಸರಕು ಅಥವಾ ಸೇವೆಗಳನ್ನು ಪಡೆದುಕೊಳ್ಳಲು ಪ್ರತಿ ಸದಸ್ಯನಿಗೆ ಪ್ರತಿ ತಿಂಗಳಿಗೆ ಐದು ಸಾವಿರ ರೂಪಾಯಿಗಳ ಮೊತ್ತದ ವರೆಗೆ.		
78	ಶಿರೋನಾಮೆ 9996	ಒಬ್ಬ ಕಲಾವಿದನಿಂದ ಕೆಳಕಂಡವುಗಳ ಜಾನಪದ ಅಥವಾ ಶಾಸ್ತ್ರೀಯ ಕಲಾ ರೂಪಗಳಲ್ಲಿನ ಪ್ರದರ್ಶನದ ಮೂಲಕ ಒದಗಿಸುವ ಸೇವೆಗಳು– (ಎ) ಸಂಗೀತ, ಅಥವಾ (ಬಿ) ನೃತ್ಯ, ಅಥವಾ (ಸಿ) ರಂಗಪ್ರದರ್ಶನ, ಅಂಥ ಪ್ರದರ್ಶನಕ್ಕೆ ವಿಧಿಸಲಾದ ಪ್ರತಿಫಲ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿರದಿದ್ದರೆ: ಪರಂತು ಈ ವಿನಾಯಿತಿಯು, ಅಂಥ ಕಲಾವಿದ ಬ್ರಾಂಡ್ ರಾಯಭಾರಿಯಾಗಿ ಒದಗಿಸಿದ ಸೇವೆಗಳಿಗೆ ಅನ್ವಯಿಸತಕ್ಕದ್ದಲ್ಲ.	ಇಲ್ಲ	ಇಲ್ಲ
79	ಶಿರೋನಾಮೆ 9996	ವಸ್ತು ಸಂಗ್ರಹಾಲಯ, ರಾಷ್ಟ್ರೀಯ ಉದ್ಯಾನವನ, ವನ್ಯಜೀವ ಅಭಯಾರಣ್ಯ, ಹುಲಿ ಮೀಸಲು ಅಥವಾ ಮೃಗಾಲಯಕ್ಕೆ ಪ್ರವೇಶದ ರೂಪದಲ್ಲಿ ಒದಗಿಸುವ ಸೇವೆಗಳು	ಇಲ್ಲ	ಇಲ್ಲ
[471][79ಎ	ಶಿರೋನಾಮೆ 9996	ಪ್ರಾಚೀನ ಸ್ಮಾರಕಗಳು, ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ 24) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ರಾಜ್ಯದ ಅಧಿನಿಯಮದ ಅಡಿಯಲ್ಲಿ ಹಾಗೆ ಘೋಷಿಸಲಾದ ಸಂರಕ್ಷಿತ ಸ್ಥಳಕ್ಕೆ ಪ್ರವೇಶ ರೂಪದ ಸೇವೆಗಳು	ಇಲ್ಲ	ಇಲ]
80	ಶಿರೋನಾಮೆ 9996	ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಮನರಂಜನಾ ಚಟುವಟಿಕೆಗಳಲ್ಲಿ ತರಬೇತಿ ಅಥವಾ ಕೋಚಿಂಗ್ ರೂಪದಲ್ಲಿ ಮೂಲಕ ಒದಗಿಸುವ ಸೇವೆಗಳು– (ಎ) ಕಲೆಗಳು ಅಥವಾ ಸಂಸ್ಕೃತಿ, ಅಥವಾ (ಬಿ)ಆದಾಯ ತೆರಿಗೆ ಅಧಿನಿಯಮದ ಪ್ರಕರಣ 12ಎಎ ಅಡಿಯಲ್ಲಿ ನೋಂದಾಯಿತವಾಗಿರುವ ಧರ್ಮಾರ್ಥ ಎಂಟಿಟಿಗಳು ನಡೆಸುವ ಕ್ರೀಡೆಗಳು.	ಇಲ್ಲ	ಇಲ್ಲ
81	ಶಿರೋನಾಮೆ 9996	ಕೆಳಕಂಡವುಗಳಿಗೆ ಪ್ರವೇಶದ ಹಕ್ಕಿನ ರೂಪದಲ್ಲಿ ಒದಗಿಸುವ ಸೇವೆಗಳು– (ಎ) ಸರ್ಕಸ್, ನೃತ್ಯ ಅಥವಾ ನಾಟಕ ಅಥವಾ ಬ್ಯಾಲೆಟ್‌ಗಳನ್ನು ಒಳಗೊಂಡಂತೆ ರಂಗಪ್ರದರ್ಶನ; (ಬಿ) ಪ್ರಶಸ್ತಿ ಸಮಾರಂಭ, ಸಂಗೀತ ಮೇಳ, ವೈಭವ ಉತ್ಸವ, ಸಂಗೀತ ಪ್ರದರ್ಶನ ಅಥವಾ ಮಾನ್ಯತೆ ಪಡೆದ ಕ್ರೀಡಾ ಕಾರ್ಯಕ್ರಮವನ್ನು ಹೊರತುಪಡಿಸಿದ ಯಾವುದೇ ಕ್ರೀಡಾ ಕಾರ್ಯಕ್ರಮ. (ಸಿ) ಮೇಲಿನ (ಎ), (ಬಿ) ಮತ್ತು (ಸಿ) ಯಲ್ಲಿ ಉಲ್ಲೇಖಿಸಿದಂತೆ, ಪ್ರವೇಶದ ಪ್ರತಿಫಲ ಪ್ರತಿ ವ್ಯಕ್ತಿಗೆ 250 ರೂಪಾಯಿಗಳಿಗಿಂತ ಹೆಚ್ಚಿರದಿದ್ದಲ್ಲಿ, ಮಾನ್ಯತೆ ಪಡೆದ ಕ್ರೀಡಾ ಕಾರ್ಯಕ್ರಮ.	ಇಲ್ಲ	ಇಲ್ಲ
[472][82	ಶಿರೋನಾಮೆ 9996	ಪೀಫ಼ ಯುವ್–17 ವಿಶ್ವ ಕಪ್ 2017ರ ಅಡಿಯಲ್ಲಿ ಆಯೋಜಿಸಿದ ಕಾರ್ಯಕ್ರಮಗಳಿಗೆ ಪ್ರವೇಶಿಸಿಸುವ ಹಕ್ಕಿನ ರೂಪದ ಸೇವೆಗಳು.	ಇಲ್ಲ	ಇಲ್ಲ

[471] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (47/2017) ದಿನಾಂಕ 14–11–2017ರ ಮೂಲಕ ದಿ.15–11–2017ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[472] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (25/2017) ದಿನಾಂಕ 21–09–2017ರ ಮೂಲಕ ಸೇರಿಸಲಾಗಿದೆ.

2. ಪರಿಭಾಷೆಗಳು. – ಈ ಅಧಿಸೂಚನೆಯ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, –

(ಎ) "ಜಾಹಿರಾತು" ಎಂದರೆ ಯಾವುದೇ ಕಾರ್ಯಕ್ರಮ, ವಿಚಾರ, ಸ್ಥಿರ ಸ್ವತ್ತು, ವ್ಯಕ್ತಿ, ಸೇವೆ, ಸರಕುಗಳು ಅಥವಾ ಕ್ರಮಾರ್ಹ ಕ್ಲೇಮಿನ ಬಗ್ಗೆ, ವರ್ತಮಾನ ಪತ್ರಿಕೆ, ದೂರದರ್ಶನ, ರೇಡಿಯೋ ಅಥವಾ ಯಾವುದೇ ಮೂಲಗಳ ಮೂಲಕ ಉತ್ತೇಜಿಸುವುದಕ್ಕಾಗಿ ಅಥವಾ ಅದರ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಯಾವುದೇ ರೂಪದ ಪ್ರಸ್ತುತಿ ಆದರೆ ವ್ಯಕ್ತಿಗತವಾಗಿ ಮಾಡಿದ ಯಾವುದೇ ಪ್ರಸ್ತುತಿಯನ್ನು ಒಳಗೊಳ್ಳುವುದಿಲ್ಲ.

(ಬಿ) "ನ್ಯಾಯವಾದಿ" ಎಂದರೆ ನ್ಯಾಯವಾದಿಗಳ ಅಧಿನಿಯಮ 1961ರ (1961ರ ಕೇಂದ್ರ ಅಧಿನಿಯಮ 25) ಪ್ರಕರಣ 2ರ ಉಪಪ್ರಕರಣ (1)ರ ಖಂಡ (ಎ)ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಸಿ) "ಕೃಷಿ ವಿಸ್ತರಣೆ" ಎಂದರೆ ಕೃಷಿಕರ ಶಿಕ್ಷಣ ಅಥವಾ ತರಬೇತಿಯ ಮೂಲಕ ಕೃಷಿ ಆಚರಣೆಗಳಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಜ್ಞಾನವನ್ನು ಅನ್ವಯಿಸುವುದಾಗಿದೆ;

(ಡಿ) "ಕೃಷಿ ಉತ್ಪನ್ನ" ಎಂದರೆ ಆಹಾರ, ನಾರು, ಇಂಧನ, ಕಚ್ಚಾ ಸಾಮಗ್ರಿ ಅಥವಾ ಇದೇ ರೀತಿಯ ಇತರೇ ಉತ್ಪನ್ನಗಳು ಅಥವಾ ಕೃಷಿ ಉತ್ಪನ್ನಗಳಿಗಾಗಿ ಬೆಳೆಗಳ ವ್ಯವಸಾಯ ಮತ್ತು ಕುದರೆಗಳ ಪಾಲನೆಯನ್ನು ಹೊರತುಪಡಿಸಿದ, ಎಲ್ಲಾ ಜೀವರಾಶಿ ಪ್ರಾಣಿಗಳ ಪಾಲನೆ ಮೂಲಕ ಪಡೆದ ಉತ್ಪನ್ನ, ಅವುಗಳ ಮೇಲೆ ಮುಂದವರೆದ ಹೆಚ್ಚಿನ ಸಂಸ್ಕರಣೆಯನ್ನು ಮಾಡಿರಬಾರದು ಅಥವಾ ಅಂಥ ಸಂಸ್ಕರಣೆಯು, ಬೇಸಾಯಗಾರ ಅಥವಾ ಉತ್ಪಾದಕ ವಾಡಿಕೆಯಲ್ಲಿ ಮಾಡುವಂತೆ, ಕೃಷಿ ಉತ್ಪನ್ನಗಳ ಅವಶ್ಯಕ ಗುಣಲಕ್ಷಣಗಳನ್ನು ಬದಲಿಸದಂತೆ, ಆದರೆ ಅದನ್ನು ಪ್ರಾಥಮಿಕ ಮಾರುಕಟ್ಟೆಗೆ ಮಾತ್ರ ಮಾರಾಟದಾಯಕವನ್ನಾಗಿಸುವುದಕ್ಕೆ ಆಗಿರಬೇಕು.

(ಇ) "ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಥವಾ ಮಂಡಳಿ" ಎಂದರೆ ಕೃಷಿ ಉತ್ಪನ್ನದ ಮಾರುಕಟ್ಟೆಯನ್ನು ನಿಯಂತ್ರಿಸುವ ಉದ್ದೇಶದಿಂದ ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯದ ಕಾನೂನಿನ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ಸಮಿತಿ ಅಥವಾ ಮಂಡಳಿ;

(ಎಫ್) "ವಿಮಾನ" ಎಂದರೆ ವಿಮಾನ ಅಧಿನಿಯಮ 1934ರ (1934ರ ಕೇಂದ್ರ ಅಧಿನಿಯಮ 22) ಪ್ರಕರಣ 2ರ ಖಂಡ (1)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಜಿ) "ವಿಮಾನ ನಿಲ್ದಾಣ" ಎಂದರೆ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧಿನಿಯಮ 1994ರ (1994ರ ಕೇಂದ್ರ ಅಧಿನಿಯಮ 55) ಪ್ರಕರಣ 2ರ ಖಂಡ (ಬಿ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಹೆಚ್) "ಅನುಮೋದಿತ ವೃತ್ತಿಪರ ಶಿಕ್ಷಣ ಕೋರ್ಸ್" ಎಂದರೆ,–

(i) ಪ್ರಶಿಕ್ಷು ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 52) ಅಡಿಯಲ್ಲಿ ಅಧಿಸೂಚಿಸಿದ ಗೊತ್ತುಪಡಿಸಿದ ವ್ಯಾಪಾರಗಳಲ್ಲಿ ಕೋರ್ಸ್‌ಗಳನ್ನು ನೀಡುವ, ರಾಷ್ಟ್ರೀಯ ವೃತ್ತಿಪರ ತರಬೇತಿ ಪರಿಷತ್ ಅಥವಾ ರಾಜ್ಯ ವೃತ್ತಿಪರ ತರಬೇತಿ ಪರಿಷತ್‌ನ ಸಂಯೋಜಿತ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ಕೈಗಾರಿಕಾ ತರಬೇತಿ ಕೇಂದ್ರದಿಂದ ನಡೆಸುತ್ತಿರುವ ಒಂದು ಕೋರ್ಸ್; ಅಥವಾ

(ii) ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಮಂತ್ರಾಲಯದ ತರಬೇತಿ ಡೈರಕ್ಟರೇಟ್ ಜನರಲ್‌ನಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿಯಿಂದ ನಡೆಸುತ್ತಿರುವ, ರಾಷ್ಟ್ರೀಯ ವೃತ್ತಿಪರ ತರಬೇತಿ ಪರಿಷತ್‌ನಿಂದ ಅನುಮೋದಿತವಾದ ಒಂದು ಮಾಡ್ಯುಲರ್ ಉದ್ಯೋಗದಾಯಕ ಕೌಶಲ್ಯ ಕೋರ್ಸ್.

(ಐ) "ಮದ್ಯಸ್ತಿಕೆ ನ್ಯಾಯಾಧಿಕರಣ" ಎಂದರೆ ಮದ್ಯಸ್ತಿಕೆ ಮತ್ತು ಸಂಧಾನ ಅಧಿನಿಯಮ 1996ರ (1996ರ ಕೇಂದ್ರ ಅಧಿನಿಯಮ 26) ಪ್ರಕರಣ 2ರ ಖಂಡ (ಡಿ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಜೆ) "ಪ್ರಾಧಿಕೃತ ವಿದೇಶಿ ವಿನಿಮಯ ವ್ಯಾಪಾರಿ" ಎಂದರೆ ವಿದೇಶಿ ವಿನಿಮಯ ನಿರ್ವಹಣಾ ಅಧಿನಿಯಮ 1999ರ (1999ರ ಕೇಂದ್ರ ಅಧಿನಿಯಮ 42) ಪ್ರಕರಣ 2ರ ಖಂಡ (ಸಿ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಕೆ) "ಪ್ರಾಧಿಕೃತ ವೈದ್ಯಕೀಯ ವೃತ್ತಿಗಾರ" ಎಂದರೆ ಭಾರತದಲ್ಲಿನ ಯಾವುದೇ ಕಾನೂನಿಂದ ಸ್ಥಾಪಿತವಾದ ಅಥವಾ ಅಂಗೀಕೃತವಾದ ಅಂಗೀಕೃತ ವೈದಕೀಯ ವ್ಯವಸ್ಥೆಯ ಯಾವುದೇ ಪರಿಷತ್‌ಗಳೊಂದಿಗೆ ನೋಂದಾಯಿತರಾದ ಒಬ್ಬ ವೈದ್ಯಕೀಯ ವೃತ್ತಿಗಾರ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ಭಾರತದಲ್ಲಿನ ಅಂಗೀಕೃತ ವೈದಕೀಯ ವ್ಯವಸ್ಥೆಯಲ್ಲಿ, ವೃತ್ತಿ ನಡೆಸಲು ಅವಶ್ಯಕವಾದ ಅರ್ಹತೆಯನ್ನು ಹೊಂದಿರುವ ಒಬ್ಬ ವೈದ್ಯಕೀಯ ವೃತ್ತಿನಿರತನನ್ನು ಒಳಗೊಳ್ಳುತ್ತದೆ.

(ಎಲ್) "ಬ್ಯಾಂಕಿಂಗ್ ಕಂಪನಿ" ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2) ಪ್ರಕರಣ 45ಎನ ಖಂಡ (ಎ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಎಮ್) "ಬ್ರಾಂಡ್ ರಾಯಭಾರಿ" ಎಂದರೆ, ಒಂದು ಬ್ರಾಂಡಿನ ಸರಕುಗಳು, ಸೇವೆಗಳು, ಸ್ವತ್ತು ಅಥವಾ ಕ್ರಮಾರ್ಹ ಕ್ಲೇಮನ್ನು ಪ್ರಚಾರ ಮಾಡುವುದು ಅಥವಾ ಮಾರುಕಟ್ಟೆ ಮಾಡುವುದು ಅಥವಾ ಯಾವುದೇ ವ್ಯಕ್ತಿಯ ಒಂದು ವ್ಯಾಪಾರದ ಹೆಸರು, ಲೋಗೊ ಅಥವಾ ಮನೆ ಗುರುತನ್ನು ಒಳಗೊಂಡ ಹೆಸರನ್ನು ಅನುಮೋದನೆ ಮಾಡುವುದರಲ್ಲಿ ತೊಡಗಿಕೊಂಡಿರುವ ಒಬ್ಬ ವ್ಯಕ್ತಿ;

(ಎನ್) "ವ್ಯವಹಾರ ಎಂಟಿಟಿ" ಎಂದರೆ, ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ವ್ಯಕ್ತಿ;

(ಒ) "ವ್ಯವಹಾರ ಆಯೋಜಕ ಅಥವಾ ವ್ಯವಹಾರ ವರದಿಗಾರ" ಎಂದರೆ, ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಹೊರಡಿಸಿದ ಮಾರ್ಗದರ್ಶೀ ಸೂತ್ರದ ಅಡಿಯಲ್ಲಿ ಒಂದು ಬ್ಯಾಂಕಿಂಗ್ ಕಂಪನಿ ಅಥವಾ ಒಂದು ವಿಮಾ ಕಂಪನಿಯಿಂದ ವ್ಯವಹಾರ ಆಯೋಜಕ ಮಾದರಿ ಅಥವಾ ವ್ಯವಹಾರ ವರದಿಗಾರ ಮಾದರಿಯ ಅಡಿಯಲ್ಲಿ ನೇಮಕವಾದ ಒಬ್ಬ ಮಧ್ಯವರ್ತಿ;

(ಪಿ) " ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ" ಎಂದರೆ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 54) ಪ್ರಕರಣ 3ರ ಅಡಿಯಲ್ಲಿ ಸ್ಥಾಪಿತವಾದ ಒಂದು ಪ್ರಾಧಿಕಾರ;

(ಕ್ಯೂ) " ಕೇಂದ್ರ ಪ್ರಸರಣ ಯುಟಿಲಿಟಿ"ಯು ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) ಪ್ರಕರಣ 2ರ ಖಂಡ (10)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಆರ್) " ಧರ್ಮಾರ್ಥ ಚಟುವಟಿಕೆಗಳು" ಎಂದರೆ ಕೆಳಕಂಡವುಗಳಿಗೆ ಸಂಬಂಧಿಸಿದ ಚಟುವಟಿಕೆಗಳು–

(i) ಕೆಳಕಂಡ ರೂಪದಲ್ಲಿನ ಸಾರ್ವಜನಿಕ ಆರೋಗ್ಯ

(ಎ) ಕೆಳಕಂಡವರುಗಳ ಆರೈಕೆ ಅಥವಾ ಆಪ್ತ ಸಮಾಲೋಚನೆ–

(I) ತೀವ್ರ ಅನಾರೋಗ್ಯದ ವ್ಯಕ್ತಿಗಳು ಅಥವಾ ತೀವ್ರವಾದ ದೈಹಿಕ ಅಥವಾ ಮಾನಸಿಕ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳು;

(II) ಹೆಚ್‌ಐವಿ ಅಥವಾ ಏಡ್ಸ್‌ನಿಂದ ಪೀಡಿತರಾದ ವ್ಯಕ್ತಿಗಳು

(III) ಮಾದಕ ದ್ರವ್ಯ ಔಷಧಗಳು ಅಥವಾ ಮದ್ಯಸಾರ ಮುಂತಾದ ಅವಲಂಬನೆಯನ್ನು–ರೂಪಿಸುವ ವಸ್ತುವಿಗೆ ವ್ಯಸನಿಯಾಗಿರುವ ವ್ಯಕ್ತಿಗಳು

(ಬಿ) ಆರೋಗ್ಯ ಕುಟುಂಬ ಯೋಜನೆ ಅಥವಾ ಹೆಚ್‌ಐವಿ ಸೋಂಕು ತಡೆಗಟ್ಟುವಿಕೆ ಬಗ್ಗೆ ಜನ ಜಾಗೃತಿ

(ii) ಧರ್ಮ, ಆಧ್ಯಾತ್ಮಿಕತೆ ಅಥವಾ ಯೋಗದ ಪ್ರಗತಿ;

(iii) ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಕಾರ್ಯಕ್ರಮಗಳು ಅಥವಾ ಕೌಶಲ್ಯ ಅಭಿವೃದ್ಧಿಯ ಪ್ರಗತಿ,–

(ಎ) ಪರಿತ್ಯಕ್ತ, ಅನಾಥ ಅಥವಾ ನಿರಾಶ್ರಿತ ಮಕ್ಕಳು;

(ಬಿ) ದೈಹಿಕವಾಗಿ ಅಥವಾ ಮಾನಸಿಕವಾಗಿ ದೌರ್ಜನ್ಯಕ್ಕೊಳಗಾದ ಮತ್ತು ಆಘಾತಕ್ಕೊಳಗಾದ ವ್ಯಕ್ತಿಗಳು;

(ಸಿ) ಕೈದಿಗಳು; ಅಥವಾ

(ಡಿ) ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ 65 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು.

(iv) ಜಲಾನಯನ ಪ್ರದೇಶ, ಅರಣ್ಯಗಳು ಮತ್ತು ವನ್ಯಜೀವಿಗಳನ್ನು ಒಳಗೊಂಡ ಪರಿಸರ ಸಂರಕ್ಷಣೆ;

(ಎಸ್) "ಕ್ಲಿನಿಕಲ್ ಕಾರ್ಯಸಂಸ್ಥೆ" ಎಂದರೆ ಅನಾರೋಗ್ಯ, ಗಾಯ, ವಿರೂಪತೆ, ಅಸಹಜತೆ ಅಥವಾ ಗರ್ಭದಾರಣೆಗಾಗಿ ಅಗತ್ಯವಿರುವ ರೋಗಪತ್ತೆ ಅಥವಾ ಚಿಕಿತ್ಸೆ ಅಥವಾ ಆರೈಕೆಯ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು, ಭಾರತದಲ್ಲಿ ಮಾನ್ಯತೆ ಪಡೆದ ಯಾವುದೇ ಔಷಧಗಳ ವ್ಯವಸ್ಥೆಯಲ್ಲಿ ನೀಡುವ, ಒಂದು ಆಸ್ಪತ್ರೆ, ನರ್ಸಿಂಗ್ ಹೋಮ್, ಕ್ಲಿನಿಕ್, ಆರೋಗ್ಯಧಾಮ ಅಥವಾ ಯಾವುದೇ ಹೆಸರಿನಿಂದ ಕರೆಯುವ ಇತರ ಸಂಸ್ಥೆ ಅಥವಾ ಕಾಯಿಲೆಗಳ ರೋಗಪತ್ತೆ ಅಥವಾ ಪರೀಕ್ಷಾತ್ಮಕ ಸೇವೆಗಳನ್ನು ನೆರವೇರಿಸುವ, ಒಂದು ಸ್ವತಂತ್ರ ಎಂಟಿಟಿಯಾಗಿ ಅಥವಾ ಒಂದು ಕಾರ್ಯಸಂಸ್ಥೆಯ ಭಾಗವಾಗಿ ಸ್ಥಾಪಿತವಾದ ಒಂದು ಸ್ಥಳ.

(ಟಿ) "ಹಂತದ ಸಾಗಾಣಿಕೆ ವಾಹನ"ವು ಮೋಟಾರು ವಾಹನ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ (7)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಯುವ್) "ಕೊರಿಯರ್ ಏಜೆನ್ಸಿ" ಎಂದರೆ, ಸಮಯ ಸಂವೇದನಾಶೀಲ ದಸ್ತಾವೇಜುಗಳು, ಸರಕುಗಳು ಅಥವಾ ಪರಿಕರಗಳನ್ನು, ಒಬ್ಬ ವ್ಯಕ್ತಿಯ ಸೇವೆಗಳನ್ನು ನೇರವಾಗಿಯಾದರೂ ಅಥವಾ ಪರೋಕ್ಷವಾಗಿಯಾದರೂ ಅಂಥ ದಸ್ತಾವೇಜುಗಳು, ಸರಕುಗಳು ಅಥವಾ ಪರಿಕರಗಳನ್ನು ಕೊಂಡೊಯ್ಯಲು ಅಥವಾ ಜೊತೆಯಲ್ಲೊಯ್ಯಲು ಬಳಸಿಕೊಂಡು, ಬಾಗಿಲಿನಿಂದ–ಬಾಗಿಲಿಗೆ ಸಾಗಿಸುವುದರಲ್ಲಿ ತೊಡಗಿಕೊಂಡಿರುವ ಯಾವುದೇ ವ್ಯಕ್ತಿ;

(ವಿ) "ಸೀಮಾ ಸುಂಕ ಠಾಣೆ"ಯು ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1962ರ (1962ರ ಕೇಂದ್ರ ಅಧಿನಿಯಮ 52) ಪ್ರಕರಣ 2ರ ಖಂಡ (13)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಡಬ್ಲ್ಯೂ) "ಘೋಷಿತ ದರ"ವು ಒಂದು ವಸತಿಯ ಘಟಕದಲ್ಲಿ (ವಾಸಕ್ಕಾಗಿ ಬಾಡಿಗೆ ಮೇಲೆ ನೀಡಿರುವುದು) ಒದಗಿಸಲಾದ, ಪೀಠೋಪಕರಣ, ಹವಾನಿಯಂತ್ರಣ, ರೆಫ್ರಿಜರೇಟರ್ ಅಥವಾ ಯಾವುದೇ ಇತರೇ ಸೌಕರ್ಯಗಳಂತಹ, ಎಲ್ಲಾ ಸೌಕರ್ಯಗಳಿಗೆ ವಿಧಿಸಲಾದ, ಆದರೆ ಅಂಥ ಘಟಕಕ್ಕಾಗಿ ಪ್ರಕಟಿಸಿದ ಚಾರ್ಜುಗಳ ಮೇಲೆ ನೀಡಲಾದ ಯಾವುದೇ ಸೋಡಿಯನ್ನು ಪ್ರತ್ಯೇಕಿಸದ ಚಾರ್ಜುಗಳನ್ನು ಒಳಗೊಳ್ಳುತ್ತದೆ;

(ಎಕ್ಸ್) "ಹಂಚಿಕೆದಾರ ಅಥವಾ ಮಾರಾಟದ ಏಜೆಂಟ್" ಎಂದರೆ, ಲಾಟರಿಗಳನ್ನು ಸಂಘಟಿತ ರಾಜ್ಯದ ಪರವಾಗಿ ಮಾರಾಟ ಮಾಡಲು ಒಂದು ಒಪ್ಪಂದದ ಮೂಲಕ, ಸಂಘಟನಾ ರಾಜ್ಯದಿಂದ ನೇಮಕ ಮಾಡಲಾದ ಒಬ್ಬ ವ್ಯಕ್ತಿ ಅಥವಾ ಒಂದು ಪಾಲುದಾರಿಕಾ ಸಂಸ್ಥೆ, ಕಾರ್ಪೊರೇಟ್ ಸಂಸ್ಥೆ ಅಥವಾ ಕಾನೂನಿನ ಅಡಿಯಲ್ಲಿನ ಇತರೇ ಕಾನೂನು ಸಮ್ಮತ ಎಂಟಿಟಿ;

(ವೈ) "ಶೈಕ್ಷಣಿಕ ಸಂಸ್ಥೆ" ಎಂದರೆ, ಕೆಳಕಂಡವುಗಳ ಮೂಲಕ ಸೇವೆಗಳನ್ನು ಒದಗಿಸುತ್ತಿರುವ ಒಂದು ಸಂಸ್ಥೆ,–

(i) ಶಾಲಾ–ಪೂರ್ವ ಶಿಕ್ಷಣ ಮತ್ತು ಉನ್ನತ ಮಾಧ್ಯಮಿಕ ಶಾಲೆ ಅಥವಾ ಸಮಾನಾಂತರ ಶಿಕ್ಷಣ;

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಮಾನ್ಯತೆ ಪಡೆದ ವಿದ್ಯಾರ್ಹತೆಯನ್ನು ಪಡೆಯುವುದಕ್ಕಾಗಿ ಪಠ್ಯವಸ್ತುವಿನ ಭಾಗವಾಗಿರುವ ಶಿಕ್ಷಣ;

(iii) ಒಂದು ಅನುಮೋದಿತ ವೃತ್ತಿಪರ ಶಿಕ್ಷಣ ಕೋರ್ಸ್‌ನ ಭಾಗವಾಗಿರುವ ಶಿಕ್ಷಣ.

(ಝಡ್) "ವಿದ್ಯುಚ್ಛಕ್ತಿ ಪ್ರಸರಣ ಅಥವಾ ವಿತರಣಾ ಯುಟಿಲಿಟಿ" ಎಂದರೆ, ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) ಅಡಿಯಲ್ಲಿ ಅಧಿಸೂಚಿತವಾದ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ; ರಾಜ್ಯ ವಿದ್ಯುಚ್ಛಕ್ತಿ ಮಂಡಳಿ; ಕೇಂದ್ರ ಪ್ರಸರಣ ಉಪಯುಕ್ತತೆ ಅಥವಾ ರಾಜ್ಯ ಪ್ರಸರಣ ಉಪಯುಕ್ತತೆ; ಅಥವಾ ಸದರಿ ಅಧಿನಿಯಮದ ಅಡಿಯಲ್ಲಿನ ಒಬ್ಬ ಹಂಚಿಕೆದಾರ ಅಥವಾ ಪ್ರಸರಣಾ ಪರವಾನಗಿದಾರ, ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದಿಂದ ಅಂಥ ಪ್ರಕಾರ್ಯಗಳನ್ನು ವಹಿಸಿಕೊಡಲಾದ ಇತರ ಎಂಟಿಟಿ

(ಝಡ್ಎ) "ಇ–ರಿಕ್ಷಾ" ಎಂದರೆ, ಬಾಡಿಗೆಗಾಗಿ ಅಥವಾ ಪರಿಶ್ರಮಧನಕ್ಕಾಗಿ, ಸರಕುಗಳನ್ನು ಅಥವಾ ಸಂದರ್ಭಾನುಸಾರವಾಗಿ, ಪ್ರಯಾಣಿಕರನ್ನು ಸಾಗಿಸುವುದಕ್ಕೋಸ್ಕರ, ಈ ಸಂಬಂಧದಲ್ಲಿ ನಿಯಮಿಸಬಹದಾದ ಅಂಥ ವಿಶೇಷಣಗಳಿಗೆ ಅನುಸಾರವಾಗಿ ತಯಾರಿಸಿದ, ನಿರ್ಮಿಸಿದ ಅಥವಾ ಅಳವಡಿಸಿಕೊಂಡ, ಸುಸಜ್ಜಿತವಾದ ಮತ್ತು ನಿರ್ವಹಿಸಿದ ಮೂರು ಚಕ್ರಗಳನ್ನು ಹೊಂದಿರುವ, 4000 ವ್ಯಾಟ್‌ಗಳ ಶಕ್ತಿಯನ್ನು ಮೀರದ ವಿಶೇಷ ಉದ್ದೇಶದ ಬ್ಯಾಟರಿಚಾಲಿತ ವಾಹನ,

(ಝಡ್ಬಿ) "ಸಾಮಾನ್ಯ ವಿಮಾ ವ್ಯವಹಾರ"ವು, ಸಾಮಾನ್ಯ ವಿಮಾ ವ್ಯವಹಾರ(ರಾಷ್ಟ್ರೀಕರಣ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 57) ಪ್ರಕರಣ 3ರ ಖಂಡ (ಜಿ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಸಿ) "ಸಾಮಾನ್ಯ ಜನ" ಎಂದರೆ, ಕೆಲವು ಸಾಮಾನ್ಯವಾದ ಸಾರ್ವಜನಿಕ ಗುಣದಿಂದ ಅಥವಾ ವ್ಯಕ್ತಿ ಸಂಬಂಧವಲ್ಲದ ಸ್ವರೂಪದಿಂದ ಸಾಕಷ್ಟು ಪ್ರಮಾಣದಲ್ಲಿ ಪರಿಭಾಷಿತವಾಗಿರುವ ಹೆಚ್ಚಿನ ಸಂಖ್ಯೆಯಲ್ಲಿನ ಜನರ ನಿಕಾಯ;

(ಝಡ್ಡಿ) " ಸರಕು ಸಾಗಾಣಿಕಾ ವಾಹನ"ವು, ಮೋಟಾರು ವಾಹನ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ (14)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಇ) "ಸರಕುಗಳ ಸಾರಿಗೆ ಏಜೆನ್ಸಿ" ಎಂದರೆ, ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಮತ್ತು ಯಾವುದಾದರೂ ಹೆಸರಿನಿಂದ ಕರೆಯಲಾಗುವ ರವಾನೆ ಪತ್ರವನ್ನು ನೀಡುವ ಯಾವುದೇ ವ್ಯಕ್ತಿ.

[473][(ಝಡ್ಎಫ್) ಪದಾವಳಿಯಾದ "ಸರ್ಕಾರಿ ಪ್ರಾಧಿಕಾರ" ಎಂದರೆ ಕೆಳಕಂಡವುದಾಗಿರುವ ಒಂದು ಪ್ರಾಧಿಕಾರ ಅಥವಾ ಒಂದು ಮಂಡಳಿ ಅಥವಾ ಯಾವುದೇ ಇತರ ನಿಕಾಯ:

ಸಂವಿಧಾನದ ಪರಿಚ್ಛೇದ 243ಡಬ್ಲ್ಯೂನ ಅಡಿಯಲ್ಲಿ ಮುನ್ಸಿಪಾಲಟಿಗೆ ಅಥವಾ ಸಂವಿಧಾನದ ಪರಿಚ್ಛೇದ 243ಜಿಯ ಅಡಿಯಲ್ಲಿ ಪಂಚಾಯಿತಿಗೆ ವಹಿಸಿಕೊಡಲಾದ ಯಾವುದೇ ಯಾವುದೇ ಪ್ರಕಾರ್ಯವನ್ನು ನೆರವೇರಿಸುವುದಕ್ಕಾಗಿ ಈಕ್ವಿಟಿಯ ಅಥವಾ ನಿಯಂತ್ರಣದ ರೂಪದಲ್ಲಿ ಶೇಕಡಾ 90 ಅಥವಾ ಅದಕ್ಕಿಂತ ಹೆಚ್ಚಿನ ಭಾಗವಹಿಸುವಿಕೆಯೊಂದಿಗೆ

(i) ಸಂಸತ್ ಅಥವಾ ರಾಜ್ಯ ಶಾಸನ ಸಭೆಯ ಒಂದು ಅಧಿನಿಯಮದಿಂದ ಸ್ಥಾಪಿತವಾಗಿರುವುದು; ಅಥವಾ

(ii) ಯಾವುದೇ ಸರ್ಕಾರದಿಂದ ಸ್ಥಾಪಿತವಾಗಿರುವುದು,

(ಝಡ್ಎಫ್ಎ) ಪದಾವಳಿಯಾದ "ಸರ್ಕಾರಿ ಎಂಟಿಟಿ" ಎಂದರೆ ಕೆಳಕಂಡವುದಾಗಿರುವ ಒಂದು ಪ್ರಾಧಿಕಾರ ಅಥವಾ ಒಂದು ಮಂಡಳಿ ಅಥವಾ ಒಂದು ಸೊಸೈಟಿಯನ್ನು ಒಳಗೊಂಡಂತೆ ಯಾವುದೇ ಇತರ ನಿಕಾಯ, ಟ್ರಸ್ಟ್, ಕಾರ್ಪೊರೇಷನ್:

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅಥವಾ ಕೇಂದ್ರಾಡಳಿತ ಪ್ರದೇಶ ಅಥವಾ ಸ್ಥಳೀಯ ಪ್ರಾಧಿಕಾರದಿಂದ ವಹಿಸಿಕೊಡಲಾದ ಪ್ರಕಾರ್ಯವನ್ನು ನೆರವೇರಿಸುವುದಕ್ಕಾಗಿ ಈಕ್ವಿಟಿಯ ಅಥವಾ ನಿಯಂತ್ರಣದ ರೂಪದಲ್ಲಿ ಶೇಕಡಾ 90 ಅಥವಾ ಅದಕ್ಕಿಂತ ಹೆಚ್ಚಿನ ಭಾಗವಹಿಸುವಿಕೆಯೊಂದಿಗೆ

(i) ಸಂಸತ್ ಅಥವಾ ರಾಜ್ಯ ಶಾಸನ ಸಭೆಯ ಒಂದು ಅಧಿನಿಯಮದಿಂದ ಸ್ಥಾಪಿತವಾಗಿರುವುದು; ಅಥವಾ

(ii) ಯಾವುದೇ ಸರ್ಕಾರದಿಂದ ಸ್ಥಾಪಿತವಾಗಿರುವುದು,]

(ಝಡ್ಜಿ) "ಆರೋಗ್ಯ ಪಾಲನಾ ಸೇವೆಗಳು" ಎಂದರೆ ಅನಾರೋಗ್ಯ, ಗಾಯ, ವಿರೂಪತೆ, ಅಸಹಜತೆ ಅಥವಾ ಗರ್ಭದಾರಣೆಗಾಗಿ, ಭಾರತದಲ್ಲಿ ಮಾನ್ಯತೆ ಪಡೆದ ಯಾವುದೇ ಔಷಧಗಳ ವ್ಯವಸ್ಥೆಯಲ್ಲಿ ಒದಗಿಸುವ ರೋಗನಿರ್ಣಯ ಅಥವಾ ಚಿಕಿತ್ಸೆ ಅಥವಾ ಆರೈಕೆಯ ರೂಪದಲ್ಲಿನ ಯಾವುದೇ ಸೇವೆಗಳು ಮತ್ತು ಇದು ಒಂದು ಕ್ಲಿನಿಕಲ್ ಕಾರ್ಯಸಂಸ್ಥೆಗೆ ಮತ್ತು ಅಲ್ಲಿಂದ ರೋಗಿಗಳನ್ನು ಸಾಗಿಸುವುದರ ಮೂಲಕ ಒದಗಿಸುವ ಸೇವೆಗಳನ್ನು ಒಳಗೊಳ್ಳುತ್ತದೆ ಆದರೆ ಕೂದಲು ಕಸಿ ಅಥವಾ ಸೌಂದರ್ಯವರ್ಧಕ ಅಥವಾ ಸುರೂಪಿಕಾ ಶಸ್ತ್ರ ಚಿಕಿತ್ಸೆಯನ್ನು, ಅವುಗಳನ್ನು ಜನ್ಮಜಾತ ನ್ಯೂನ್ಯತೆಗಳು, ಬೆಳವಣಿಗೆಯ ಕುಂಠಿತತೆ, ಗಾಯ ಅಥವಾ ದೈಹಿಕ ಹಾನಿಯ ಕಾರಣದಿಂದಾಗಿ ದೇಹದ ಅಂಗರಚನೆ ಅಥವಾ ಕಾರ್ಯಗಳು, ತೊಂದರೆಗೀಡಾಗಿರುವುದನ್ನು ಪುನಃಸ್ಥಾಪಿಸಲು ಅಥವಾ ಪುನರ್ರಚಿಸಲು ಕೈಗೊಂಡಿದ್ದಾಗ ಹೊರತುಪಡಿಸಿದಂತೆ, ಒಳಗೊಳ್ಳುವುದಿಲ್ಲ.

(ಝಡ್ಹೆಚ್) "ಇನ್ಕ್ಯೂಬೆಟಿ" ಎಂದರೆ, ತಾಂತ್ರಿಕ ವ್ಯವಹಾರ ಇನ್ಕ್ಯೂಬೆಟರ್ ಅಥವಾ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ವಾಣಿಜ್ಯೋದ್ಯಮ ಮಂಡಳಿಯಿಂದ (ಎನ್ಎಸ್ಟಿಇಡಿಬಿ) ಮಾನ್ಯತೆ ಪಡೆದ, ವಿಜ್ಞಾನ ಮತ್ತು ತಂತ್ರಜ್ಞಾನ ವಾಣಿಜ್ಯೋದ್ಯಮ ಪಾರ್ಕ್ನ ಆವರಣದಲಿ ನೆಲೆಗೊಂಡಿರುವ ಮತ್ತು ಉನ್ನತ–ತಂತ್ರಜ್ಞಾನದ ಮತ್ತು ಹೊಸದಾದ ಉತ್ಪನ್ನಗಳ ಅಭಿವೃದ್ಧಿಗಾಗಿ ಮತ್ತು ಉತ್ಪಾಧನೆಗಾಗಿ ತನ್ನನ್ನು ಕಾರ್ಯಸಾಧ್ಯಗೊಳಿಸಲು, ತಾಂತ್ರಿಕ ವ್ಯವಹಾರ ಇನ್ಕ್ಯೂಬೆಟರ್ ಅಥವಾ ವಿಜ್ಞಾನ ಮತ್ತು ತಂತ್ರಜ್ಞಾನ ವಾಣಿಜ್ಯೋದ್ಯಮ ಪಾರ್ಕ್ನೊಂದಿಗೆ ಒಪ್ಪಂದಕ್ಕೆ ಒಳಗಾಗಿರುವ ಒಬ್ಬ ವಾಣಿಜ್ಯೋದ್ಯಮಿ.

(ಝಡ್ಐ) " ಒಳನಾಡು ಜಲಮಾರ್ಗ"ವು, ಭಾರತೀಯ ಒಳನಾಡಿನ ಜಲಮಾರ್ಗ ಅಧಿನಿಯಮ, 1985ರ (1985ರ ಕೇಂದ್ರ ಅಧಿನಿಯಮ 82) ಪ್ರಕರಣ 2ರ ಖಂಡ (ಹೆಚ್)ರಲ್ಲಿ ಪರಿಭಾಷಿಸಿಲಾದ ರಾಷ್ಟ್ರೀಯ ಜಲಮಾರ್ಗಗಳು ಅಥವಾ ಭಾರತೀಯ ನೌಕೆಗಳ ಅಧಿನಿಯಮ, 1917ರ (1917ರ ಕೇಂದ್ರ ಅಧಿನಿಯಮ 1) ಪ್ರಕರಣ 2ರ ಖಂಡ (ಬಿ)ರಲ್ಲಿ ಪರಿಭಾಷಿಸಿಲಾದ ಇತರೇ ಜಲಮಾರ್ಗ ಅಥವಾ ಒಳನಾಡು ಜಲ.

(ಝಡ್ಜೆ) " ವಿಮಾ ಕಂಪನಿ"ಎಂದರೆ, ಜೀವ ವಿಮಾ ವ್ಯವಹಾರ ಅಥವಾ ಸಾಮಾನ್ಯ ವಿಮಾ ವ್ಯವಹಾರ ನಡೆಸುವ ಒಂದು ಕಂಪನಿ;

(ಝಡ್ಕೆ) "ಬಡ್ಡಿ"ಎಂದರೆ, ಸಾಲವಾಗಿ ಪಡೆದಿರುವ ಯಾವುದೇ ಹಣ ಅಥವಾ ಉಂಟಾದ ಋಣದ ಮೇಲೆ (ಠೇವಣಿ, ಕ್ಲೇಮು ಅಥವಾ ಇದೇ ರೀತಿಯ ಹಕ್ಕು ಅಥವಾ ಬಾಧ್ಯತೆಯನ್ನು ಒಳಗೊಂಡಂತೆ) ಯಾವುದೇ ವಿಧಾನದಲ್ಲಿ ಸಂದಾಯ ಮಾಡಬೇಕಾದ ಬಡ್ಡಿ, ಆದರೆ ಸಾಲವಾಗಿ ಪಡೆದಿರುವ ಯಾವುದೇ ಹಣ ಅಥವಾ ಉಂಟಾದ ಋಣಕ್ಕೆ ಸಂಬಂಧಿಸಿದ ಅಥವಾ ಬಳಸಿಕೊಳ್ಳದಿರುವ ಯಾವುದೇ ಸಾಲ ಸೌಲಭ್ಯಕ್ಕೆ ಸಂಬಂಧಿಸಿದ ಯಾವುದೇ ಸೇವಾ ಶುಲ್ಕ ಅಥವಾ ಇತರೇ ಚಾರ್ಜನ್ನು ಒಳಗೊಳ್ಳುವುದಿಲ್ಲ;

(ಝಡ್ಎಲ್) " ಮಧ್ಯವರ್ತಿ" ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 2ರ ಉಪಪ್ರಕರಣ (13)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

---

[473] ಅಧಿಸೂಚನೆ ಸಂ. ಆಇ 48 ಸಿಎಸ್ಎಲ್ 2017 (32/2017) ದಿನಾಂಕ 13–10–2017ರ ಮೂಲಕ ಸೇರಿಸಲಾಗಿದೆ.

(ಝಡ್ಎಮ್) " ಕಾನೂನು ಸೇವೆ" ಎಂದರೆ ಕಾನೂನಿನ ಯಾವುದೇ ಶಾಖೆಯಲ್ಲಿನ ಸಲಹೆ, ಸಮಾಲೋಚನೆ ಅಥವಾ ನೆರವಿಗೆ ಸಂಬಂಧಿಸಿದಂತೆ ಒದಗಿಸಲಾದ ಯಾವುದೇ ಸೇವೆ ಮತ್ತು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಪ್ರಾತಿನಿಧ್ಯದ ಸೇವೆಗಳನ್ನು ಒಳಗೊಳ್ಳುತ್ತದೆ;

(ಝಡ್ಎನ್) " ಜೀವ ವಿಮಾ ವ್ಯವಹಾರ"ವು, ವಿಮಾ ಅಧಿನಿಯಮ, 1938ರ (1938ರ ಕೇಂದ್ರ ಅಧಿನಿಯಮ 4) ಪ್ರಕರಣ 2ರ ಖಂಡ (11)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಒ) " ಜೀವ ಸೂಕ್ಷ್ಮ–ವಿಮಾ ಉತ್ಪನ್ನ"ವು, ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಸೂಕ್ಷ್ಮ–ವಿಮೆ) ವಿನಿಯಮಗಳು, 2005ರ ವಿನಿಯಮ 2ರ ಖಂಡ (ಇ)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಪಿ) " ಮೀಟರ್ ಅಳವಡಿಸಲಾದ ಕ್ಯಾಬ್", ಎಂದರೆ ರಾಜ್ಯ ಸಾರಿಗೆ ಪ್ರಾಧಿಕಾರವು ಸಂಬಂಧಿತ ನಿಯಮಗಳ ಅಡಿಯಲ್ಲಿ ಅನುಮೋದಿತವಾದ ಒಂದು ಬಗೆಯ ಸ್ವಯಂಚಾಲಿತ ಸಾಧನವನ್ನು, ಅಳವಡಿಸಲಾಗಿರುವ ಕರಾರಿನ ಸಾಗಾಣಿಕೆ ವಾಹನವಾಗಿದ್ದು, ಅದು ಯಾವುದೇ ಅವಧಿಯಲ್ಲಿ ವಿಧಿಸಬಹುದಾದ ಬಾಡಿಗೆಯ ಮಾಪನವನ್ನು ಸೂಚಿಸುತ್ತದೆ ಮತ್ತು ಅದನ್ನು ಮೋಟಾರು ವಾಹನ ಅಧಿನಿಯಮ, 1988ರ (1988ರ 59) ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ನೀಡಲಾದ ಅದರ ಅನುಮತಿಯ ಷರತ್ತುಗಳಿಗನುಸಾರವಾಗಿ ವಿಧಿಸಲಾಗಿರುತ್ತದೆ. (ಆದರೆ ರೇಡಿಯೋ ಟ್ಯಾಕ್ಸಿ ಒಳಗೊಳ್ಳುವುದಿಲ್ಲ)

(ಝಡ್ಕ್ಯೂ) " ರಾಷ್ಟ್ರೀಯ ಉದ್ಯಾನವನ"ವು, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಪ್ರಕರಣ 2ರ ಖಂಡ (21)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಆರ್) " ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶಸಂಗ್ರಹ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳು", ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 2ರ ಉಪಪ್ರಕರಣ (17)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಎಸ್) "ಮೂಲ ಕಾಮಗಾರಿಗಳು", ಎಂದರೆ ಎಲ್ಲಾ ಹೊಸ ನಿರ್ಮಾಣಗಳು;

(i) ಕಾರ್ಯಸಾಧ್ಯವಾಗುವಂತೆ ಮಾಡುವುದು ಅಗತ್ಯವಿರುವ ಭೂಮಿಯ ಮೇಲಿನ ಪರಿತ್ಯಕ್ತ ಅಥವಾ ಹಾನಿಗೊಳಗಾದ ರಚನೆಗಳಿಗೆ ಮಾಡಲಾದ ಎಲ್ಲಾ ಬಗೆಯ ಸೇರ್ಪಡೆಗಳು ಮತ್ತು ಮಾರ್ಪಾಟುಗಳು;

(ii) ಪೂರ್ವ–ನಿರ್ಮಿತವಾಗಿರಲಿ ಅಥವಾ ಅನ್ಯಥಾವಾಗಿರಲಿ, ಸ್ಥಾವರ, ಯಂತ್ರೋಪಕರಣ ಅಥವಾ ಸಲಕರಣೆ ಅಥವಾ ರಚನೆಗಳ ನಿಲ್ಲಿಸುವಿಕೆ, ನಿಯೋಜನೆ ಅಥವಾ ಅನುಸ್ಥಾಪನೆ;

(ಝಡ್ಟಿ) "ಮುದ್ರಣ ಮಾಧ್ಯಮ", ಎಂದರೆ,–

(i) ಪುಸ್ತಕಗಳ ಮುದ್ರಣ ಮತ್ತು ನೋಂದಣಿಯ ಅಧಿನಿಯಮ, 1867ರ (1867ರ ಕೇಂದ್ರ ಅಧಿನಿಯಮ 25) ಪ್ರಕರಣ 1ರ ಉಪಪ್ರಕರಣ (1)ರಲ್ಲಿ ಪರಿಭಾಷಿಸಲಾದಂತೆ 'ಪುಸ್ತಕ', ಆದರೆ ವಾಣಿಜ್ಯದ ಉದ್ದೇಶಗಳಿಗಾಗಿ ಪ್ರಧಾನವಾಗಿರುವ ವ್ಯವಹಾರ ಡೈರಕ್ಟರಿಗಳು, ಹಳದಿ ಪುಟಗಳು ಮತ್ತು ವ್ಯಾಪಾರ ಕ್ಯಾಟಲಾಗ್‌ಗಳನ್ನು ಒಳಗೊಳ್ಳುವುದಿಲ್ಲ;

(ii) ಪುಸ್ತಕಗಳ ಮುದ್ರಣ ಮತ್ತು ನೋಂದಣಿಯ ಅಧಿನಿಯಮ, 1867ರ (1867ರ ಕೇಂದ್ರ ಅಧಿನಿಯಮ 25) ಪ್ರಕರಣ 1ರ ಉಪಪ್ರಕರಣ (1)ರಲ್ಲಿ ಪರಿಭಾಷಿಸಲಾದಂತೆ 'ವರ್ತಮಾನ ಪತ್ರಿಕೆ;

(ಝಡ್ಯುವ್) " ಬಂದರು", ಎಂಬುದು ಪ್ರಮುಖ ಬಂದರು ಟ್ರಸ್ಟ್‌ಗಳ ಅಧಿನಿಯಮ, 1963ರ (1963ರ ಕೇಂದ್ರ ಅಧಿನಿಯಮ 38) ಪ್ರಕರಣ 2ರ ಖಂಡ (ಕ್ಯೂ)ನಲ್ಲಿ ಅಥವಾ ಭಾರತೀಯ ಬಂದರುಗಳ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ 15) ಪ್ರಕರಣ 3ರ ಖಂಡ (4)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ವಿ) "ರೇಡಿಯೋ ಟ್ಯಾಕ್ಸಿ" ಎಂದರೆ, ಕೇಂದ್ರ ನಿಯಂತ್ರಣ ಕಛೇರಿಯೊಂದಿಗೆ ಮತ್ತು ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ ಅಥವಾ ಜನರಲ್ ಪ್ಯಾಕೆಟ್ ರೇಡಿಯೋ ಸೇವೆಯನ್ನು ಬಳಸಿ ಜಾಡನ್ನು ಹಿಡಿಯಲು ಸಕ್ರಿಯವಾಗಿರುವ ಎರಡು ಕಡೆಯಿಂದ ರೇಡಿಯೋ ಸಂವಹನದಲ್ಲಿರುವ ಯಾವುದಾದರೂ ಹೆಸರಿನಿಂದ ಕರೆಯಲಾಗುವ ರೇಡೀಯೋ ಕ್ಯಾಬ್‌ನ್ನು ಒಳಗೊಂಡಿರುವ ಟ್ಯಾಕ್ಸಿಯಾಗಿದೆ.

(ಝಡ್ಡಬ್ಯೂ) "ಮಾನ್ಯತೆ ಪಡೆದ ಕ್ರೀಡಾ ಕಾರ್ಯಕ್ರಮ" ಎಂದರೆ, ಕೆಳಕಂಡವುಗಳಿಂದ ಆಯೋಜಿಸಿದ ಯಾವುದೇ ಕ್ರೀಡಾ ಕಾರ್ಯಕ್ರಮ–

(i) ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಯಿಂದ ಆಯೋಜಿಸಿರುವ, ಭಾಗವಹಿಸುವ ತಂಡಗಳು, ವ್ಯಕ್ತಿಗಳು, ಯಾವುದೇ ಜಿಲ್ಲೆ, ರಾಜ್ಯ, ವಲಯ ಅಥವಾ ದೇಶವನ್ನು ಪ್ರತಿನಿಧಿಸುತ್ತಿದ್ದಲ್ಲಿ;
(ii) ಕೆಳಕಂಡವುಗಳಿಂದ ಆಯೋಜಿಸದವುಗಳು–
(ಎ) ರಾಷ್ಟ್ರೀಯ ಕ್ರೀಡಾ ಫೆಡರೇಷನ್ ಅಥವಾ ಅದರ ಸಂಯೋಜಿತ ಫೆಡರೇಷನ್‌ಗಳಿಂದ ಆಯೋಜಿಸಿರುವ, ಭಾಗವಹಿಸುವ ತಂಡಗಳು, ವ್ಯಕ್ತಿಗಳು, ಯಾವುದೇ ಜಿಲ್ಲೆ, ರಾಜ್ಯ, ವಲಯ ಅಥವಾ ದೇಶವನ್ನು ಪ್ರತಿನಿಧಿಸುತ್ತಿದ್ದಲ್ಲಿ;
(ಬಿ) ಭಾರತೀಯ ವಿಶ್ವವಿದ್ಯಾಲಯಗಳ ಸಂಘ, ಅಂತರ–ವಿಶ್ವವಿದ್ಯಾಲಯ ಕ್ರೀಡಾ ಮಂಡಳಿ, ಭಾರತೀಯ ಶಾಲಾ ಆಟಗಳ ಫೆಡರೇಷನ್, ಭಾರತೀಯ ಕಿವುಡರ ಕ್ರೀಡಾ ಪರಿಷತ್, ಭಾರತೀಯ ಪ್ಯಾರಾಒಲಂಪಿಕ್ ಸಮಿತಿ ಅಥವಾ ವಿಶೇಷ ಒಲಂಪಿಕ್ಸ್ ಭಾರತ್;
(ಸಿ) ಕೇಂದ್ರ ನಾಗರಿಕ ಸೇವೆಗಳ ಸಾಂಸ್ಕೃತಿಕ ಮತ್ತು ಕ್ರೀಡಾ ಮಂಡಳಿ;
(ಡಿ) ರಾಷ್ಟ್ರೀಯ ಆಟಗಳ ಭಾಗವಾಗಿ, ಭಾರತೀಯ ಒಲಂಪಿಕ್ ಸಂಸ್ಥೆಯಿಂದ; ಅಥವಾ
(ಇ) ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್ ಅಭಿಯಾನ ಯೋಜನೆ.

(ಝಡ್ಎಕ್ಸ್) "ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆ" ಎಂದರೆ–
(i) ಭಾರತೀಯ ಒಲಂಪಿಕ್ ಸಂಸ್ಥೆ;
(ii) ಭಾರತೀಯ ಕ್ರೀಡಾ ಪ್ರಾಧಿಕಾರ;
(iii) ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಯುವಜನ ವ್ಯವಹಾರ ಮಂತ್ರಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡೆಗಳ ಫೆಡರೇಷನ್ ಮತ್ತು ಅದರ ಸಹಯೋಗದ ಪೆಡರೇಷನ್‌ಗಳು;
(iv) ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಯುವಜನ ವ್ಯವಹಾರ ಮಂತ್ರಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡೆಗಳ ಸಂವರ್ಧನಾ ಸಂಘಟನೆಗಳು; ಅಥವಾ
(v) ಅಂತರರಾಷ್ಟ್ರೀಯ ಒಲಂಪಿಕ್ ಸಂಸ್ಥೆ ಅಥವಾ ಅಂತರರಾಷ್ಟ್ರೀಯ ಒಲಂಪಿಕ್ ಸಂಸ್ಥೆಯಿಂದ ಮಾನ್ಯತೆ ಪಡೆದ ಒಂದು ಫೆಡರೇಷನ್
(vi) ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಕ್ರೀಡೆಯನ್ನು ನಿಯಂತ್ರಿಸುವ ಒಂದು ಪೆಡರೇಷನ್ ಅಥವಾ ಒಂದು ಸಂಸ್ಥೆ ಅಥವಾ ಭಾರತದಲ್ಲಿ ಒಂದು ಕ್ರೀಡೆಯನ್ನು ನಿಯಂತ್ರಿಸುವ ಅದರ ಸಹಯೋಗದ ಪೆಡರೇಷನ್‌ಗಳು ಅಥವಾ ಸಂಸ್ಥೆಗಳು;

(ಝಡ್ವೈ) "ಧಾರ್ಮಿಕ ಸ್ಥಳ" ಎಂದರೆ, ಒಂದು ಧರ್ಮ, ಧ್ಯಾನ, ಅಥವಾ ಆಧ್ಯಾತ್ಮಿಕತೆಗೆ ಸಂಬಂಧಿಸಿದಂತೆ ಪ್ರಾರ್ಥನೆ ಅಥವಾ ಆರಾಧನೆಯನ್ನು ನಡೆಸುವುದಕ್ಕೆ ಪ್ರಧಾನವಾಗಿ ಮೀಸಲಾಗಿರುವ ಒಂದು ಸ್ಥಳ;

(ಝಡ್ಝಡ್) "ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಬಾಡಿಗೆ ನೀಡುವುದು" ಎಂದರೆ, ಒಂದು ಸ್ಥಿರ ಸ್ವತ್ತಿಗೆ, ಪೂರ್ಣವಾಗಿ ಅಥವಾ ಭಾಗಶಃವಾಗಿ, ಸಂಪರ್ಕಾವಕಾಶಕ್ಕೆ, ಪ್ರವೇಶಕ್ಕೆ, ಅಧಿಭೋಗಕ್ಕೆ, ಬಳಸುವಿಕೆಗೆ ಅಥವಾ ಅಂಥ ಯಾವುದೇ ಸೌಲಭ್ಯಕ್ಕೆ, ಸದರಿ ಸ್ಥಿರ ಸ್ವತ್ತಿನ ಸ್ವಾಧೀನ ಅಥವಾ ನಿಯಂತ್ರಣವನ್ನು ವರ್ಗಾಯಿಸುವುದರೊಂದಿಗೆ ಅಥವಾ ವರ್ಗಾಯಿಸದೇ, ಅವಕಾಶ ಕಲ್ಪಿಸುವುದು, ಅನುಮತಿಸಿವುದು ಅಥವಾ ಮಂಜೂರು ಮಾಡುವುದಾಗಿದೆ ಮತ್ತು ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಬಿಟ್ಟು ಕೊಡುವುದು, ಭೋಗ್ಯಕ್ಕೆ ಕೊಡುವುದು ಅಥವಾ ಪರವಾನಗಿ ನೀಡುವುದು ಅಥವಾ ಇತರೇ ಏರ್ಪಾಡುಗಳನ್ನು ಒಳಗೊಳ್ಳುತ್ತದೆ;

(ಝಡ್ಝಡ್ಎ) "ಭಾರತೀಯ ರಿಸರ್ವ್ ಬ್ಯಾಂಕ್" ಎಂದರೆ, "ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ ಕೇಂದ್ರ ಅಧಿನಿಯಮ 2) ಪ್ರಕರಣ 3ರ ಅಡಿಯಲ್ಲಿ ಸ್ಥಾಪಿತವಾದ ಬ್ಯಾಂಕ್;

(ಝಡ್ಝಡ್ಬಿ) "ವಸತಿ ಸಮುಚ್ಛಯ" ಎಂದರೆ, ಒಂದು ವಸತಿ ಘಟಕಕ್ಕಿಂತ ಹೆಚ್ಚಿನದಾದ ಕಟ್ಟಡ ಅಥವಾ ಕಟ್ಟಡಗಳನ್ನು ಒಳಗೊಂಡಿರುವ ಯಾವುದೇ ಸಮುಚ್ಛಯವಾಗಿದೆ;

(ಝಡ್ಝಡ್ಸಿ) "ಗ್ರಾಮೀಣ ಪ್ರದೇಶ" ಎಂದರೆ, ಭೂ ಕಂದಾಯದ ದಾಖಲೆಗಳಲ್ಲಿ ಪರಿಭಾಷಿಸಿದಂತೆ ಒಂದು ಹಳ್ಳಿಯಲ್ಲಿ ಬರುವ ಕೆಳಕಂಡವುಗಳನ್ನು ಹೊರತುಪಡಿಸಿದ ಪ್ರದೇಶ–

ಯಾವುದೇ ಪುರಸಭೆಯ ಸಮಿತಿ, ಪುರಸಭೆಯ ಕಾರ್ಪೊರೇಷನ್, ಪಟ್ಟಣ ಪ್ರದೇಶ ಸಮಿತಿ, ಕಂಟೋನ್‌ಮೆಂಟ್ ಮಂಡಳಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿಯ ಅಡಿಯಲ್ಲಿನ ಪ್ರದೇಶ; ಅಥವಾ ಕೇಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರದಿಂದ ನಗರ ಪ್ರದೇಶ ಎಂದು ಅಧಿಸೂಚಿಸಬಹುದಾದ ಯಾವುದೇ ಪ್ರದೇಶ.

(ಝಡ್ಝಡ್ಡಿ) " ಹಿರಿಯ ನ್ಯಾಯವಾದಿ"ಎಂಬ ಪದವು, ನ್ಯಾಯವಾದಿ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 25) ಪ್ರಕರಣ 16ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಇ) " ಏಕ ವಸತಿ ಘಟಕ" ಎಂದರೆ, ಒಂದು ಕುಟುಂಬದ ವಸತಿ ಉದ್ದೇಶಗಳಿಗಾಗಿ ಪೂರ್ಣವಾಗಿ ಅಥವಾ ಪ್ರಧಾನವಾಗಿ ವಿನ್ಯಾಶಗೊಳಿಸಲಾಗಿರುವ ಒಂದು ಸ್ವಾವಲಂಬಿ ವಸತಿ ಘಟಕ;

(ಝಡ್ಝಡ್ಎಫ್) "ವಿಶೇಷ ಪ್ರವರ್ಗದ ರಾಜ್ಯಗಳು" ಎನ್ನುವುದನ್ನು, ಸಂವಿಧಾನದ 279ಎ ಅನುಚ್ಛೇದದ ಖಂಡ (4)ರ ಉಪ–ಖಂಡ (ಜಿ)ಯ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯಗಳು ಎಂದು ಅರ್ಥೈಸತಕ್ಕದ್ದು.

(ಝಡ್ಝಡ್ಜಿ) "ನಿರ್ದಿಷ್ಟಪಡಿಸಿದ ಸಂಘಟನೆ" ಎನ್ನುವುದನ್ನು, ಕೆಳಕಂಡಂತೆ ಅರ್ಥೈಸತಕ್ಕದ್ದು,–

(i) ಉತ್ತರಖಂಡ ಸರ್ಕಾರದ ಉದ್ಯಮವಾಗಿರುವ "ಕುಮಾವ್ ಮಂಡಲ್ ವಿಕಾಸ್ ನಿಗಮ್ ಲಿಮಿಟೆಡ್"; ಅಥವಾ

(ii) ಹಜ್ ಸಮಿತಿ ಅಧಿನಿಯಮ, 2002ರ (2002ರ ಕೇಂದ್ರೀಯ ಅಧಿನಿಯಮ) ಪ್ರಕರಣ 2ರಲ್ಲಿ ಪರಿಭಾಷಿಸಿದಂತೆ 'ಸಮಿತಿ' ಅಥವಾ 'ರಾಜ್ಯ ಸಮಿತಿ';

(ಝಡ್ಝಡ್ಹೆಚ್) " ಹಂತ ಸಾಗಾಣಿಕೆ ವಾಹನವು", ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ (40)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಐ) " ರಾಜ್ಯ ವಿದ್ಯುಚ್ಛಕ್ತಿ ಮಂಡಳಿ"ಯು, ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 54) ಪ್ರಕರಣ 5ರ ಅಡಿಯಲ್ಲಿ ಸ್ಥಾಪಿತವಾದ ಮಂಡಳಿ;

(ಝಡ್ಝಡ್ಜೆ) " ರಾಜ್ಯ ಪ್ರಸರಣ ಯುಟಿಲಿಟಿ"ಯು, ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) ಪ್ರಕರಣ 2ರ ಖಂಡ (67)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಕೆ) " ರಾಜ್ಯ ಸಾರಿಗೆ ಉದ್ಯಮ"ವು, ಮೋಟಾರು ವಾಹನ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ (42)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಎಲ್) " ಹುಲಿ ಮೀಸಲು ಅರಣ್ಯ", ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಪ್ರಕರಣ 38ಕೆಯ ಖಂಡ (ಇ)ಯಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಎಮ್) "ಪ್ರವಾಸ ನಿರ್ವಾಹಕರು" ಎಂದರೆ, ಪ್ರವಾಸಗಳನ್ನು ಯಾವುದೇ ವಿಧಾನದ ಸಾರಿಗೆಯ ಮೂಲಕ, ಯೋಜಿಸುವ, ನಿಗಧಿಗೊಳಿಸುವ, ಸಂಘಟಿಸುವ, ವ್ಯವಸ್ಥೆ ಮಾಡುವ (ವಸತಿ, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಅಥವಾ ಅದೇ ರೀತಿಯ ಇತರೇ ಸೇವೆಗಳನ್ನು ವ್ಯವಸ್ಥೆ ಮಾಡುವುದನ್ನು ಒಳಗೊಳ್ಳಬಹುದು) ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಕ್ತಿ, ಮತ್ತು ಪ್ರವಾಸಗಳ ಕಾರ್ಯಾಚರಣೆಯ ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ಝಡ್ಝಡ್ಎನ್) " ವ್ಯಾಪಾರ ಒಕ್ಕೂಟ", ವ್ಯಾಪಾರ ಒಕ್ಕೂಟಗಳ ಅಧಿನಿಯಮ, 1926ರ (1926ರ ಕೇಂದ್ರ ಅಧಿನಿಯಮ 16) ಪ್ರಕರಣ 2ರ ಖಂಡ (ಹೆಚ್)ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಒ) " ಹಡಗು (ನೌಕೆ)", ಪ್ರಮುಖ ಬಂದರು ಟ್ರಸ್ಟ್‌ಗಳ ಅಧಿನಿಯಮ, 1963ರ (1963ರ ಕೇಂದ್ರ ಅಧಿನಿಯಮ 38) ಪ್ರಕರಣ 2ರ ಖಂಡ (ಝಡ್)ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಪಿ) " ವನ್ಯಜೀವಿ ಅಭಯಾರಣ್ಯ", ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಪ್ರಕರಣ 2ರ ಖಂಡ (26)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಝಡ್ಝಡ್ಪಿ) "ಮೃಗಾಲಯ", ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಪ್ರಕರಣ 2ರ ಖಂಡ (39)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

3. ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ,–

(i) "ಅಧ್ಯಾಯ", "ಪ್ರಕರಣ", ಅಥವಾ "ಶಿರೋನಾಮೆ"ಯ ಉಲ್ಲೇಖವು ಎಲ್ಲೆಲ್ಲಿ ಬರುತ್ತದೆಯೋ, ಅದು, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು, ಸೇವೆಗಳ ವರ್ಗೀಕರಣದ ಯೋಜನೆಯಲ್ಲಿ ಅನುಕ್ರಮವಾಗಿ "ಅಧ್ಯಾಯ","ಪ್ರಕರಣ", ಅಥವಾ "ಶಿರೋನಾಮೆ"ಯಾಗಿರತಕ್ಕದ್ದು.

(ii) ಕಾಲಂ (2)ರಲ್ಲಿ ನಮೂದಿಸಲಾದ ಅಧ್ಯಾಯ, ಪ್ರಕರಣ, ಶಿರೋನಾಮೆ, ಗುಂಪು, ಸೇವಾ ಕೋಡ್‌ಗಳು ನಿಶ್ಚಯಾರ್ಥಕವಾದವು.

(iii) [474][ಮಿತ ಹೊಣೆಗಾರಿಕೆ ಪಾಲುದಾರಿಕೆ ಅಧಿನಿಯಮ, 2008ರ (2009ರ 6) ಉಪಬಂಧಗಳ ಅಡಿಯಲ್ಲಿ ರಚಿತವಾದ ಅಥವಾ ನೋಂದಣಿಯಾದ ಒಂದು "ಮಿತ ಹೊಣೆಗಾರಿಕೆ ಪಾಲುದಾರಿಕೆ"ಯನ್ನು ಸಹ ಪಾಲುದಾರಿಕಾ ಸಂಸ್ಥೆ ಅಥವಾ ಒಂದು ಸಂಸ್ಥೆ ಎಂದು ಪರಿಗಣಿಸತಕ್ಕದ್ದು.]

4. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

[474] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (21/2017) ದಿನಾಂಕ 22–08–2017ರ ಮೂಲಕ ಸೇರಿಸಲಾಗಿದೆ.

ಆರ್ಥಿಕ ಸಚಿವಾಲಯ
ಅಧಿಸೂಚನೆ (13/2017)
ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 9ರ ಉಪಪ್ರಕರಣ (3) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕೆಳಕಂಡ ಕೋಷ್ಟಕದ ಕಾಲಂ (3)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಒಬ್ಬ ವ್ಯಕ್ತಿಯಿಂದ ಪೂರೈಕೆ ಮಾಡಲಾದ, ಸದರಿ ಕೋಷ್ಟಕದಲ್ಲಿನ ಕಾಲಂ (2)ರಲ್ಲಿ ನಮೂದಿಸಿರುವ ಸೇವೆಗಳ ಪೂರೈಕೆಯ ವರ್ಗಗಳ ಮೇಲೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 9ರ ಅಡಿಯಲ್ಲಿ ವಿಧಿಸಬಹುದಾದ ಪೂರ್ಣ ರಾಜ್ಯ ತೆರಿಗೆಯನ್ನು, ಸದರಿ ಕೋಷ್ಟಕದ ಕಾಲಂ (4)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಅಂಥ ಸೇವೆಗಳನ್ನು ಸ್ವೀಕರಿಸುವವನು, ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡತಕ್ಕದ್ದು:–

ಕೋಷ್ಟಕ

ಕ್ರ.ಸಂ	ಸೇವೆಗಳ ಪೂರೈಕೆಯ ವರ್ಗಗಳು	ಸೇವೆಗಳ	ಸೇವೆಗಳನ್ನು ಸ್ವೀಕರಿಸುವವನು
(1)	(2)		(4)
1	[475][ಶೇಕಡ 6ರ ದರದಲ್ಲಿ ರಾಜ್ಯತೆರಿಗೆಯನ್ನು ಸಂದಾಯ ಮಾಡದಿರುವ] ಸರಕುಗಳ ಸಾರಿಗೆ ಏಜೆನ್ಸಿಯಿಂದ (ಜಿಟಿಎ) ಕೆಳಕಂಡವುಗಳಿಗೆ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದ ಸೇವೆಗಳ ಪೂರೈಕೆ– (ಎ) ಕಾರ್ಖಾನೆಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 63) ಅಡಿಯಲ್ಲಿ ನೋಂದಾಯಿತವಾದ ಅಥವಾ ಅದರ ವ್ಯಾಪಿಗೆ ಒಳಪಡುವ ಯಾವುದೇ ಕಾರ್ಖಾನೆ; ಅಥವಾ (ಬಿ) ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ಅಥವಾ ಭಾರತದ ಯಾವುದೇ ಭಾಗದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಯಾವುದೇ ಸೊಸೈಟಿ; ಅಥವಾ (ಸಿ) ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ಸಹಕಾರ ಸೊಸೈಟಿ; ಅಥವಾ (ಡಿ) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಯಾವೊಬ್ಬ ವ್ಯಕ್ತಿ; ಅಥವಾ	ಸರಕುಗಳ ಸಾರಿಗೆ ಏಜೆನ್ಸಿ (ಜಿಟಿಎ)	(ಎ) ಕಾರ್ಖಾನೆಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 63) ಅಡಿಯಲ್ಲಿ ನೋಂದಾಯಿತವಾದ ಅಥವಾ ಅದರ ವ್ಯಾಪಿಗೆ ಒಳಪಡುವ ಯಾವುದೇ ಕಾರ್ಖಾನೆ; ಅಥವಾ (ಬಿ) ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ಅಥವಾ ಭಾರತದ ಯಾವುದೇ ಭಾಗದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಯಾವುದೇ ಸೊಸೈಟಿ; ಅಥವಾ (ಸಿ) ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ಸಹಕಾರ ಸೊಸೈಟಿ; ಅಥವಾ (ಡಿ) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಕೇಂದ್ರಾಡಳಿತ ಪ್ರದೇಶ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಯಾವೊಬ್ಬ ವ್ಯಕ್ತಿ; ಅಥವಾ

[475] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (22/2017) ದಿನಾಂಕ 22–08–2017ರ ಮೂಲಕ ಸೇರಿಸಲಾಗಿದೆ.

	(ಇ) ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ಕಾರ್ಪೊರೇಟ್ ಸಂಸ್ಥೆ; ಅಥವಾ (ಎಫ್) ಯಾವುದೇ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ವ್ಯಕ್ತಿಗಳ ಸಂಘಗಳನ್ನು ಒಳಗೊಂಡಂತೆ ಯಾವುದೇ ಪಾಲುದಾರಿಕಾ ಸಂಸ್ಥೆ; ಅಥವಾ (ಜಿ) ಯಾವುದೇ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ		(ಇ) ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ಕಾರ್ಪೊರೇಟ್ ಸಂಸ್ಥೆ; ಅಥವಾ (ಎಫ್) ಯಾವುದೇ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ವ್ಯಕ್ತಿಗಳ ಸಂಘಗಳನ್ನು ಒಳಗೊಂಡಂತೆ ಯಾವುದೇ ಪಾಲುದಾರಿಕಾ ಸಂಸ್ಥೆ; ಅಥವಾ (ಜಿ) ಯಾವುದೇ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ
2	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಯಾವುದೇ ವ್ಯವಹಾರ ಎಂಟಿಟಿ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಪ್ರಾತಿನಿಧ್ಯದ ಸೇವೆಗಳ ರೂಪದಲ್ಲಿ, ಹಿರಿಯ ನ್ಯಾಯವಾದಿಯನ್ನು ಒಳಗೊಂಡಂತೆ ಒಬ್ಬ ವೈಯಕ್ತಿಕ ನ್ಯಾಯವಾದಿಯಿಂದ ಪೂರೈಕೆ ಮಾಡಿದ ಸೇವೆಗಳು, ಒಂದು ವ್ಯವಹಾರ ಎಂಟಿಟಿಗೆ ಕಾನೂನಿನ ಸೇವೆಯ ರೂಪದಲ್ಲಿ, ಇತರೇ ನ್ಯಾಯವಾದಿ ಅಥವಾ ನ್ಯಾಯವಾದಿಗಳ ಪಾಲುದಾರಿಕಾ ಸಂಸ್ಥೆ, ಅಥವಾ ನ್ಯಾಯವಾದಿಗಳ ಪಾಲುದಾರಿಕಾ ಸಂಸ್ಥೆಗಳ, ಮೂಲಕ ಅಂಥ ಸೇವೆಯನ್ನು ಒದಗಿಸುವ ಕರಾರನ್ನು ಮಾಡಿಕೊಂಡಿದ್ದಲ್ಲಿ, ಅದನ್ನು ಒಳಗೊಂಡಂತೆ.	ಹಿರಿಯ ನ್ಯಾಯವಾದಿ, ಅಥವಾ ನ್ಯಾಯವಾದಿಗಳ ಪಾಲುದಾರಿಕಾ ಸಂಸ್ಥೆಯನ್ನು ಒಳಗೊಂಡ ಒಬ್ಬ ವೈಯಕ್ತಿಕ ನ್ಯಾಯವಾದಿ	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಯಾವುದೇ ವ್ಯವಹಾರ ಎಂಟಿಟಿ
3	ಒಂದು ವ್ಯವಹಾರ ಎಂಟಿಟಿಗೆ ಒಂದು ಮದ್ಯಸ್ಥಿಕೆ ನ್ಯಾಯಾಧಿಕರಣದಿಂದ ಪೂರೈಕೆ ಮಾಡಿದ ಸೇವೆಗಳು.	ಒಂದು ಮದ್ಯಸ್ಥಿಕೆ	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಯಾವುದೇ ವ್ಯವಹಾರ ಎಂಟಿಟಿ
4	ಯಾವುದೇ ಕಾರ್ಪೊರೇಟ್ ಸಂಸ್ಥೆಗೆ ಅಥವಾ ಪಾಲುದಾರಿಕಾ ಸಂಸ್ಥೆಗೆ ಪ್ರಾಯೋಜಕತ್ವದ ರೂಪದಲ್ಲಿ ಪೂರೈಕೆ ಮಾಡಿದ ಸೇವೆಗಳು.	ಯಾವುದೇ ವ್ಯಕ್ತಿ	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಯಾವುದೇ ಕಾರ್ಪೊರೇಟ್ ಸಂಸ್ಥೆ ಅಥವಾ ಪಾಲುದಾರಿಕಾ ಸಂಸ್ಥೆ
5	ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶ, ಅಥವಾ ಸ್ಥಳೀಯ ಪ್ರಾಧಿಕಾರದಿಂದ ಒಂದು ವ್ಯವಹಾರದ ಎಂಟಿಟಿಗೆ ಪೂರೈಕೆ ಮಾಡಿದ ಕೆಳಕಂಡುವುಗಳನ್ನು ಹೊರತುಪಡಿಸಿದ ಸೇವೆಗಳು. (1) ಸ್ಥಿರ ಸ್ವತ್ತನ್ನು ಬಾಡಿಗೆಗೆ ನೀಡುವುದು, ಮತ್ತು (2) ಕೆಳಕಂಡತೆ ನಿರ್ದಿಷ್ಟಪಡಿಸಿದ ಸೇವೆಗಳು– (i) ಅಂಚೆ ಇಲಾಖೆಯಿಂದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶ, ಅಥವಾ ಸ್ಥಳೀಯ ಪ್ರಾಧಿಕಾರವನ್ನು ಹೊರತುಪಡಿಸಿದ ಒಬ್ಬ ವ್ಯಕ್ತಿಗೆ, ಶೀಘ್ರ ಅಂಚೆ, ವೇಗದೂತ ಪಾರ್ಸೆಲ್ ಅಂಚೆ, ಜೀವ ವಿಮೆ ಮತ್ತು ಏಜೆನ್ಸಿ ಸೇವೆಗಳ ರೂಪದಲ್ಲಿ ಒದಗಿಸಿದ ಸೇವೆಗಳು; (ii) ಒಂದು ಬಂದರು ಅಥವಾ ವಿಮಾನ ನಿಲ್ದಾಣದ ಆವರಣದ ಒಳಗೆ ಅಥವಾ ಹೊರಗೆ ಒಂದು ವಿಮಾನ ಅಥವಾ ಹಡಗಿಗೆ ಸಂಬಂಧಿಸಿದ ಸೇವೆಗಳು; (iii) ಸರಕುಗಳ ಅಥವಾ ಪ್ರಯಾಣಿಕರ ಸಾರಿಗೆ	ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶ, ಅಥವಾ ಸ್ಥಳೀಯ ಪ್ರಾಧಿಕಾರ	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಯಾವುದೇ ವ್ಯವಹಾರ ಎಂಟಿಟಿ
6	ಒಂದು ಕಂಪನಿ ಅಥವಾ ಕಾರ್ಪೊರೇಟ್ ಸಂಸ್ಥೆಯ ನಿರ್ದೇಶಕನಿಂದ ಸದರಿ ಕಂಪನಿ ಅಥವಾ ಕಾರ್ಪೊರೇಟ್ ಸಂಸ್ಥೆಗೆ ಪೂರೈಕೆ ಮಾಡಿದ ಸೇವೆಗಳು.	ಒಂದು ಕಂಪನಿ ಅಥವಾ ಕಾರ್ಪೊರೇಟ್	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಒಂದು ಕಂಪನಿ ಅಥವಾ ಕಾರ್ಪೊರೇಟ್ ಸಂಸ್ಥೆ
7	ಒಬ್ಬ ವಿಮಾ ಏಜೆಂಟನಿಂದ ವಿಮಾ ವ್ಯವಹಾರ ನಡೆಸುತ್ತಿರುವ ಯಾವುದೇ ವ್ಯಕ್ತಿಗೆ ಪೂರೈಕೆ ಮಾಡಿದ ಸೇವೆಗಳು.	ಒಬ್ಬ ವಿಮಾ ಏಜೆಂಟ್	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ವಿಮಾ ವ್ಯವಹಾರ ನಡೆಸುತ್ತಿರುವ ಯಾವುದೇ ವ್ಯಕ್ತಿ.
8	ವಸೂಲಿ ಏಜೆಂಟ್‌ನಿಂದ, ಒಂದು ಬ್ಯಾಂಕಿಂಗ್ ಕಂಪನಿ	ವಸೂಲಿ	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಒಂದು

	ಅಥವಾ ಒಂದು ಹಣಕಾಸಿನ ಸಂಸ್ಥೆ ಅಥವಾ ಬ್ಯಾಂಕೇತರ ಹಣಕಾಸಿನ ಕಂಪನಿಗೆ ಪೂರೈಕೆ ಮಾಡಿದ ಸೇವೆಗಳು.	ಏಜೆಂಟ್	ಬ್ಯಾಂಕಿಂಗ್ ಕಂಪನಿ ಅಥವಾ ಒಂದು ಹಣಕಾಸಿನ ಸಂಸ್ಥೆ ಅಥವಾ ಬ್ಯಾಂಕೇತರ ಹಣಕಾಸಿನ ಕಂಪನಿ
9	ಒಬ್ಬ ಲೇಖಕ, ಸಂಗೀತ ಸಂಯೋಜಕ, ಛಾಯಗ್ರಾಹಕ, ಕಲಾವಿದ ಅಥವಾ ಅಂಥವರುಗಳಿಂದ, ಮೂಲ ಸಾಹಿತ್ಯ, ನಾಟಕ, ಸಂಗೀತ ಅಥವಾ ಕಲಾ ಕಾರ್ಯಗಳಿಗೆ ಸಬಂಧಿಸಿದಂತೆ ಕಾಪಿರೈಟ್ ಅಧಿನಿಯಮ, 1957ರ ಪ್ರಕರಣ 13ರ ಉಪಪ್ರಕರಣ (1)ರ ಉಪಖಂಡ (ಎ)ಯ ಅಡಿಯಲ್ಲಿ ವ್ಯಾಪ್ತವಾದ ಕಾಪಿರೈಟ್‌ನ ಬಳಕೆ ಅಥವಾ ಅನುಭೋಗಿಸುವಿಕೆಯನ್ನು, ಪ್ರಕಾಶಕ, ಸಂಗೀತ ಕಂಪನಿ, ನಿರ್ಮಾಪಕ ಅಥವಾ ಅಂಥವರುಗಳಿಗೆ ವರ್ಗಾಯಿಸುವ ಅಥವಾ ಅನುಮತಿಸುವ ಮೂಲಕ ಪೂರೈಕೆ ಮಾಡಿದ ಸೇವೆಗಳು.	ಲೇಖಕ, ಸಂಗೀತ ಸಂಯೋಜಕ, ಛಾಯಗ್ರಾಹಕ, ಕಲಾವಿದ ಅಥವಾ ಅಂಥವರುಗಳು	ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ ಪ್ರಕಾಶಕ, ಸಂಗೀತ ಕಂಪನಿ, ನಿರ್ಮಾಪಕ ಅಥವಾ ಅಂಥವರುಗಳು
[476][10	ಭಾರತೀಯ ರಿಸರ್ವ್ ಬ್ಯಾಂಕಿನ ಮೇಲ್ವಿಚಾರಣಾ ಸಮಿತಿಯ ಸದಸ್ಯುರುಗಳಿಂದ ಸೇವೆಗಳು	ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಂರಚಿಸಿದ ಮೇಲ್ವಿಚಾರಣಾ ಸಮಿತಿಯ ಸದಸ್ಯುರುಗಳು	ಭಾರತೀಯ ರಿಸರ್ವ್ ಬ್ಯಾಂಕ್]

ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ,–

(ಎ) ಸರಕುಗಳ ಸಾಗಾಣಿಕಾ ವಾಹನದದಲ್ಲಿ ರಸ್ತೆ ಮೂಲಕ ಸರಕುಗಳ ಸಾಗಾಣಿಕೆಗಾಗಿ ಸಾಗಾಣಿಕಾ ವೆಚ್ಚವನ್ನು ಸಂದಾಯ ಮಾಡುವ ಅಥವಾ ಸಂದಾಯ ಮಾಡುವುದಕ್ಕೆ ಬಾಧ್ಯನಿರುವ ತೆರಿಗೆದಾಯಕ ಗಡಿಯಲ್ಲಿ ನೆಲೆಗೊಂಡಿರುವ ವ್ಯಕ್ತಿಯನ್ನು, ಈ ಅಧಿಸೂಚನೆಯ ಉದ್ದೇಶಕ್ಕಾಗಿ ಸೇವೆಗಳನ್ನು ಸ್ವೀಕರಿಸುವ ವ್ಯಕ್ತಿ ಎಂದು ಪರಿಗಣಿಸತಕ್ಕದ್ದು.

(ಬಿ) "ಕಾರ್ಪೊರೇಟ್ ಸಂಸ್ಥೆ"ಯು ಕಂಪನಿಗಳ ಅಧಿನಿಯಮ, 2013ರ(2013ರ ಕೇಂದ್ರ ಅಧಿನಿಯಮ 18) ಪ್ರಕರಣ 2ರ ಉಪಖಂಡ (11)ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

(ಸಿ) ತೆರಿಗೆದಾಯಕ ಕ್ಷೇತ್ರದಲ್ಲಿ ನೆಲೆಗೊಂಡಿರುವ, ಸಂದರ್ಭಾನುಸಾರವಾಗಿ, ವ್ಯಾಜ್ಯದಾರನಾಗಿರುವ, ಅರ್ಜಿದಾರನಾಗಿರುವ ಅಥವಾ ಮನವಿದಾರನಾಗಿರುವ ವ್ಯವಹಾರ ಎಂಟಿಟಿಯನ್ನು, ಈ ಅಧಿಸೂಚನೆಯ ಉದ್ದೇಶಕ್ಕಾಗಿ ಕಾನೂನು ಸೇವೆಗಳನ್ನು ಸ್ವೀಕರಿಸುವ ವ್ಯಕ್ತಿಯಾಗಿ ಪರಿಗಣಿಸತಕ್ಕದ್ದು.

(ಡಿ) ಈ ಅಧಿಸೂಚನೆಯಲ್ಲಿ ಉಪಯೋಗಿಸಿದ ಮತ್ತು ಪರಿಭಾಷಿಸದ ಆದರೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಪರಿಭಾಷಿಸಲಾಗಿರುವ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಇವುಗಳಿಗೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

(ಇ) [477]ಮಿತ ಹೊಣೆಗಾರಿಕೆ ಪಾಲುದಾರಿಕೆ ಅಧಿನಿಯಮ, 2008ರ (2009ರ 6) ಉಪಬಂಧಗಳ ಅಡಿಯಲ್ಲಿ ರಚಿತವಾದ ಅಥವಾ ನೋಂದಣಿಯಾದ ಒಂದು "ಮಿತ ಹೊಣೆಗಾರಿಕೆ ಪಾಲುದಾರಿಕೆ"ಯನ್ನು ಸಹ ಪಾಲುದಾರಿಕಾ ಸಂಸ್ಥೆ ಅಥವಾ ಒಂದು ಸಂಸ್ಥೆ ಎಂದು ಪರಿಗಣಿಸತಕ್ಕದ್ದು.]

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

---

[476] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (33/2017) ದಿನಾಂಕ 13–10–2017ರ ಮೂಲಕ ಸೇರಿಸಲಾಗಿದೆ.

[477] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (22/2017) ದಿನಾಂಕ 22–08–2017ರ ಮೂಲಕ ಸೇರಿಸಲಾಗಿದೆ.

ಆರ್ಥಿಕ ಸಚಿವಾಲಯ

ಅಧಿಸೂಚನೆ (14/2017)

ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 7ರ ಉಪಪ್ರಕರಣ (2) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸಾರ್ವಜನಿಕ ಪ್ರಾಧಿಕಾರದಂತೆ ತೊಡಗಿಕೊಂಡು ಕೆಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಕೈಗೊಳ್ಳುವ ಕೆಳಕಂಡ ಚಟುವಟಿಕೆಗಳು ಅಥವಾ ವ್ಯವಹಾರಗಳನ್ನು, ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸತಕ್ಕದ್ದು ಎಂದು ಈ ಮೂಲಕ ಅಧಿಸೂಚಿಸುತ್ತದೆ, ಅಂದರೆ:–

> "ಸಂವಿಧಾನದ ಪರಿಚ್ಛೇದ 243ಜಿಯ ಅಡಿಯಲ್ಲಿ ಒಂದು ಪಂಚಾಯಿತಿಗೆ ವಹಿಸಿದ ಒಂದು ಪ್ರಕಾರ್ಯಕ್ಕೆ ಸಂಬಂಧಿಸಿದ ಯಾವುದೇ ಚಟುವಟಿಕೆ ಮೂಲಕ ಒದಗಿಸಿದ ಸೇವೆಗಳು."

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಆರ್ಥಿಕ ಸಚಿವಾಲಯ

ಅಧಿಸೂಚನೆ (15/2017)

ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 54ರ ಉಪಪ್ರಕರಣ (3)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅನುಸೂಚಿ II ರ ವಿಷಯ 5ರ ಉಪವಿಷಯ (ಬಿ)ನಲ್ಲಿ ನಿರ್ದಿಷ್ಟಪಡಿಸಿರುವ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಸದರಿ ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮದ ಪ್ರಕರಣ 54ರ ಉಪಪ್ರಕರಣ (3)ರ ಅಡಿಯಲ್ಲಿನ ಬಳಕೆಯಾಗದ ಹೂಡುವಳಿ ತೆರಿಗೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ ಎಂದು ಈ ಮೂಲಕ ಅಧಿಸೂಚಿಸುತ್ತದೆ.

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಆರ್ಥಿಕ ಸಚಿವಾಲಯ

ಅಧಿಸೂಚನೆ (16/2017)

ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 55ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು,

(i) ಸಂಯುಕ್ತ ರಾಷ್ಟ್ರಗಳ ಅಥವಾ ಒಂದು ನಿರ್ದಿಷ್ಟಪಡಿಸಿದ ಅಂತರರಾಷ್ಟ್ರೀಯ ಸಂಘಟನೆಯನ್ನು; ಮತ್ತು

(ii) ಭಾರತದಲ್ಲಿನ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆ, ಅಥವಾ ಅವುಗಳಲ್ಲಿ ನಿಯುಕ್ತಿಗೊಳಿಸಿದ ರಾಯಭಾರ ಏಜೆಂಟ್‌ಗಳು ಅಥವಾ ಕೆರಿಯರ್ ಕಾನ್ಸುಲರ್ ಅಧಿಕಾರಿಗಳನ್ನು

ಸದರಿ ಪ್ರಕರಣದ ಉದ್ದೇಶಗಳಿಗಾಗಿ ಕೆಳಕಂಡ ಷರತ್ತುಗಳೊಂದಿಗೆ ಈ ಮೂಲಕ ನಿರ್ದಿಷ್ಟಪಡಿಸುತ್ತದೆ:–

(ಎ) ಸಂಯುಕ್ತ ರಾಷ್ಟ್ರಗಳ ಅಥವಾ ನಿರ್ದಿಷ್ಟಪಡಿಸಿದ ಅಂತರರಾಷ್ಟ್ರೀಯ ಸಂಘಟನೆಗಳು, ಅವುಗಳಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ

ಮರುಪಾವತಿಯನ್ನು ಕ್ಲೇಮು ಮಾಡಲು, ಆ ಸರಕು ಮತ್ತು ಸೇವೆಗಳನ್ನು, ಸಂಯುಕ್ತ ರಾಷ್ಟ್ರಗಳ ಅಥವಾ ನಿರ್ದಿಷ್ಟಪಡಿಸಿದ ಅಂತಹ ಅಂತರರಾಷ್ಟ್ರೀಯ ಸಂಘಟನೆಯ ಕಛೇರಿಯ ಅಧಿಕೃತ ಉಪಯೋಗಕ್ಕೆ ಮಾತ್ರ ಬಳಸಿದೆ ಮತ್ತು ಬಳಸಲು ಉದ್ದೇಶಿಸಿದೆ ಎಂಬ ಸಂಯುಕ್ತ ರಾಷ್ಟ್ರಗಳ ಅಥವಾ ನಿರ್ದಿಷ್ಟಪಡಿಸಿದ ಅಂತಹ ಅಂತರರಾಷ್ಟ್ರೀಯ ಸಂಘಟನೆಯ ಪ್ರಮಾಣಪತ್ರಕ್ಕೆ ಒಳಪಟ್ಟು, ಹಕ್ಕುಳ್ಳವರಾಗಿರತಕ್ಕದ್ದು.

(ಬಿ) ಭಾರತದಲ್ಲಿನ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆ, ಅಥವಾ ಇಲ್ಲಿ ನಿಯುಕ್ತಿಗೊಳಿಸಿದ ರಾಯಭಾರ ಏಜೆಂಟ್‌ಗಳು ಅಥವಾ ಕೆರಿಯರ್ ಕಾನ್ಸುಲರ್ ಅಧಿಕಾರಿಗಳು ಕೆಳಕಂಡವುಗಳಿಗೆ ಒಳಪಟ್ಟು, ಅವರುಗಳಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಲು, ಹಕ್ಕುಳ್ಳವರಾಗಿರತಕ್ಕದ್ದು.

(i) ಪರಸ್ಪರತೆಯ ತತ್ವದ ಆಧಾರದ ಮೇಲೆ, ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಶಿಷ್ಟಾಚಾರದ ವಿಭಾಗದಿಂದ ನೀಡಲಾದ ಪ್ರಮಾಣ ಪತ್ರದಲ್ಲಿ ಗೊತ್ತುಪಡಿಸಿದಂತೆ ಭಾರತದಲ್ಲಿನ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆ, ಅಥವಾ ಇಲ್ಲಿ ನಿಯುಕ್ತಿಗೊಳಿಸಿದ ರಾಯಭಾರ ಏಜೆಂಟ್‌ಗಳು ಅಥವಾ ಕೆರಿಯರ್ ಕಾನ್ಸುಲರ್ ಅಧಿಕಾರಿಗಳು ರಾಜ್ಯ ತೆರಿಗೆಯ ಮರುಪಾವತಿಗೆ ಹಕ್ಕುಳ್ಳವರಾಗಿರತಕ್ಕದ್ದು.

(ii) ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆಯೆ ಮುಖ್ಯಸ್ಥ ಅಥವಾ ಆತನಿಂದ ಪ್ರಾಧಿಕೃತನಾದ ಅಂಥ ಮಿಷನ್ನಿನ ಅಥವಾ ಹುದ್ದೆಯ ಯಾವುದೇ ವ್ಯಕ್ತಿ, ಆತನಿಂದ ಅಥವಾ ಪ್ರಾಧಿಕೃತ ವ್ಯಕ್ತಿಯಿಂದ ಸಹಿಮಾಡಿದ, ಸ್ವೀಕರಿಸಿದ ಸೇವೆಗಳ ಪೂರೈಕೆಯು, ಸದರಿ ವಿದೇಶಿ ರಾಯಾಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆಯ ಕಛೇರಿಯ ಅಧಿಕೃತ ಉದ್ದೇಶಕ್ಕೆ; ಅಥವಾ ಸದರಿ ರಾಯಭಾರ ಏಜೆಂಟ್‌ಗಳ ಅಥವಾ ಕೆರಿಯರ್ ಕಾನ್ಸುಲರ್ ಅಧಿಕಾರಿಗಳ ಅಥವಾ ಆತನ/ಅವಳ ಕುಟುಂಬದ ಸದಸ್ಯರ ವೈಯಕ್ತಿಕ ಉಪಯೋಗಕ್ಕಾಗಿ ಎಂದು ನಿರೂಪಿಸುವ ಒಂದು ಮುಚ್ಚಳಿಕೆಯನ್ನು ಮೂಲಪ್ರತಿಯಲ್ಲಿ ಒದಗಿಸತಕ್ಕದ್ದು;

(iii) ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಸಂಬಂಧಿತ ರಾಯಭಾರ ಮಿಷನ್ ಅಥವಾ ಕಾನ್ಸುಲೇಟ್ ಅಥವಾ ಆತನಿಂದ ಪ್ರಾಧಿಕೃತನಾದ ಒಬ್ಬ ಅಧಿಕಾರಿಯು ಕೆಳಕಂಡಂತೆ ಒಂದು ಪ್ರಮಾಣಪತ್ರವನ್ನು ಹಾಜರುಪಡಿಸುವುದು,–

(I) ಸರಕುಗಳು ಮಿಷನ್ ಅಥವಾ ಸಂದರ್ಭಾನುಸಾರವಾಗಿ, ಕಾನ್ಸುಲೇಟ್‌ನ ಬಳಕೆಗಾಗಿ ಇಡಲಾಗಿದೆ, ಅಥವಾ ಬಳಕೆಯಲ್ಲಿವೆ;

(II) ಸರಕುಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವರ್ಷ ಕೊನೆಗೊಳ್ಳುವ ಮೊದಲು, ಮುಂದುವರೆದು ಪೂರೈಕೆ ಮಾಡುವುದಿಲ್ಲ ಅಥವಾ ಅನ್ಯಥಾ ವಿಲೇವಾರಿ ಮಾಡುವುದಿಲ್ಲ; ಮತ್ತು

(III) ಉಪಖಂಡ (I)ರ ಅನುಸರಣೆಯಾಗದಿದ್ದ ಸಂದರ್ಭದಲ್ಲಿ, ರಾಯಭಾರ ಅಥವಾ ಕಾನ್ಸುಲರ್ ಮಿಷನ್, ಅವರುಗಳಿಗೆ ಸಂದಾಯ ಮಾಡಲಾದ ಮರುಪಾವತಿಯನ್ನು ವಾಪಸ್ಸು ಸಂದಾಯ ಮಾಡುತ್ತದೆ;

(iv) ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಶಿಷ್ಟಾಚಾರದ ವಿಭಾಗವು, ಭಾರತದಲ್ಲಿನ ಯಾವುದೇ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆಗೆ, ಪ್ರಮಾಣ ಪತ್ರವನ್ನು ನೀಡಿದ, ತರುವಾಯವಾಗಿ ಅದನ್ನು ಹಿಂಪಡೆಯಲು ನಿರ್ಧರಿಸಿದ ಸಂದರ್ಭದಲ್ಲಿ, ಅದು, ಅಂಥ ಪ್ರಮಾಣ ಪತ್ರದ ಹಿಂಪಡೆಯುವಿಕೆಯನ್ನು ಭಾರತದಲ್ಲಿನ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆಗೆ ತಿಳಿಸತಕ್ಕದ್ದು;

(v) ಭಾರತದಲ್ಲಿನ ವಿದೇಶಿ ರಾಯಭಾರ ಮಿಷನ್ ಅಥವಾ ಕಾನ್ಸುಲರ್ ಹುದ್ದೆಗೆ, ಕಛೇರಿಯ ಅಧಿಕೃತ ಉಪಯೋಗಕ್ಕಾಗಿ ಅಥವಾ ಕುಟುಂಬ ಸದಸ್ಯರ ಉಪಯೋಗದ ಉದ್ದೇಶಗಳಿಗಾಗಿ ಮಂಜೂರು ಮಾಡಲಾದ ರಾಜ್ಯ ತೆರಿಗೆಯ ಮರುಪಾವತಿಯು, ಅಂಥ ಪ್ರಮಾಣ ಪತ್ರದ ಹಿಂಪಡೆಯುವಿಕೆಯ ದಿನಾಂಕದಿಂದ ಲಭ್ಯವಿರತಕ್ಕದ್ದಲ್ಲ.

ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು, "ನಿರ್ದಿಷ್ಟಪಡಿಸಿದ ಅಂತರರಾಷ್ಟ್ರೀಯ ಸಂಘಟನೆ" ಎಂದರೆ, ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಪ್ರಕರಣ 3ಕ್ಕೆ ಅನುಸಾರವಾಗಿ ಕೇಂದ್ರ ಸರ್ಕಾರದಿಂದ ಘೋಷಿಸಿದ, ಸದರಿ ಅಧಿನಿಯಮದ ಅನುಸೂಚಿಯ ಉಪಬಂಧಗಳು ಅನ್ವಯವಾಗುವ ಅಂತರರಾಷ್ಟ್ರೀಯ ಸಂಘಟನೆಯಾಗಿದೆ.

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಆರ್ಥಿಕ ಸಚಿವಾಲಯ

ಅಧಿಸೂಚನೆ (17/2017)

ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 9ರ ಉಪಪ್ರಕರಣ (5)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕೆಳಕಂಡ ಸೇವೆಗಳ ವರ್ಗಗಳ ಸಂದರ್ಭದಲ್ಲಿ, ರಾಜ್ಯದೊಳಗಿನ ಪೂರೈಕೆಗಳ ಮೇಲೆ ತೆರಿಗೆಯನ್ನು ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನು ಸಂದಾಯ ಮಾಡತಕ್ಕದ್ದು ಎಂದು ಈ ಮೂಲಕ ಅಧಿಸೂಚಿಸುತ್ತದೆ–

(i) ರೇಡಿಯೋ–ಟ್ಯಾಕ್ಸಿ, ಮೋಟಾರ್ ಕ್ಯಾಬ್, ಮ್ಯಾಕ್ಸಿ ಕ್ಯಾಬ್ ಮತ್ತು ಮೋಟಾರು ಸೈಕಲ್‌ಗಳಿಂದ ಪ್ರಯಾಣಿಕರ ಸಾರಿಗೆಯ ರೂಪದಲ್ಲಿನ ಸೇವೆಗಳು;

(ii) ಹೋಟೆಲ್‌ಗಳು, ತಂಗುದಾಣಗಳು (ಇನ್ಸ್), ಅತಿಥಿ ಗೃಹಗಳು, ಕ್ಲಬ್‌ಗಳು, ಶಿಬಿರದಾಣಗಳು ಅಥವಾ ವಸತಿ ಅಥವಾ ತಂಗುವಿಕೆಯ ಉದ್ದೇಶಗಳಿಗಾಗಿರುವ ಇತರೇ ವಾಣಿಜ್ಯ ಸ್ಥಳಗಳಲ್ಲಿ ವಸತಿಯನ್ನು ಒದಗಿಸುವ ರೂಪದಲ್ಲಿನ ಸೇವೆಗಳು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 22ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಣಿಗೆ ಬಾಧ್ಯನಾದ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನ ಮೂಲಕ ವ್ಯಕ್ತಿಯು ಅಂಥ ಸೇವೆಗಳನ್ನು ಒದಗಿಸುತ್ತಿದ್ದಲ್ಲಿ ಅದನ್ನು ಹೊರತುಪಡಿಸಿದಂತೆ;

(iii) [478][ಕೊಳಾಯಿಗೆಲಸ, ಮರಗೆಲಸ ಮುಂತಾದ ಮನೆಗೆಲಸದ ರೂಪದ ಸೇವೆಗಳು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 22ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಣಿಗೆ ಬಾಧ್ಯನಾದ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನ ಮೂಲಕ ವ್ಯಕ್ತಿಯು ಅಂಥ ಸೇವೆಗಳನ್ನು ಒದಗಿಸುತ್ತಿದ್ದಲ್ಲಿ ಅದನ್ನು ಹೊರತುಪಡಿಸಿದಂತೆ;]

ವಿವರಣೆ.– ಈ ಅಧಿಸೂಚನೆಯ ಉದ್ದೇಶಗಳಿಗಾಗಿ,–

(ಎ)"ರೇಡಿಯೋ ಟ್ಯಾಕ್ಸಿ" ಎಂದರೆ, ಕೇಂದ್ರ ನಿಯಂತ್ರಣ ಕಚೇರಿಯೊಂದಿಗೆ ಮತ್ತು ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (ಜಿಪಿಎಸ್) ಅಥವಾ ಜನರಲ್ ಪ್ಯಾಕೆಟ್ ರೇಡಿಯೋ ಸೇವೆಯನ್ನು (ಜಿಪಿಆರ್‌ಎಸ್) ಬಳಸಿ ಜಾಡು ಹಿಡಿಯಲು ಸಕ್ರಿಯವಾಗಿರುವ ಎರಡು–ಹಾದಿಯ, ರೇಡಿಯೋ ಸಂವಹನದಲ್ಲಿನ ಯಾವುದಾದರೂ ಹೆಸರಿನಿಂದ ಕರೆಯಲಾಗುವ ರೇಡಿಯೋ ಕ್ಯಾಬ್‌ನ್ನು ಒಳಗೊಂಡಿರುವ ಟ್ಯಾಕ್ಸಿಯಾಗಿದೆ.

(ಬಿ)"ಮೋಟಾರ್ ಕ್ಯಾಬ್, ಮ್ಯಾಕ್ಸಿ ಕ್ಯಾಬ್ ಮತ್ತು ಮೋಟಾರು ಸೈಕಲ್"ಗಳು, ಮೋಟಾರು ವಾಹನ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಪ್ರಕರಣ 2ರ ಖಂಡ (22), ಖಂಡ (25) ಮತ್ತು ಖಂಡ (26)ರಲ್ಲಿ ಇವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

2. ಈ ಅಧಿಸೂಚನೆಯು 2017ರ ಜುಲೈ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಆರ್ಥಿಕ ಸಚಿವಾಲಯ
ಅಧಿಸೂಚನೆ (26/2017)
ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 21.09.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 11ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಹೀಗೆ ಮಾಡುವುದು, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಅಗತ್ಯವೆಂದು ಮನದಟ್ಟು ಮಾಡಿಕೊಂಡಿದ್ದು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಣುಶಕ್ತಿ ಇಲಾಖೆಯಿಂದ ಭಾರತೀಯ ಪರಮಾಣು ಶಕ್ತಿ ನಿಗಮ ನಿಯಮಿತಕ್ಕೆ ಪೂರೈಕೆ ಮಾಡಿದ ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನಸೂಚಿಯ ಅಧ್ಯಾಯ 28ರಲ್ಲಿ ಬರುವ ಗಡಸು ನೀರು ಮತ್ತು ಪರಮಾಣು ಇಂಧನಗಳ ರಾಜ್ಯದೊಳಗಿನ ಪೂರೈಕೆಗಳಿಗೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 9ರ ಅಡಿಯಲ್ಲಿ, ಅವುಗಳ ಮೇಲೆ ವಿಧಿಸಬಹುದಾದ ರಾಜ್ಯ ತೆರಿಗೆಯಿಂದ ಸಂಪೂರ್ಣವಾಗಿ ಈ ಮೂಲಕ ವಿನಾಯಿತಿ ನೀಡುತ್ತದೆ;

ಆರ್ಥಿಕ ಸಚಿವಾಲಯ
ಅಧಿಸೂಚನೆ (37/2017)
ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

[478] ಅಧಿಸೂಚನೆ ಸಂ. ಆಇ 48 ಸಿಎಸ್‌ಎಲ್ 2017 (23/2017) ದಿನಾಂಕ 22–08–2017ರ ಮೂಲಕ ಸೇರಿಸಲಾಗಿದೆ.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 9ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕೆಳಕಂಡ ಕೋಷ್ಟಕದಲ್ಲಿನ ಕಾಲಂ (3)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯ ಮತ್ತು ಸದರಿ ಕೋಷ್ಟಕದ ಕಾಲಂ (2)ರಲ್ಲಿನ ಸಂಬಂಧಪಟ್ಟ ನಮೂದಿನಲ್ಲಿ ನಿರ್ದಿಷ್ಟ ಪಡಿಸಿರುವ ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1962ರ (1962ರ ಕೇಂದ್ರ ಅಧಿನಿಯಮ 52) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ, ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಅಥವಾ ಸಂದರ್ಭಾನುಸಾರವಾಗಿ ಅಧ್ಯಾಯದ ಅಡಿಯಲ್ಲಿ ಬರುವ ಸರಕುಗಳ ರಾಜ್ಯದೊಳಗಿನ ಪೂರೈಕೆಯ ಮೇಲೆ, ಕಾಲಂ (4)ರಲ್ಲಿನ ಸಂಬಂಧಪಟ್ಟ ನಮೂದಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ತೆರಿಗೆಯ ದರದಲ್ಲಿ, ಈ ಅಧಿಸೂಚನೆಗೆ ಅನುಬಂಧಿಸಲಾದ, ಮೇಲೆ ಹೇಳಲಾದ ಕೋಷ್ಟಕದ ಕಾಲಂ (5)ರಲ್ಲಿ ಸಂಬಂಧಿತ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಪಟ್ಟ ಷರತ್ತುಗಳು, ಯಾವುದಾದರು ಇದ್ದರೆ, ಅವುಗಳಿಗೆ ಒಳಪಟ್ಟು ಈ ಮೂಲಕ ರಾಜ್ಯ ತೆರಿಗೆಯನ್ನು ಅಧಿಸೂಚಿಸುತ್ತದೆ:

ಕೋಷ್ಟಕ

ಕ್ರ.ಸಂ.	ಅಧ್ಯಾಯ/ಶಿರೋನಾಮೆ/ ಉಪ–ಶಿರೋನಾಮೆ/ ದರದ ವಸ್ತು	ಸರಕುಗಳ ವಿವರ	ದರ	ಷರತ್ತು ಸಂ.
(1)	(2)	(3)	(4)	(5)
1.	87	ಮೋಟಾರು ವಾಹನಗಳು	ಕರ್ನಾಟಕ ವಿಶೇಷ ರಾಜ್ಯ ಪತ್ರ, ಭಾಗ IVA, ಸಂಖ್ಯೆ 591 ದಿನಾಂಕ 29ನೇ ಜೂನ್, 2017ರಲ್ಲಿ ಪ್ರಕಟಿಸಲಾದ ಅಧಿಸೂಚನೆ ಸಂ. (01/2017) ಆಇ 48 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 29ನೇ ಜೂನ್, 2017ರ ಅಡಿಯಲ್ಲಿನ ಅಂಥ ಸರಕುಗಳ ಮೇಲೆ ಅನ್ಯಥಾ ಅನ್ವಯವಾಗುವ ರಾಜ್ಯ ತೆರಿಗೆಯ ಶೇಕಡ 65ರಷ್ಟು.	1
2.	87	ಮೋಟಾರು ವಾಹನಗಳು	ಕರ್ನಾಟಕ ವಿಶೇಷ ರಾಜ್ಯ ಪತ್ರ, ಭಾಗ IVA, ಸಂಖ್ಯೆ 591 ದಿನಾಂಕ 29ನೇ ಜೂನ್, 2017ರಲ್ಲಿ ಪ್ರಕಟಿಸಲಾದ ಅಧಿಸೂಚನೆ ಸಂ. (01/2017) ಆಇ 48 ಸಿಎಸ್ಎಲ್ 2017, ಬೆಂಗಳೂರು ದಿನಾಂಕ: 29ನೇ ಜೂನ್, 2017ರ ಅಡಿಯಲ್ಲಿನ ಅಂಥ ಸರಕುಗಳ ಮೇಲೆ ಅನ್ಯಥಾ ಅನ್ವಯವಾಗುವ ರಾಜ್ಯ ತೆರಿಗೆಯ ಶೇಕಡ 65ರಷ್ಟು.	2

2. ಪರಂತು, ಈ ಅಧಿಸೂಚನೆಯಲ್ಲಿ ಒಳಗೊಂಡಿರುವ ಯಾವದು, ಜುಲೈ 1ನೇ, 2020ರಂದು ಅಥವಾ ನಂತರ ಅನ್ವಯವಾಗತಕ್ಕದ್ದಲ್ಲ.

ವಿವರಣೆ– ಈ ಅಧಿಸೂಚನೆಯ ಉದ್ದೇಶಕ್ಕಾಗಿ,–

(1) **"ದರದ ವಸ್ತು", "ಉಪ–ಶಿರೋನಾಮೆ" "ಶಿರೋನಾಮೆ"** ಮತ್ತು **"ಅಧ್ಯಾಯ"** ಎನ್ನತಕ್ಕದ್ದು, ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಅನುಕ್ರಮವಾಗಿ, ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಮತ್ತು ಅಧ್ಯಾಯವಾಗಿರತಕ್ಕದ್ದು.

(2) ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯ ಅರ್ಥೈಸುವಿಕೆಯ ನಿಯಮಗಳು, ಪ್ರಕರಣ ಮತ್ತು ಅಧ್ಯಾಯದ ಟಿಪ್ಪಣಿಗಳು ಹಾಗೂ ಮೊದಲನೇ ಅನುಸೂಚಿಯ ಸಾಮಾನ್ಯ ವಿವರಣಾ ಟಿಪ್ಪಣಿಗಳನ್ನು ಒಳಗೊಂಡಂತೆ, ಆಗಬಹುದಾದಷ್ಟು ಮಟ್ಟಿಗೆ, ಈ ಅಧಿಸೂಚನೆಯ ಅರ್ಥೈಸುವಿಕೆಗೆ ಅನ್ವಯವಾಗತಕ್ಕದ್ದು.

ಅನುಬಂಧ

ಷರತ್ತು ಸಂಖ್ಯೆ	ಷರತ್ತು
1.	ಮೋಟಾರು ವಾಹನವು ಭೋಗ್ಯಕ್ಕೆ ಕೊಡುವವನಿಂದ 1ನೇ ಜುಲೈ, 2017ಕ್ಕಿಂತ ಮುಂಚಿತವಾಗಿ ಖರೀದಿಯಾಗಿರಬೇಕು ಮತ್ತು ಭೋಗ್ಯದ ಮೇಲೆ 1ನೇ ಜುಲೈ, 2017ಕ್ಕಿಂತ ಮೊದಲೇ ಪೂರೈಕೆಯಾಗಿರಬೇಕು
2.	i. ಮೋಟಾರು ವಾಹನದ ಪೂರೈಕೆದಾರನು ಒಬ್ಬ ನೋಂದಾಯಿತ ವ್ಯಕ್ತಿಯಾಗಿರಬೇಕು. ii. ಅಂಥ ಪೂರೈಕೆದಾರನು, 1ನೇ ಜುಲೈ, 2017ಕ್ಕಿಂತ ಮುಂಚಿತವಾಗಿ ಮೋಟಾರು ವಾಹನವನ್ನು

	ಖರೀದಿ ಮಾಡಿರಬೇಕು ಮತ್ತು ಅಂಥ ವಾಹನದ ಮೇಲೆ ಸಂದಾಯ ಮಾಡಿದ ಕೇಂದ್ರ ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ ಅಥವಾ ಯಾವುದೇ ಇತರ ತೆರಿಗೆಗಳ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿರಬಾರದು.

ಆರ್ಥಿಕ ಸಚಿವಾಲಯ

ಅಧಿಸೂಚನೆ (39/2017)

ಸಂಖ್ಯೆ. ಆಇ 48 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ: 29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 9ರ ಉಪಪ್ರಕರಣ (1) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕೆಳಕಂಡ ಕೋಷ್ಟಕದಲ್ಲಿನ ಕಾಲಂ (3)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯ ಮತ್ತು ಕಾಲಂ (2)ರಲ್ಲಿನ ಸಂಬಂಧಪಟ್ಟ ನಮೂದಿನಲ್ಲಿ ನಿರ್ದಿಷ್ಟ ಪಡಿಸಿರುವ ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಅಥವಾ ಸಂದರ್ಭಾನುಸಾರವಾಗಿ ಅಧ್ಯಾಯದ ಅಡಿಯಲ್ಲಿ ಬರುವ ಸರಕುಗಳ ರಾಜ್ಯದೊಳಗಿನ ಪೂರೈಕೆಯ ಮೇಲೆ, ಶೇಕಡ 2.5ರ ತೆರಿಗೆಯ ದರದಲ್ಲಿ, ರಾಜ್ಯ ತೆರಿಗೆಯನ್ನು ಕೋಷ್ಟಕದ ಕಾಲಂ (4)ರಲ್ಲಿನ ಸಂಬಂಧಿತ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಪಟ್ಟ ಷರತ್ತುಗಳಿಗೆ ಒಳಪಟ್ಟು, ಈ ಮೂಲಕ ಅಧಿಸೂಚಿಸುತ್ತದೆ:

ಕ್ರ.ಸಂ.	ಅಧ್ಯಾಯ/ಶಿರೋನಾಮೆ/ ಉಪ–ಶಿರೋನಾಮೆ/ ದರದ ವಸ್ತು	ಸರಕುಗಳ ವಿವರ	ಷರತ್ತು
(1)	(2)	(3)	(4)
1.	19 ಅಥವಾ 21	ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಯುಕ್ತವಾಗಿ ಅನುಮೋದಿತವಾದ ಒಂದು ಯೋಜನೆಯ ಅಡಿಯಲ್ಲಿ ಸಮಾಜದಲ್ಲಿನ ಆರ್ಥಿಕ ನಿಮ್ನ ವರ್ಗಗಗಳಿಗೆ ವಿತರಣೆಗಾಗಿ ಉದ್ದೇಶಿಸಲಾಗಿರುವ ಹಾಗೂ ಅಳತೆಯ ಧಾರಕದಲ್ಲಿ ಇಡಲಾಗಿರುವ ಆಹಾರ ತಯಾರಿಕೆಗಳು.	ಅಂಥ ಆಹಾರ ತಯಾರಿಕೆಗಳ ಪೂರೈಕೆದಾರನು, ಭಾರತ ಸರ್ಕಾರದ ಉಪಕಾರ್ಯದರ್ಶಿ ಅಥವಾ ಸಂಬಂಧಪಟ್ಟ ರಾಜ್ಯ ಸರ್ಕಾರದ ಉಪಕಾರ್ಯದರ್ಶಿಯ ಶ್ರೇಣಿಗಿಂತ ಕಡಿಮೆಯಿರದ ಒಬ್ಬ ಅಧಿಕಾರಿಯಿಂದ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಯುಕ್ತವಾಗಿ ಅನುಮೋದಿತವಾದ ಒಂದು ಯೋಜನೆಯ ಅಡಿಯಲ್ಲಿ ಸಮಾಜದಲ್ಲಿನ ಆರ್ಥಿಕವಾಗಿ ನಿಮ್ನ ವರ್ಗಗಗಳಿಗೆ ಅಂಥ ಆಹಾರ ತಯಾರಿಕೆಗಳನ್ನು ವಿತರಿಸಲಾಗಿದೆ ಎಂದು, ಅಂಥ ಸರಕುಗಳ ಪೂರೈಕೆಯಾದ ದಿನಾಂಕದಿಂದ ಐದು ತಿಂಗಳ ಒಳಗಾಗಿ ಅಥವಾ ಈ ಸಂಬಂಧದಲ್ಲಿ, ಸಂದರ್ಭಾನುಸಾರವಾಗಿ ಕೇಂದ್ರ ತೆರಿಗೆಯ ಆಯುಕ್ತರು ಅಥವಾ ಕ್ಷೇತ್ರವ್ಯಾಪ್ತಿಯ ರಾಜ್ಯ ತೆರಿಗೆ ಆಯುಕ್ತರು ಅನುಮತಿಸಬಹುದಾದ ಅಂಥ ಮುಂದುವರಿದ ಅವಧಿಯ ಒಳಗಾಗಿ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.

ವಿವರಣೆ–

(1) ಈ ಅಧಿಸೂಚನೆಯಲ್ಲಿ "ದರದ ವಸ್ತು", "ಉಪ–ಶಿರೋನಾಮೆ" "ಶಿರೋನಾಮೆ" ಮತ್ತು "ಅಧ್ಯಾಯ" ಎನ್ನತಕ್ಕದ್ದು, ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಅನುಕ್ರಮವಾಗಿ, ದರದ ವಸ್ತು, ಉಪ–ಶಿರೋನಾಮೆ, ಶಿರೋನಾಮೆ ಮತ್ತು ಅಧ್ಯಾಯವಾಗಿರತಕ್ಕದ್ದು.

(2) ಸೀಮಾಸುಂಕ ಟ್ಯಾರಿಫ್ ಅಧಿನಿಯಮ, 1975ರ (1975ರ ಕೇಂದ್ರ ಅಧಿನಿಯಮ 51) ರ ಮೊದಲನೇ ಅನುಸೂಚಿಯ ಅರ್ಥೈಸುವಿಕೆಯ ನಿಯಮಗಳು, ಪ್ರಕರಣ ಮತ್ತು ಅಧ್ಯಾಯದ ಟಿಪ್ಪಣಿಗಳು ಹಾಗೂ ಮೊದಲನೇ ಅನುಸೂಚಿಯ ಸಾಮಾನ್ಯ ವಿವರಣಾ ಟಿಪ್ಪಣಿಗಳನ್ನು ಒಳಗೊಂಡಂತೆ, ಆಗಬಹುದಾದಷ್ಟು ಮಟ್ಟಿಗೆ, ಈ ಅಧಿಸೂಚನೆಯ ಅರ್ಥೈಸುವಿಕೆಗೆ ಅನ್ವಯವಾಗತಕ್ಕದ್ದು.

2. ಈ ಅಧಿಸೂಚನೆಯು 2017ರ 18ನೇ ಅಕ್ಟೋಬರ್‌ರಂದು ಜಾರಿಗೆ ಬರತಕ್ಕದ್ದು.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017

ಪರಿವಿಡಿ

ಅಧ್ಯಾಯ	ವಿಷಯ	ಪುಟ ಸಂಖ್ಯೆಗಳು
ಅಧ್ಯಾಯI	**ಪ್ರಾರಂಭಿಕ**	3
ಅಧ್ಯಾಯII	**ರಾಜಿ ತೆರಿಗೆ**	
	ನಿಯಮಗಳು	3-8
	ನಮೂನೆಗಳು	84-90
ಅಧ್ಯಾಯ III	**ನೋಂದಣಿ**	
	ನಿಯಮಗಳು	6-14
	ನಮೂನೆಗಳು	91-150
ಅಧ್ಯಾಯ IV	**ಪೂರೈಕೆಯ ಮೌಲ್ಯದ ನಿರ್ಧರಣೆ**	
	ನಿಯಮಗಳು	14-18
ಅಧ್ಯಾಯ V	**ಹೂಡುವಳಿ ತೆರಿಗೆ ಜಮೆ**	
	ನಿಯಮಗಳು	18-26
	ನಮೂನೆಗಳು	151-156
ಅಧ್ಯಾಯVI	**ತೆರಿಗೆ ಬೆಲೆ ಪಟ್ಟಿ, ಜಮೆ ಮತ್ತು ಖರ್ಚು ಚೀಟಗಳು**	
	ನಿಯಮಗಳು	27-33
ಅಧ್ಯಾಯVII	**ಲೆಕ್ಕಪತ್ರಗಳು ಮತ್ತು ದಾಖಲೆಗಳು**	
	ನಿಯಮಗಳು	33-35
	ನಮೂನೆಗಳು	157
ಅಧ್ಯಾಯ VIII	**ರಿಟರ್ನ್‌ಗಳು**	
	ನಿಯಮಗಳು	36-45
	ನಮೂನೆಗಳು	158-203
ಅಧ್ಯಾಯ IX	**ತೆರಿಗೆಯ ಸಂದಾಯ**	
	ನಿಯಮಗಳು	45-48
	ನಮೂನೆಗಳು	210-218
ಅಧ್ಯಾಯ X	**ಮರುಪಾವತಿ**	
	ನಿಯಮಗಳು	49-57
	ನಮೂನೆಗಳು	219-239
ಅಧ್ಯಾಯ XI	**ಕರನಿರ್ಧರಣೆ ಮತ್ತು ಲೆಕ್ಕಪರಿಶೋಧನೆ**	
	ನಿಯಮಗಳು	57-59
	ನಮೂನೆಗಳು	240-263
ಅಧ್ಯಾಯ XII	**ಪೂರ್ವಭಾವಿ ನಿರ್ಣಯ**	
	ನಿಯಮಗಳು	59-60
	ನಮೂನೆಗಳು	264-268

ಅಧ್ಯಾಯ XIII	**ಅಪೀಲುಗಳು ಮತ್ತು ಪುನರೀಕ್ಷಣೆ**	
	ನಿಯಮಗಳು	60-62
	ನಮೂನೆಗಳು	269-284
ಅಧ್ಯಾಯ XIV	**ಸ್ಥಿತ್ಯಂತರಕಾಲೀನ ಉಪಬಂಧಗಳು**	
	ನಿಯಮಗಳು	63-64
	ನಮೂನೆಗಳು	285-293
ಅಧ್ಯಾಯ XV	**ಲಾಭಬಡಕತನ**	
	ನಿಯಮಗಳು	64-67
ಅಧ್ಯಾಯ XVI	**ಇ–ವೇ ನಿಯಮಗಳು**	
	ನಿಯಮಗಳು	67-76
	ನಮೂನೆಗಳು	321-325
ಅಧ್ಯಾಯ XVII	**ತಪಾಸಣೆ, ಶೋಧನೆ, ಮತ್ತು ವಶಕ್ಕೆ ತೆಗೆದುಕೊಳ್ಳುವುದು**	
	ನಿಯಮಗಳು	76-77
	ನಮೂನೆಗಳು	294-299
ಅಧ್ಯಾಯ XVIII	**ತಗಾದೆಗಳು ಮತ್ತು ವಸೂಲಿ**	
	ನಿಯಮಗಳು	77-83
	ನಮೂನೆಗಳು	300-318
ಅಧ್ಯಾಯ XIX	**ಅಪರಾಧಗಳು ಮತ್ತು ದಂಡಗಳು**	
	ನಿಯಮಗಳು	83
	ನಮೂನೆಗಳು	319-320

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017
ಆರ್ಥಿಕ ಸಚಿವಾಲಯ
ಅಧಿಸೂಚನೆ (4/2017)
ಸಂಖ್ಯೆ. ಆಇ 47 ಸಿಎಸ್‌ಎಲ್ 2017, ಬೆಂಗಳೂರು ದಿನಾಂಕ:29.06.2017.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ಅಧ್ಯಾಯ–I
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ಎಂದು ಕರೆಯಬಹುದು.

(2) ನಿಯಮ 1ರಿಂದ ನಿಯಮ 26ರವರೆಗಿನ ನಿಯಮಗಳು 2017ರ ಜೂನ್ 29ನೇ ದಿನದಿಂದ ಜಾರಿಗೆ ಬಂದಿವೆ ಎಂದು ಪರಿಭಾವಿಸತಕ್ಕದ್ದು.

(3) ಎಲ್ಲಾ ಇತರ ನಿಯಮಗಳು 2017ರ ಜುಲೈ ಮೊದಲನೇ ದಿನದಿಂದ ಜಾರಿಗೆ ಬರತಕ್ಕದ್ದು

2. ಪರಿಭಾಷೆಗಳು.– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಧಿನಿಯಮ"**ಎಂದರೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27);

(ಬಿ) **"ನಮೂನೆ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಸಿ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ;

(ಡಿ) **"ವಿಶೇಷ ಆರ್ಥಿಕ ವಲಯ"** ಎಂಬುದು **"ವಿಶೇಷ ಆರ್ಥಿಕ ವಲಯಗಳ ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ 28)** ಪ್ರಕರಣ 2ರ ಖಂಡ (ಝಡ್‌ಎ)ನಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಇ) ಇದರಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸದಿರುವ ಮತ್ತು ಅಧಿನಿಯಮದಲ್ಲಿ ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

ಅಧ್ಯಾಯ–II
ರಾಜಿತೆರಿಗೆ ನಿಯಮಗಳು

3. **ರಾಜಿ ತೆರಿಗೆ ವಿಧಿಸುವಿಕೆಯ ತಿಳಿಸುವುದು:**(1) ನಿಯಮ 24ರ ಉಪನಿಯಮ (1)ರ ಖಂಡ (ಬಿ)ಯ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇಲೆ ನೋಂದಣಿಯ ಮಂಜೂರಾತಿಯನ್ನು ಪಡೆದಿರುವ ಮತ್ತು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಯಾವೊಬ್ಬ ವ್ಯಕ್ತಿಯುವಿದ್ಯುನ್ಮಾನದ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನಾ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆಜಿಎಸ್‌ಟಿ ಸಿಎಂಪಿ–01**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿತವಾಗಿ, ಆದರೆ ಸದರಿ ದಿನದ ನಂತರದ ಮೂವತ್ತುದಿನಗಳ ತರುವಾಯವಾಗಿ ಅಲ್ಲದೆ, ಅಥವಾ ಈ ಸಂಬಂಧದಲ್ಲಿ ಆಯುಕ್ತರು ವಿಸ್ತರಿಸಬಹುದಾದ ಅಂಥ ಮುಂದಿನ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು.

ಪರಂತು ಗೊತ್ತುಪಡಿಸಲಾದ ದಿನದ ನಂತರ **ನಮೂನೆಜಿಎಸ್‌ಟಿ ಸಿಎಂಪಿ–01**ರಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಗೊತ್ತುಪಡಿಸಲಾದ ದಿನದಿಂದ ಯಾವುದೇ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ ಆದರೆ ಸದರಿ ದಿನದ ನಂತರ ಮಾಡಿದ ಪೂರೈಕೆಗಳಿಗಾಗಿ ಪೂರೈಕೆಯ ಬಿಲ್ಲನ್ನು ನೀಡತಕ್ಕದ್ದು.

(2) ನಿಯಮ 8ರ ಉಪನಿಯಮ (1)ರ ಅಡಿಯಲ್ಲಿ ನೋಂದಣಿಗಾಗಿ ಅರ್ಜಿಸಲ್ಲಿಸುವ ಯಾವೊಬ್ಬ ವ್ಯಕ್ತಿಯು, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು **ನಮೂನೆಜಿಎಸ್‌ಟಿ ಆರ್‌ಇಜಿ–01ರ ಭಾಗ ಬಿ** ನಲ್ಲಿ ನೀಡಬಹುದು, ಅದನ್ನು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿನತಿಳಿಸುವಿಕೆ ಪತ್ರವೆಂದು ಪರಿಗಣಿಸತಕ್ಕದ್ದು.

(3) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು ವಿದ್ಯುನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆಜಿಎಸ್‌ಟಿ ಸಿಎಂಪಿ–02**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಮೇಲೆ ಹೇಳಲಾದ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಚಲಾಯಿಸಲಾಗಿರುವ ಹಣಕಾಸಿನ ವರ್ಷ ಪ್ರಾರಂಭಗೊಳ್ಳುವುದಕ್ಕೆ ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ನಿಯಮ 44ರ ಉಪನಿಯಮ (4)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆಜಿಎಸ್‌ಟಿ ಐಟಿಸಿ–03**ರಲ್ಲಿ ಒಂದು ವಿವರಪತ್ರವನ್ನು ಸಂಬಂಧಿತ ಹಣಕಾಸಿನ ವರ್ಷ ಪ್ರಾರಂಭಗೊಳ್ಳುವ ಅರವತ್ತು ದಿನಗಳ ಅವಧಿಯ ಒಳಗಾಗಿ ಒದಗಿಸತಕ್ಕದ್ದು.

[1][2][(3ಎ) ಉಪನಿಯಮ (1), (2) ಮತ್ತು (3)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನಿಯಮ 24ರ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇಲೆ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಅಥವಾ ನಿಯಮ 8ರ ಉಪನಿಯಮ (1)ರ ಅಡಿಯಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಒಬ್ಬ ವ್ಯಕ್ತಿಯು, ಅಕ್ಟೋಬರ್ 2017ರ ಮೊದಲ ದಿನದಿಂದ ಜಾರಿಗೆ ಬರುವಂತೆ, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು, **ನಮೂನೆಜಿಎಸ್‌ಟಿ ಸಿಎಂಪಿ–02**ರಲ್ಲಿ ಒಂದು ತಿಳುವಳಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸದರಿ ದಿನಾಂಕಕ್ಕಿಂತ ಮೊದಲು ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸುವುದರ ಮೂಲಕ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಸದರಿ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ನಿಯಮ 44ರ ಉಪನಿಯಮ (4)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆಜಿಎಸ್‌ಟಿ ಐಟಿಸಿ–03ರಲ್ಲಿ** ಒಂದು ವಿವರಪತ್ರವನ್ನು ಒದಗಿಸತಕ್ಕದ್ದು:

ಪರಂತು, ಸದರಿ ವ್ಯಕ್ತಿಗಳನ್ನು, **ನಮೂನೆಜಿಎಸ್‌ಟಿ ಐಟಿಸಿ–03**ರಲ್ಲಿ ಒಂದು ವಿವರಪತ್ರವನ್ನು ಒದಗಿಸಲಾದ ನಂತರ **ನಮೂನೆಜಿಎಸ್‌ಟಿ ಟಿಆರ್‌ಎನ್–01**ರಲ್ಲಿ ಘೋಷಣೆಯನ್ನು ಒದಗಿಸಲು ಅನುಮತಿಸತಕ್ಕದ್ದಲ್ಲ.]]

(4) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಉಪ ನಿಯಮ (1)ರ ಅಡಿಯಲ್ಲಿ ಒಂದು ತಿಳುವಳಿಕೆ ಪತ್ರವನ್ನು ಸಲ್ಲಿಸಿರುವ ಯಾವೊಬ್ಬ ವ್ಯಕ್ತಿಯು, ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳುವ ದಿನಾಂಕದ ನಿಕಟಪೂರ್ವ ದಿನದಂದು ಆತನು ಹೊಂದಿರುವ, ಅನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿರುವ ಸರಕುಗಳ ಒಳಮುಖ ಪೂರೈಕೆಗಳನ್ನು ಒಳಗೊಂಡ ದಾಸ್ತಾನು ವಿವರಗಳನ್ನು ವಿದ್ಯುನ್ಮಾನ ರೀತಿಯಲ್ಲಿ **ನಮೂನೆಜಿಎಸ್‌ಟಿ ಸಿಎಂಪಿ–03**ರಲ್ಲಿ ಒಂದು ತಿಳಿಸುವಿಕೆ ಪತ್ರವನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ರಾಜಿ ತೆರಿಗೆ ವಿಧಿಸುವಿಕೆಯ ಆಯ್ಕೆಯನ್ನು ಚಲಾಯಿಸಲಾಗಿರುವ ದಿನಾಂಕದಿಂದ [3][ತೊಂಬತ್ತು ದಿನಗಳ] ಅವಧಿಯ ಒಳಗಾಗಿ ಅಥವಾ ಈ ಸಂಬಂಧದಲ್ಲಿ ಆಯುಕ್ತರು ವಿಸ್ತರಿಸಬಹುದಾದ ಅಂಥ ಹೆಚ್ಚಿನ ಅವಧಿಯೊಳಗಾಗಿ ಒದಗಿಸತಕ್ಕದ್ದು.

(5) ಉಪನಿಯಮ (1) ಅಥವಾ ಉಪನಿಯಮ (3)ರ [4][ಅಥವಾ ಉಪನಿಯಮ (3ಎ)ಯ]ಅಡಿಯಲ್ಲಿ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಯಾವುದೇ ವ್ಯವಹಾರ ಸ್ಥಳಕ್ಕೆ ಸಂಬಂಧಿಸಿದಂತೆ ನೀಡಲಾದ ಯಾವುದೇ ತಿಳಿಸುವಿಕೆ ಪತ್ರವನ್ನು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ನೋಂದಾಯಿತವಾದ ಎಲ್ಲಾ ಇತರ ವ್ಯವಹಾರ ಸ್ಥಳಗಳಿಗೆ ಸಂಬಂಧಿಸಿದ ಒಂದು ತಿಳಿಸುವಿಕೆ ಪತ್ರ ಎಂದು ಪರಿಭಾವಿಸತಕ್ಕದ್ದು.

4. ರಾಜಿ ತೆರಿಗೆ ವಿಧಿಸುವಿಕೆಗಾಗಿ ಜಾರಿ ದಿನಾಂಕ.– (1) ಪ್ರಕರಣ 10ರ ಅಡಿಯಲ್ಲಿನತೆರಿಗೆ ಸಂದಾಯದ ಆಯ್ಕೆಯು ನಿಯಮ 3ರ ಉಪನಿಯಮ (3)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ ಹಣಕಾಸಿನ ವರ್ಷದ ಪ್ರಾರಂಭದಿಂದ ಮತ್ತು ಸದರಿ ನಿಯಮದ ಉಪನಿಯಮ (1)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು ಸಲ್ಲಿಸಿದ್ದಲ್ಲಿ ಗೊತ್ತು ಪಡಿಸಲಾದ ದಿನದಿಂದ ಜಾರಿಗೊಳ್ಳತಕ್ಕದ್ದು.

(2) ನಿಯಮ 3ರ ಉಪನಿಯಮ (2)ರ ಅಡಿಯಲ್ಲಿ ತಿಳಿಸುವಿಕೆ ಪತ್ರವನ್ನು, ಅರ್ಜಿದಾರನಿಗೆ ನೋಂದಣಿಯನ್ನು ಮಂಜೂರು ಮಾಡಿದ ನಂತರ ಮಾತ್ರ ಪರಿಗಣಿಸತಕ್ಕದ್ದು ಮತ್ತು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆತನ ಆಯ್ಕೆಯು ನಿಯಮ 10ರ ಉಪನಿಯಮ (2) ಅಥವಾ (3)ರ ಅಡಿಯಲ್ಲಿ ನಿಗಧಿಪಡಿಸಿದ ದಿನಾಂಕದಿಂದ ಜಾರಿಗೊಳ್ಳತಕ್ಕದ್ದು.

5. ರಾಜಿ ತೆರಿಗೆ ವಿಧಿಸುವಿಕೆಗಾಗಿ ಷರತ್ತುಗಳು ಮತ್ತು ನಿರ್ಬಂಧಗಳು.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಚಲಾಯಿಸುವ ವ್ಯಕ್ತಿಯು ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು, ಅಂದರೆ:–

(ಎ) ಆತನು ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಾಗಲಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಲಿ ಆಗಿರಬಾರದು;
(ಬಿ) ನಿಯಮ 3ರ ಉಪನಿಯಮ (1)ರ ಅಡಿಯಲ್ಲಿನ ಆಯ್ಕೆಯನ್ನು ಬಳಸಿಕೊಂಡಲ್ಲಿ, ಗೊತ್ತುಪಡಿಸಲಾದ ದಿನದಂದು ತಾನು ದಾಸ್ತಾನಿನಲ್ಲಿ ಹೊಂದಿರುವ ಸರಕುಗಳನ್ನು ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಖರೀದಿಸಿರಬಾರದು ಅಥವಾ ಭಾರತದ ಹೊರಗಿನ ಸ್ಥಳದಿಂದ ಆಮದು ಮಾಡಿಕೊಂಡಿರಬಾರದು ಅಥವಾ ರಾಜ್ಯದ ಹೊರಗಡೆ ಇರುವಆತನ ಶಾಖೆಯಿಂದ ಅಥವಾ ರಾಜ್ಯದ ಹೊರಗಡೆ ಇರುವ ತನ್ನ ಏಜೆಂಟ್ ಅಥವಾ ಪ್ರಧಾನಕರ್ತನಿಂದ ಸ್ವೀಕರಿಸಿರಬಾರದು;
(ಸಿ) ತನ್ನ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳನ್ನು ಅನೋಂದಾಯಿತ ಪೂರೈಕೆದಾರನಿಂದ ಖರೀದಿಸಿರಬಾರದು ಮತ್ತು ಖರೀದಿಸಿದ್ದಲ್ಲಿ ಪ್ರಕರಣ 9ರ ಉಪಪ್ರಕರಣ (4)ರ ಅಡಿಯಲ್ಲಿ ಆತನು ತೆರಿಗೆ ಸಂದಾಯ ಮಾಡಿರಬೇಕು;
(ಡಿ) ಆತನು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಒಳಮುಖ ಪೂರೈಕೆಯ ಮೇಲೆ ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡತಕ್ಕದ್ದು;
(ಇ) ಆತನು ಹಿಂದಿನ ಹಣಕಾಸು ವರ್ಷದಲ್ಲಿ, ಪ್ರಕರಣ 10ರ ಉಪಪ್ರಕರಣ (2)ರ ಖಂಡ (ಇ)ಯ ಅಡಿಯಲ್ಲಿ ಅಧಿಸೂಚಿಸಿದ ಸರಕುಗಳ ತಯಾರಿಕೆಯಲ್ಲಿ ತೊಡಗಿದ್ದಿರಬಾರದು;
(ಎಫ್) ಆತನು " ರಾಜಿತೆರಿಗೆಯ ತೆರಿಗೆದಾಯಕ ವ್ಯಕ್ತಿ, ಪೂರೈಕೆಗಳ ಮೇಲೆ ತೆರಿಗೆಯನ್ನು ಸಂಗ್ರಹಿಸಲು ಅರ್ಹನಲ್ಲ" ಎನ್ನುವ ಪದಗಳನ್ನು ತಾನು ನೀಡಿದ ಪೂರೈಕೆ ಬಿಲ್ಲಿನ ಮೇಲ್ಭಾಗದಲ್ಲಿ ನಮೂದಿಸತಕ್ಕದ್ದು;

---

[1]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಇ/2017) ದಿನಾಂಕ 04–10–2017ರ ಮೂಲಕ ಸೇರಿಸಲಾಗಿದೆ.

[2]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಜಿ/2017) ದಿನಾಂಕ 09–11–2017ರ ಮೂಲಕ ಪ್ರತಿಯೋಜಿಸಲಾಗಿದೆ.

[3]"ಅರವತ್ತು ದಿನಗಳು" ಪದಗಳಿಗೆ ಬದಲಾಗಿ "ತೊಂಬತ್ತು ದಿನಗಳು" ಪದಗಳನ್ನು ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಸಿ/2017) ದಿನಾಂಕ 17–08–2017ರ ಮೂಲಕ 17ನೇ ಆಗಸ್ಟ್ 2017ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[4]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಇ/2017) ದಿನಾಂಕ 04–10–2017ರ ಮೂಲಕ ಸೇರಿಸಲಾಗಿದೆ.

(ಜಿ) ಆತನು ಆತನ ಪ್ರಧಾನ ವ್ಯವಹಾರ ಸ್ಥಳದ ಅಥವಾ ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸುವ ಪ್ರತಿಯೊಂದು ಸೂಚನಾಫಲಕ ಅಥವಾ ನಾಮಫಲಕದಲ್ಲಿ " ರಾಜಿತೆರಿಗೆಯ ತೆರಿಗೆದಾಯಕ ವ್ಯಕ್ತಿ" ಎನ್ನುವ ಪದಗಳನ್ನು ನಮೂದಿಸತಕ್ಕದ್ದು.

(2) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ನೋಂದಾಯಿತ ವ್ಯಕ್ತಿಯು ಪ್ರತಿ ವರ್ಷಕ್ಕೆ ಹೊಸದಾಗಿತಿಳಿಸುವಿಕೆ ಪತ್ರವನ್ನು ಸಲ್ಲಿಸಬೇಕಾಗಿಲ್ಲ ಮತ್ತು ಆತನು ಅಧಿನಿಯಮದ ಮತ್ತು ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವುದನ್ನು ಮುಂದುವರಿಸಬಹುದು.

6. ರಾಜಿ ತೆರಿಗೆ ವಿಧಿಸುವಿಕೆಯ ಸಿಂಧುತ್ವ.– (1) ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ನೋಂದಾಯಿತ ವ್ಯಕ್ತಿಯಿಂದ ಬಳಸಿಕೊಂಡ ಆಯ್ಕೆಯು ಸದರಿ ಪ್ರಕರಣ ಮತ್ತು ಈ ನಿಯಮಗಳ ಅಡಿಯಲ್ಲಿ ನಮೂದಿಸಲಾದ ಎಲ್ಲಾ ಷರತ್ತುಗಳನ್ನು ಈಡೇರಿಸುವ ವರೆಗೆ ಸಿಂಧುವಾಗಿರತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಪ್ರಕರಣ 10ರಲ್ಲಿ ಅಥವಾ ಈ ಅಧ್ಯಾಯದ ಉಪಬಂಧಗಳಲ್ಲಿ ನಮೂದಿಸಲಾದ ಯಾವುದೇ ಷರತ್ತುಗಳನ್ನು ನೆರವೇರಿಸುವುದನ್ನು ಆತನು ನಿಲ್ಲಿಸಿದ ದಿನದಿಂದ ಪ್ರಕರಣ 9ರ ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವುದಕ್ಕೆ ಬಾಧ್ಯನಿರತಕ್ಕದ್ದು ಮತ್ತು ತದನಂತರ ಮಾಡಿದ ಪ್ರತಿಯೊಂದು ತೆರಿಗೆದಾಯಕ ಪೂರೈಕೆಗೆ ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು ಮತ್ತು ಅಂಥ ಘಟನೆ ಸಂಭವಿಸಿದ ಏಳು ದಿನಗಳ ಒಳಗಾಗಿ **ನಮೂನೆಜಿಎಸ್‌ಟಿ ಸಿಎಂಪಿ–04**ರಲ್ಲಿ ಯೋಜನೆಯಿಂದ ಹಿಂದೆಸರಿಯುವಿಕೆಗಾಗಿಒಂದು ತಿಳಿಸುವಿಕೆ ಪತ್ರವನ್ನು ಸಹ ಸಲ್ಲಿಸತಕ್ಕದ್ದು.

(3) ರಾಜಿ ತೆರಿಗೆ ಯೋಜನೆಯಿಂದ ಹಿಂದೆ ಸರಿಯಲು ಉದ್ದೇಶಿಸಿರುವ ನೋಂದಾಯಿತ ವ್ಯಕ್ತಿಯು, ಅಂಥ ಹಿಂದೆ ಸರಿಯುವಿಕೆಯ ದಿನಾಂಕಕ್ಕಿಂತ ಮುಂಚಿತವಾಗಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಿದ ಒಂದು ಅರ್ಜಿಯನ್ನು **ನಮೂನೆಜಿಎಸ್‌ಟಿ ಸಿಎಂಪಿ–04**ರಲ್ಲಿ,ವಿದ್ಯುನ್ಮಾನ ರೀತಿಯಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು.

(4) ನೋಂದಾಯಿತ ವ್ಯಕ್ತಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅರ್ಹನಾಗಿರಲಿಲ್ಲ ಅಥವಾ ಅಧಿನಿಯಮದಉಪಬಂಧಗಳನ್ನು ಅಥವಾ ಈ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆ ಎಂದು ನಂಬಲು ಯುಕ್ತ ಅಧಿಕಾರಿಯು ಕಾರಣಗಳನ್ನು ಹೊಂದಿದ್ದರೆ, ಆತನು ಅಂಥ ವ್ಯಕ್ತಿಗೆ, ಒಂದು ಸೂಚನಾ ಪತ್ರವನ್ನು, **ನಮೂನೆಜಿಎಸ್‌ಟಿ ಸಿಎಂಪಿ–05**ರಲ್ಲಿ, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ಏಕೆ ನಿರಾಕರಿಸತಕ್ಕದ್ದಲ್ಲ ಎನ್ನುವುದಕ್ಕೆ ಕಾರಣಗಳನ್ನು ಅಂಥ ಸೂಚನಾ ಪತ್ರವನ್ನು ಸ್ವೀಕರಿಸಿದ ಹದಿನೈದು ದಿನಗಳ ಒಳಗಾಗಿ ತೋರಿಸುವಂತೆ ನೀಡಬಹುದು.

(5) ಉಪನಿಯಮ (4)ರ ಅಡಿಯಲ್ಲಿ ನೀಡಲಾದ ಕಾರಣ ಕೇಳುವ ಸೂಚನಾ ಪತ್ರಕ್ಕೆ, ನೋಂದಾಯಿತ ವ್ಯಕ್ತಿಯಿಂದ **ನಮೂನೆಜಿಎಸ್‌ಟಿ ಸಿಎಂಪಿ–06**ರಲ್ಲಿ ಉತ್ತರವನ್ನು ಸ್ವೀಕರಿಸಿದ ನಂತರ, ಯುಕ್ತ ಅಧಿಕಾರಿಯು ಅಂಥ ಉತ್ತರವನ್ನು ಸ್ವೀಕರಿಸಿದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಸಂದರ್ಭಾನುಸಾರವಾಗಿ ಉತ್ತರವನ್ನು ಅಂಗೀಕರಿಸಿಯಾಗಲಿ, ಅಥವಾ ಆಯ್ಕೆಯ ದಿನಾಂಕದಿಂದ ಅಥವಾ ಸಂಬಂಧಪಟ್ಟ ಅಂಥ ಉಲ್ಲಂಘನೆಯ ಘಟನೆಯ ದಿನಾಂಕದಿಂದ ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ನಿರಾಕರಿಸಿಯಾಗಲಿಒಂದು ಆದೇಶವನ್ನು **ನಮೂನೆಜಿಎಸ್‌ಟಿ ಸಿಎಂಪಿ–07**ರಲ್ಲಿ ನೀಡತಕ್ಕದ್ದು

(6) ಉಪನಿಯಮ (2)ರ ಅಡಿಯಲ್ಲಿ ಒಂದು ತಿಳಿಸುವಿಕೆ ಪತ್ರವನ್ನು ಒದಗಿಸಿರುವ ಅಥವಾ ಉಪನಿಯಮ (3)ರ ಅಡಿಯಲ್ಲಿ ಹಿಂದೆಸರಿಯುವಿಕೆಯ ಒಂದು ಅರ್ಜಿಯನ್ನು ಸಲ್ಲಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಉಪನಿಯಮ (5)ರ ಅಡಿಯಲ್ಲಿ ಆಯ್ಕೆಯನ್ನು ಹಿಂತೆಗೆದುಕೊಳ್ಳುವ ಒಂದು ಆದೇಶವನ್ನು **ನಮೂನೆಜಿಎಸ್‌ಟಿ ಸಿಎಂಪಿ–07**ರಲ್ಲಿ ಹೊರಡಿಸಲಾಗಿರುವುದಕ್ಕೆ ಸಂಬಂಧಿಸಿರುವ ಒಬ್ಬ ವ್ಯಕ್ತಿಯು, ಆಯ್ಕೆಯನ್ನು ಹಿಂತೆಗೆದುಕೊಂಡಿರುವ ಅಥವಾ ನಿರಾಕರಿಸಿರುವ ದಿನಾಂಕದಂದು, ಆತನು ದಾಸ್ತಾನಿನಲ್ಲಿ ಹೊಂದಿರುವ ಹೂಡುವಳಿಗಳ ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ವಿವರಗಳನ್ನು ಒಳಗೊಂಡಿರುವ ಒಂದು ವಿವರಪತ್ರವನ್ನು ll ಆಯ್ಕೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಅಥವಾ ಸಂದರ್ಭಾನುಸಾರವಾಗಿ **ನಮೂನೆಜಿಎಸ್‌ಟಿ ಸಿಎಂಪಿ–07**ರಲ್ಲಿ ಹೊರಡಿಸಿದ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ **ನಮೂನೆಜಿಎಸ್‌ಟಿ ಐಟಿಸಿ–01**ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(7) ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಯಾವುದೇ ವ್ಯವಹಾರ ಸ್ಥಳಕ್ಕೆ ಸಂಬಂಧಿಸಿದಂತೆಉಪನಿಯಮ (2) ಅಥವಾ (3)ರ ಅಡಿಯಲ್ಲಿ ಹಿಂಪಡೆಯುವಿಕೆಗಾಗಿ ಅಥವಾ ಉಪನಿಯಮ (5)ಕ್ಕೆ ಅನುಸಾರವಾಗಿ ಪ್ರಕರಣ 10ರ ಅಡಿಯಲ್ಲಿ ತೆರಿಗೆ ಸಂದಾಯದ ಆಯ್ಕೆಯನ್ನು ನಿರಾಕರಿಸುವುದಕ್ಕಾಗಿನ, ಯಾವುದೇ ತಿಳಿಸುವಿಕೆಯ ಪತ್ರ ಅಥವಾ ಅರ್ಜಿಯನ್ನು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ನೋಂದಾಯಿತವಾದ ಎಲ್ಲಾ ಇತರ ವ್ಯವಹಾರ ಸ್ಥಳಗಳಿಗೆ ಸಂಬಂಧಿಸಿದ ಒಂದು ತಿಳಿಸುವಿಕೆಯಪತ್ರ ಎಂದು ಪರಿಭಾವಿಸತಕ್ಕದ್ದು.

7. ರಾಜಿ ತೆರಿಗೆ ವಿಧಿಸುವಿಕೆಯ ತೆರಿಗೆ ದರ.– ಪ್ರಕರಣ 10 ಮತ್ತು ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ರಾಜಿ ತೆರಿಗೆಯನ್ನು ವಿಧಿಸುವಿಕೆಗೆಅರ್ಹರಾದ, ಕೆಳಕಂಡ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ನೋಂದಾಯಿತ ವ್ಯಕ್ತಿಗಳ ವರ್ಗವು, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸದರಿ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿರುವ ದರದಲ್ಲಿ ಸಂದಾಯ ಮಾಡತಕ್ಕದ್ದು:–

ಕ್ರ.ಸಂ	ನೋಂದಾಯಿತ ವ್ಯಕ್ತಿಗಳ ವರ್ಗ	ತೆರಿಗೆ ದರ
(1)	(2)	(3)
1.	ಸರ್ಕಾರವು ಅಧಿಸೂಚಿಸಬಹುದಾದ ಅಂಥ ಸರಕುಗಳ ತಯಾರಕರುಗಳನ್ನು ಹೊರತುಪಡಿಸಿದ, ತಯಾರಕರು	ಶೇಕಡಾ ಒಂದು
2.	ಅನುಸೂಚಿIIರ ಕಂಡಿಕೆ 6ರ ಖಂಡ (ಬಿ)ದಲ್ಲಿ ಉಲ್ಲೇಖಿಸಿರುವ ಪೂರೈಕೆ ಮಾಡುವುದರಲ್ಲಿ ತೊಡಗಿರುವ ಪೂರೈಕೆದಾರರುಗಳು	ಶೇಕಡಾ ಎರಡುವರೆ
3.	ಪ್ರಕರಣ 10 ಮತ್ತು ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ರಾಜಿ ತೆರಿಗೆ ವಿಧಿಸುವಿಕೆಗೆ ಅರ್ಹರಾದ ಯಾವುದೇ ಇತರ ಪೂರೈಕೆದಾರ	ಶೇಕಡಾ ಅರ್ಧ

ಅಧ್ಯಾಯ III

ನೋಂದಣಿ

8. ನೋಂದಣಿಗಾಗಿ ಅರ್ಜಿ.– (1) ಅನಿವಾಸಿ ತೆರಿಗೆದಾಯಕ ವ್ಯಕ್ತಿಯನ್ನು, ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಅಗತ್ಯಪಡಿಸಿದ ವ್ಯಕ್ತಿಯನ್ನು, ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಮಾಡಲು ಅಗತ್ಯಪಡಿಸಿದ ವ್ಯಕ್ತಿಯನ್ನುಮತ್ತು ಭಾರತದ ಹೊರಗಡೆಯಿರುವ ಸ್ಥಳದಿಂದ, ಏಕೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ತೆರಿಗೆದಾಯಕನಲ್ಲದ ಆನ್‌ಲೈನ್‌ನಲ್ಲಿ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ವ್ಯಕ್ತಿಯನ್ನು ಹೊರತು ಪಡಿಸಿದಂತೆ, ಪ್ರಕರಣ 25ರ ಉಪಪ್ರಕರಣ (1)ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಬಾಧ್ಯನಿರುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಪ್ರಕರಣ 25ರ ಉಪಪ್ರಕರಣ (3)ರ ಅಡಿಯಲ್ಲಿ ನೋಂದಣಿಯನ್ನು ಕೋರುವ ಪ್ರತಿಯೊಬ್ಬ ವ್ಯಕ್ತಿಯು (ಈ ಅಧ್ಯಾಯದಲ್ಲಿ ಇನ್ನು ಮುಂದೆ **"ಅರ್ಜಿದಾರ"** ಎಂದು ಉಲ್ಲೇಖಿಸಲಾಗಿದೆ) ನೋಂದಣಿಗಾಗಿ ಅರ್ಜಿ ಸಲ್ಲಿಸುವ ಮುನ್ನ, ಆತನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ತನ್ನ ಶಾಶ್ವತ ಖಾತೆ ಸಂಖ್ಯೆ (ಪ್ಯಾನ್), ಮೊಬೈಲ್ ಸಂಖ್ಯೆ, ಮಿಂಚೋಲೆ ವಿಳಾಸ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಇಜಿ–01** ದ ಭಾಗ–ಎನಲ್ಲಿ ಘೋಷಿಸತಕ್ಕದ್ದು:

ಪರಂತು, ವಿಶೇಷ ಆರ್ಥಿಕ ವಲಯದಲ್ಲಿ ಘಟಕ(ಗಳನ್ನು) ವನ್ನು ಹೊಂದಿರುವ ಅಥವಾ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರನಾದ ವ್ಯಕ್ತಿಯು ವಿಶೇಷ ಆರ್ಥಿಕ ವಲಯದ ಹೊರಗೆ ಇರುವಅವನ ಇತರ ಘಟಕಗಳಿಂದ ಭಿನ್ನವಾದ ವ್ಯವಹಾರ ಶ್ರೇಣಿನ್ನಾಗಿ ನೋಂದಣಿ ಮಾಡಿಕೊಳ್ಳಲು ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಮತ್ತು ಪರಂತು, ಹೂಡುವಳಿ ಸೇವೆ ಹಂಚಿಕೆದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಹೂಡುವಳಿ ಸೇವೆ ಹಂಚಿಕೆದಾರನಾಗಿನೋಂದಣಿ ಮಾಡಿಕೊಳ್ಳಲು ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು:

(2) (ಎ) ಶಾಶ್ವತ ಖಾತೆ ಸಂಖ್ಯೆಯನ್ನು ನೇರ ತೆರಿಗೆಗಳ ಕೇಂದ್ರ ಮಂಡಳಿಯು ನಿರ್ವಹಿಸಿರುವ ದತ್ತಾಂಶ ಸಂಗ್ರಹದಿಂದ ಸಾಮಾನ್ಯ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಿಂಧುಗೊಳಿಸತಕ್ಕದ್ದು;
(ಬಿ) ಉಪನಿಯಮ (1)ರ ಅಡಿಯಲ್ಲಿ ಘೋಷಿಸಲಾದ ಮೊಬೈಲ್ ಸಂಖ್ಯೆಯನ್ನು ಸದರಿ ಮೊಬೈಲ್ ಸಂಖ್ಯೆಗೆ ಕಳುಹಿಸಲಾದ ಒಂದು ಬಾರಿಯ ಪಾಸ್‌ವರ್ಡ್ ಮೂಲಕ ಪರಿಶೀಲಿಸತಕ್ಕದ್ದು;
(ಸಿ)ಉಪನಿಯಮ (1)ರ ಅಡಿಯಲ್ಲಿ ಘೋಷಿಸಲಾದ ಮಿಂಚೋಲೆಯ ವಿಳಾಸವನ್ನು ಸದರಿ ಮಿಂಚೋಲೆಯ ವಿಳಾಸಕ್ಕೆ ಕಳುಹಿಸಲಾದ ಪ್ರತ್ಯೇಕ ಒಂದು ಬಾರಿಯ ಪಾಸ್‌ವರ್ಡ್ ಮೂಲಕ ಪರಿಶೀಲಿಸತಕ್ಕದ್ದು;

(3) ಶಾಶ್ವತ ಖಾತೆ ಸಂಖ್ಯೆ, ಮೊಬೈಲ್ ಸಂಖ್ಯೆ, ಮತ್ತು ಮಿಂಚೋಲೆ ವಿಳಾಸಗಳ ಯಶಸ್ವಿ ಪರಿಶೀಲನೆಯ ನಂತರ, ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ಸದರಿ ಮೊಬೈಲ್ ಸಂಖ್ಯೆ ಮತ್ತು ಮಿಂಚೋಲೆಯ ವಿಳಾಸದ ಮೂಲಕ ಅರ್ಜಿದಾರನಿಗೆ ತಿಳಿಸತಕ್ಕದ್ದು.

(4) ಉಪನಿಯಮ (3)ರ ಅಡಿಯಲ್ಲಿ ಸೃಷ್ಟಿಸಲಾದ ಉಲ್ಲೇಖ ಸಂಖ್ಯೆಯನ್ನು ಉಪಯೋಗಿಸಿಕೊಂಡು ಅರ್ಜಿದಾರನು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನಾ ಕೋಡ್‌ನ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–01ದ ಭಾಗ–ಬಿ**ನಲ್ಲಿ ಒಂದು ಅರ್ಜಿಯನ್ನು, ಸದರಿ ನಮೂನೆಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(5) ಉಪನಿಯಮ (4)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಅರ್ಜಿದಾರನಿಗೆ ನಮೂನೆ ಜಿಎಸ್‌ಟಿ ಆರ್‌ಇಜಿ–02ರಲ್ಲಿ ಒಂದು ಸ್ವೀಕೃತಿಯನ್ನು ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

(6) ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಾಗಿ ನೋಂದಣಿಗೆ ಅರ್ಜಿಯನ್ನು ಸಲ್ಲಿಸುವ ಒಬ್ಬ ವ್ಯಕ್ತಿಗೆ, ಪ್ರಕರಣ 27ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯ ಮುಂಗಡ ಠೇವಣಿಯನ್ನು ಇಡುವ ಸಲುವಾಗಿ ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ನೀಡತಕ್ಕದ್ದು ಮತ್ತು ಉಪನಿಯಮ (5)ರ ಅಡಿಯಲ್ಲಿ ಸ್ವೀಕೃತಿಯನ್ನು ಸದರಿ ಠೇವಣಿ ಇಟ್ಟ ನಂತರ ಮಾತ್ರ ನೀಡತಕ್ಕದ್ದು.

9. ಅರ್ಜಿಯ ಪರಿಶೀಲನೆ ಮತ್ತು ಅನುಮೋದನೆ.– (1) ಅರ್ಜಿಯನ್ನು ಯುಕ್ತ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಆ ಅಧಿಕಾರಿಯು ಅರ್ಜಿಯನ್ನು ಮತ್ತು ಲಗತ್ತಿಸಲಾದ ದಸ್ತಾವೇಜುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಅವುಗಳು ಕ್ರಮ ಬದ್ಧವಾಗಿರುವುದು ಕಂಡುಬಂದರೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ, ನೋಂದಣಿಯ ಮಂಜೂರಾತಿಯನ್ನು ಅನುಮೋದಿಸತಕ್ಕದ್ದು.

(2) ನಿಯಮ (8)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯು, ಯಾವುದೇ ಮಾಹಿತಿಯ ರೂಪದಲ್ಲಿಯಾಗಲಿ ಅಥವಾ ಸದರಿ ನಿಯಮಗಳ ಅಡಿಯಲ್ಲಿ ಒದಗಿಸಲು ಅಗತ್ಯವಿರುವ ಯಾವುದೇ ದಸ್ತವೇಜಿನ ರೂಪದಲ್ಲಿಯಾಗಲಿ ನ್ಯೂನ್ಯತೆಯನ್ನು ಹೊಂದಿರುವುದು ಕಂಡುಬಂದಲ್ಲಿ, ಅಥವಾ ಆ ಅರ್ಜಿಯಲ್ಲಿ ಅಥವಾ ಅದರೊಂದಿಗೆ ಒದಗಿಸಿದ ದಸ್ತಾವೇಜುಗಳಲ್ಲಿ ಒದಗಿಸಲಾದ ಯಾವುದೇ ಮಾಹಿತಿಗೆ ಸಂಬಂಧಿಸಿದಂತೆ ಯಾವುದೇ ಸ್ಪಷೀಕರಣವನ್ನು ಯುಕ್ತ ಅಧಿಕಾರಿಯು ಅಗತ್ಯಪಡಿಸಿದ್ದಲ್ಲಿ, ಅವನು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಇಜಿ–03**ರಲ್ಲಿ ಒಂದು ಸೂಚನಾಪತ್ರವನ್ನು ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು ಮತ್ತು ಅರ್ಜಿದಾರನು ಅಂಥ ಸೂಚನಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–04**ರಲ್ಲಿ ಅಂಥ ಸ್ಪಷ್ಟೀಕರಣ, ಮಾಹಿತಿ ಅಥವಾ ದಸ್ತಾವೇಜುಗಳನ್ನು ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ವಿವರಣೆ.– ಈ ಉಪನಿಯಮಗಳ ಉದ್ದೇಶಗಳಿಗಾಗಿ, **"ಸ್ಪಷ್ಟೀಕರಣ"**ಎಂಬ ಪದಾವಳಿಯು**ನಮೂನೆ ಜಿಎಸ್‌ಟಿ ಆರ್‌ಇಜಿ–01ರ ಭಾಗ–ಎ** ನಲ್ಲಿ ಘೋಷಿಸಲಾದ ಶಾಶ್ವತ ಖಾತೆ ಸಂಖ್ಯೆ, ರಾಜ್ಯ, ಮೊಬೈಲ್ ಸಂಖ್ಯೆ ಮತ್ತು ಮಿಂಚೋಲೆ ವಿಳಾಸ ಇವುಗಳನ್ನು ಹೊರತುಪಡಿಸಿ ನೊಂದಣಿಯ ಅರ್ಜಿಯಲ್ಲಿ ಘೋಷಿಸಲಾದ ವಿವರಗಳ ಮಾರ್ಪಾಟು ಅಥವಾ ಸರಿಪಡಿಸುವಿಕೆಯನ್ನು ಒಳಗೊಳ್ಳುತ್ತದೆ.

(3) ಅರ್ಜಿದಾರನು ಒದಗಿಸಿದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳಿಂದ ಯುಕ್ತ ಅಧಿಕಾರಿಯು ತೃಪ್ತಿಹೊಂದಿದ್ದಲ್ಲಿ, ಅವನು ಅಂಥ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ ಅರ್ಜಿದಾರನಿಗೆ ನೋಂದಣಿಯ ಮಂಜೂರಾತಿಯನ್ನು ಅನುಮೋದಿಸಬಹುದು.

(4) ಉಪನಿಯಮ (2)ರ ಅಡಿಯಲ್ಲಿ ನೀಡಲಾದ ಸೂಚನಾಪತ್ರಕ್ಕೆ ಪ್ರತಿಯಾಗಿಅರ್ಜಿದಾರನು ಯಾವುದೇ ಉತ್ತರವನ್ನು ನೀಡದಿದ್ದಲ್ಲಿ, ಅಥವಾ ಒದಗಿಸಲಾದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳ ಬಗ್ಗೆ ಯುಕ್ತ ಅಧಿಕಾರಿಯು ತೃಪ್ತಿಯನ್ನು ಹೊಂದಿಲ್ಲದಿದ್ದಲ್ಲಿ, ಅವನು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಇಜಿ–05ರಲ್ಲಿ** ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(5) ಯುಕ್ತ ಅಧಿಕಾರಿಯು,–
(ಎ) ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ, ಅಥವಾ
(ಬಿ) ಉಪನಿಯಮ (2)ರ ಅಡಿಯಲ್ಲಿ ಅರ್ಜಿದಾರನಿಂದ ಒದಗಿಸಲಾದ ಸ್ಪಷ್ಟೀಕರಣ, ಮಾಹಿತಿ, ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ,
–ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ ನೋಂದಣಿಯ ಮಂಜುರಾತಿಯ ಅರ್ಜಿಯನ್ನು ಅನುಮೋದನೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.

10. ನೋಂದಣಿ ಪ್ರಮಾಣ ಪತ್ರ ನೀಡುವುದು.– (1) ಪ್ರಕರಣ 25ರ ಉಪಪ್ರಕರಣ (12)ರ ಉಪಬಂಧಗಳಿಗೆ ಒಳಪಟ್ಟು, ನಿಯಮ 9ರ ಅಡಿಯಲ್ಲಿ ನೋಂದಣಿ ಮಂಜೂರಾತಿಯ ಅರ್ಜಿಯನ್ನು ಅನುಮೋದಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿ ಆರ್‌ಇಜಿ–06ರಲ್ಲಿ** ಪ್ರಧಾನ ವ್ಯವಹಾರ ಸ್ಥಳ ಮತ್ತು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳನ್ನು ತೋರಿಸುವ ನೋಂದಣಿಯ ಪ್ರಮಾಣ ಪತ್ರವನ್ನು ಅರ್ಜಿದಾರನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತು ಸಂಖ್ಯೆಯನ್ನು ಈ ಕೆಳಕಂಡ ಅಕ್ಷರಗಳಲ್ಲಿ ನೀಡತಕ್ಕದ್ದು, ಅಂದರೆ:–
(ಎ) ರಾಜ್ಯ ಕೋಡ್‌ಗಾಗಿ ಎರಡು ಅಕ್ಷರಗಳು;
(ಬಿ) ಶಾಶ್ವತ ಖಾತೆ ಸಂಖ್ಯೆ ಅಥವಾ ತೆರಿಗೆ ಮುರುಗಡೆ ಅಥವಾ ಸಂಗ್ರಹಣಾ ಖಾತೆ ಸಂಖ್ಯೆಗಾಗಿ ಹತ್ತು ಅಕ್ಷರಗಳು;
(ಸಿ) ವ್ಯವಹಾರ ಸಂಸ್ಥೆ (ಎಂಟಿಟಿ) ಕೋಡ್‌ಗಾಗಿ ಎರಡು ಅಕ್ಷರಗಳು;
(ಡಿ) ಒಂದು ಸಂಖ್ಯಾಧಾರಿತ (ಚೆಕ್‌ಸಮ್) ಅಕ್ಷರ.

(2) ವ್ಯಕ್ತಿಯು ನೊಂದಣಿಗೆ ಬಾಧ್ಯನಾಗುವ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಯ ಅರ್ಜಿಯನ್ನು ಸಲ್ಲಿಕೆ ಮಾಡಲಾಗಿದ್ದಲ್ಲಿ, ನೋಂದಣಿಯು ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಅರ್ಜಿದಾರನಿಂದ ಆತನು ನೋಂದಣಿಗೆ ಬಾಧ್ಯನಾಗುವ ದಿನಾಂಕದಿಂದ ಮೂವತ್ತು ದಿನಗಳ ನಂತರ ನೋಂದಣಿಯ ಅರ್ಜಿಯನ್ನು ಸಲ್ಲಿಕೆ ಮಾಡಲಾಗಿದ್ದಲ್ಲಿ, ನೋಂದಣಿಯ ಜಾರಿ ದಿನಾಂಕವು ನಿಯಮ 9 ರ ಉಪನಿಯಮ (1) ಅಥವಾ ಉಪನಿಯಮ (3) ಅಥವಾ ಉಪನಿಯಮ (5)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಿದ ದಿನಾಂಕವಾಗಿರತಕ್ಕದ್ದು.

(4) ಪ್ರತಿಯೊಂದು ನೋಂದಣಿ ಪ್ರಮಾಣಪತ್ರವು, ಈ ಅಧಿನಿಯಮದ ಅಡಿಯಲ್ಲಿನ ಯುಕ್ತ ಅಧಿಕಾರಿಯಿಂದ ಯುಕ್ತವಾಗಿ ಸಹಿಯಾಗಿರತಕ್ಕದ್ದು ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮೂಲಕ ಪರಿಶೀಲಿಸಿರತಕ್ಕದ್ದು.

(5) ನಿಯಮ 9 ರ ಉಪನಿಯಮ (5)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಲಾಗಿದ್ದಲ್ಲಿ, ನೋಂದಣಿಯ ಸಂಖ್ಯೆಯನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು ಮತ್ತು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮೂಲಕ ಪರಿಶೀಲಿಸಿರುವ ಉಪನಿಯಮ (1) ರ ಅಡಿಯಲ್ಲಿನ ನೋಂದಣಿ ಪ್ರಮಾಣಪತ್ರವನ್ನು, ನಿಯಮ 9ರ ಉಪನಿಯಮ (5)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಗಿದ ನಂತರದ ಮೂರು ದಿನಗಳ ಒಳಗಾಗಿ ಸಾಮಾನ್ಯ ಪೋರ್ಟಲ್‌ನಲ್ಲಿ ಅವನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು

11. ರಾಜ್ಯದ ಒಳಗೆ ಬಹು ವ್ಯವಹಾರದ ಶ್ರೇಣಿಗಳಿಗಾಗಿ ಪ್ರತ್ಯೇಕ ನೋಂದಣಿ.– (1) ರಾಜ್ಯದ ಒಳಗೆ ಬಹು ವ್ಯವಹಾರ ಶ್ರೇಣಿಗಳನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಗೆ, ಪ್ರಕರಣ 25ರ ಉಪಪ್ರಕರಣ (2)ರ ಅಡಿಯಲ್ಲಿ ತನ್ನ ಯಾವುದೇ ವ್ಯವಹಾರ ಶ್ರೇಣಿಗಳಿಗೆ ಪ್ರತ್ಯೇಕ ನೊಂದಣಿಯು ಅಗತ್ಯವಿದ್ದಲ್ಲಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಂದು ಶ್ರೇಣಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು, ಅಂದರೆ:–

(ಎ) ಅಂಥ ವ್ಯಕ್ತಿಯು ಪ್ರಕರಣ 2ರ ಖಂಡ (18)ರಲ್ಲಿ ಪರಿಭಾಷಿಸಿದಂತೆ ಒಂದಕ್ಕಿಂತ ಹೆಚ್ಚಿನ ವ್ಯವಹಾರ ಶ್ರೇಣಿಯನ್ನು ಹೊಂದಿರಬೇಕು;

(ಬಿ) ಒಬ್ಬ ತೆರಿಗೆದಾಯಕ ವ್ಯಕ್ತಿಯ ವ್ಯವಹಾರ ಶ್ರೇಣಿಗೆ, ಅದೇ ವ್ಯಕ್ತಿಯ ಇತರೇ ವ್ಯವಹಾರ ಶ್ರೇಣಿಗಳಲ್ಲಿನ ಯಾವುದೇ ಒಂದು ಶ್ರೇಣಿಯು ಪ್ರಕರಣ 9ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುತ್ತಿದ್ದರೆ, ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ನೋಂದಣಿಯನ್ನು ಮಂಜೂರು ಮಾಡತಕ್ಕದ್ದಲ್ಲ.

(ಸಿ)ಪ್ರತ್ಯೇಕವಾಗಿ ನೋಂದಣಿಗೊಂಡಿರುವ ಅಂಥ ವ್ಯಕ್ತಿಯ ಎಲ್ಲಾ ವ್ಯವಹಾರ ಶ್ರೇಣಿಗಳು, ಅಂಥ ವ್ಯಕ್ತಿಯ ಇನ್ನಿತರ ನೋಂದಾಯಿತ ವ್ಯವಹಾರ ಶ್ರೇಣಿಗೆ ಮಾಡಲಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಮೇಲೆ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಪೂರೈಕೆಗಾಗಿ ಒಂದು ತೆರಿಗೆ ಬೆಲೆಪಟ್ಟಿಯನ್ನು ನೀಡತಕ್ಕದ್ದು.

ವಿವರಣೆ.– ಖಂಡ (ಬಿ)ಯ ಉದ್ದೇಶಗಳಿಗಾಗಿ, ಪ್ರತ್ಯೇಕ ನೋಂದಣಿಯನ್ನು ಮಂಜೂರು ಮಾಡಲಾದ ಒಬ್ಬ ನೋಂದಾಯಿತ ವ್ಯಕ್ತಿಯ ಯಾವುದೇ ವ್ಯವಹಾರ ಶ್ರೇಣಿಯು ಪ್ರಕರಣ 10ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅನರ್ಹವಾದಲ್ಲಿ, ಸದರಿ ವ್ಯಕ್ತಿಯ ಎಲ್ಲಾ ಇತರೇ ವ್ಯವಹಾರ ಶ್ರೇಣಿಗಳು ಸದರಿ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಅನರ್ಹವಾಗತಕ್ಕದ್ದು ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(2) ವ್ಯವಹಾರ ಶ್ರೇಣಿಗಳಿಗೆ ಪ್ರತ್ಯೇಕ ನೋಂದಣಿಯನ್ನು ಪಡೆಯಲು ಅರ್ಹನಾದ ಒಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಪ್ರತಿಯೊಂದು ಶ್ರೇಣಿಗೆ ಸಂಬಂಧಿಸಿದಂತೆ **ನಮೂನೆ ಜಿಎಸ್‌ಟಿ ಆರ್‌ಇಜಿ–01ರಲ್ಲಿ** ಒಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬಹುದು.

(3) ಈ ನಿಯಮದ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

12. ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಅಥವಾ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸಲು ಅಗತ್ಯಪಡಿಸಿದ ವ್ಯಕ್ತಿಗಳಿಗೆ ನೋಂದಣಿಯ ಮಂಜೂರಾತಿ.– (1) ಪ್ರಕರಣ 51ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮುರುಗಡೆ ಮಾಡವುದು ಅಗತ್ಯವಿರುವ ಯಾವೊಬ್ಬ ವ್ಯಕ್ತಿಯು ಅಥವಾ ಪ್ರಕರಣ 52ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯನ್ನು ಮೂಲದಲ್ಲಿ ಸಂಗ್ರಹಿಸುವುದು ಅಗತ್ಯವಿರುವ ಯಾವೊಬ್ಬ ವ್ಯಕ್ತಿಯು, ನೋಂದಣಿಯ ಮಂಜೂರಾತಿಗಾಗಿ, ವಿದ್ಯನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–07**ರಲ್ಲಿ ಒಂದು ಅರ್ಜಿಯನ್ನು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಲ್ಲಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಯುಕ್ತವಾದ ಪರಿಶೀಲನೆಯ ನಂತರ ನೋಂದಣಿಯನ್ನು ಮಂಜೂರು ಮಾಡಬಹುದು ಮತ್ತು ಅರ್ಜಿಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ಒಂದು ನೋಂದಣಿ ಪ್ರಮಾಣ ಪತ್ರವನ್ನು ನೀಡಬಹುದು.

(3) ಯುಕ್ತ ಅಧಿಕಾರಿಯು, ಒಂದು ವಿಚಾರಣೆಯ ಮೇಲೆ ಅಥವಾ ಅಧಿನಿಯಮದ ಯಾವುದೇ ಇತರ ನಡಾವಳಿಗೆ ಅನುಗುಣವಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿರುವ ಒಬ್ಬ ವ್ಯಕ್ತಿಯು ಪ್ರಕರಣ 51ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವುದಕ್ಕೆ ಅಥವಾ ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹ ಮಾಡುವುದಕ್ಕೆ ಬಾಧ್ಯನಾಗಿ ಉಳಿದಿಲ್ಲವೆಂದು ಮನದಟ್ಟು ಮಾಡಿಕೊಂಡಿದ್ದಲ್ಲಿ, ಸದರಿ ಅಧಿಕಾರಿಯು ಉಪನಿಯಮ (2)ರ ಅಡಿಯಲ್ಲಿ ನೀಡಿದ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಅಂಥ ರದ್ದತಿಯನ್ನು ವಿದ್ಯುನ್ಮಾನ ರೀತಿಯಲ್ಲಿ ಸದರಿ ವ್ಯಕ್ತಿಗೆ ನಮೂನೆ ಜಿಎಸ್‌ಟಿ ಆರ್‌ಇಜಿ–08ರಲ್ಲಿ ತಿಳಿಸತಕ್ಕದ್ದು.

ಪರಂತು, ಯುಕ್ತ ಅಧಿಕಾರಿಯು, ನೋಂದಣಿ ರದ್ದತಿಗಾಗಿ ನಿಯಮ 22ರಲ್ಲಿ ನಿಯಮಿಸಲಾದ ಕಾರ್ಯವಿಧಾನಗಳನ್ನು ಅನುಸರಿಸತಕ್ಕದ್ದು.

13. ಅನಿವಾಸಿ ತೆರಿಗೆದಾಯಕ ವ್ಯಕ್ತಿಗೆ ನೋಂದಣಿ ಮಂಜೂರಾತಿ.– (1) ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ತನ್ನ ಕಾನೂನು ಮಾನ್ಯವಾದ ಪಾಸ್‌ಪೋರ್ಟ್‌ನ ಸ್ವಯಂ–ಧೃಢೀಕೃತ ಪ್ರತಿಯೊಂದಿಗೆ, ನೋಂದಣಿಗಾಗಿ, ವಿದ್ಯುನ್ಮಾನ ರೀತಿಯಲ್ಲಿ ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–09ರಲ್ಲಿ** ಒಂದು ಅರ್ಜಿಯನ್ನು, ವ್ಯವಹಾರದ ಪ್ರಾರಂಭಿಸುವುದಕ್ಕೆಕನಿಷ್ಠ ಪಕ್ಷ ಐದು ದಿನಗಳ ಮೊದಲು, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಲ್ಲಿಸತಕ್ಕದ್ದು.

ಪರಂತು, ಭಾರತದ ಹೊರಗಡೆ ನಿಗಮಿತವಾದ ಅಥವಾ ಸ್ಥಾಪಿತವಾದ ಒಂದು ವ್ಯವಹಾರ ಸಂಸ್ಥೆಯ ಸಂದರ್ಭದಲ್ಲಿ, ನೋಂದಣಿಗಾಗಿ ಅರ್ಜಿಯನ್ನು ಆ ದೇಶದ ಸರ್ಕಾರವು ವ್ಯವಹಾರ ಸಂಸ್ಥೆಯನ್ನು ಗುರುತಿಸಲು ಆಧಾರವಾಗಿ ಬಳಸುವ ಅದರ ತೆರಿಗೆ ಗುರುತು ಸಂಖ್ಯೆ ಅಥವಾ ವಿಶಿಷ್ಟ ಸಂಖ್ಯೆ ಅಥವಾ ಅದರ ಶಾಶ್ವತ ಖಾತೆಯುಲಭ್ಯವಿದ್ದರೆ, ಅದರೊಂದಿಗೆ ಸಲ್ಲಿಸತಕ್ಕದ್ದು.

(2) ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಿ ನೊಂದಣಿಗೆ ಅರ್ಜಿಯನ್ನು ಸಲ್ಲಿಸುತ್ತಿರುವ ಒಬ್ಬ ವ್ಯಕ್ತಿಗೆ, ಪ್ರಕರಣ 27ರ ಉಪಬಂಧಗಳಿಗೆ ಅನುಸಾರವಾಗಿ ತೆರಿಗೆಯ ಮುಂಗಡ ಠೇವಣಿಯನ್ನು ಇಡುವ ಸಲುವಾಗಿ ಒಂದು ತಾತ್ಕಾಲಿಕ ಉಲ್ಲೇಖ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್ ಮೂಲಕ ನೀಡತಕ್ಕದ್ದು ಮತ್ತು ನಿಯಮ 8ರ ಉಪನಿಯಮ (5)ರ ಅಡಿಯಲ್ಲಿ ಸ್ವೀಕೃತಿಯನ್ನು, ತನ್ನ ವಿದ್ಯುನ್ಮಾನ ನಗದು ಖಾತೆಯಲ್ಲಿ ಸದರಿ ಠೇವಣಿಯನ್ನು ಇಟ್ಟ ನಂತರವೇ ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು *ಯಥೋಚಿತ ವ್ಯತ್ಯಾಸಗಳೊಡನೆ* ಅನ್ವಯವಾಗತಕ್ಕದ್ದು.

(4) ಅನಿವಾಸಿ ತೆರಿಗೆದಾಯಕ ವ್ಯಕ್ತಿಯು ನೋಂದಣಿಗಾಗಿ ಸಲ್ಲಿಸಿದ ಅರ್ಜಿಯು, ಕಾನೂನು ಮಾನ್ಯವಾದ ಶಾಶ್ವತ ಖಾತೆಯನ್ನು ಹೊಂದಿರುವ ಭಾರತದಲ್ಲಿ ನಿವಾಸಿಯಾಗಿರತಕ್ಕ ಆತನ ಪ್ರಾಧಿಕೃತ ಸಹಿದಾರನಿಂದ ಯುಕ್ತವಾಗಿ ಸಹಿಯಾಗಿರತಕ್ಕದ್ದು ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸತಕ್ಕದ್ದು.

14. ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಗೆ ನೋಂದಣಿಯ ಮಂಜೂರಾತಿ.– (1) ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯು, ನೋಂದಣಿಗಾಗಿ, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–10**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಅರ್ಜಿದಾರನಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮತ್ತು ಅಂಥ ಅಧಿಕಾರಿಯಿಂದ **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.

15. ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯಿಂದ ಕಾರ್ಯಾಚರಣೆಯ ಅವಧಿಯಲ್ಲಿನ ವಿಸ್ತರಣೆ.– (2) ಒಬ್ಬ ನೋಂದಾಯಿತ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಆತನ ನೋಂದಣಿ ಅರ್ಜಿಯಲ್ಲಿ ಸೂಚಿಸಿದ ನೋಂದಣಿಯ ಅವಧಿಯನ್ನು ವಿಸ್ತರಿಸಲು ಇಚ್ಛಿಸಿದ್ದಲ್ಲಿ, ಅಂಥ ವ್ಯಕ್ತಿಯು **ನಮೂನೆ ಜಿಎಸ್‌ಟಿ ಆರ್‌ಇಜಿ–11**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಆತನಿಗೆ ಮಂಜೂರು ಮಾಡಲಾದ ನೋಂದಣಿಯ ಸಿಂಧುತ್ವವು ಕೊನೆಗೊಳ್ಳುವ ಮುನ್ನ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಪ್ರಕರಣ 27ರ ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಮಾತ್ರ ಉಪನಿಯಮ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸತಕ್ಕದ್ದು.

16. ಸ್ವಪ್ರೇರಣೆಯ ನೋಂದಣಿ.– (1) ಅಧಿನಿಯಮದ ಅಡಿಯಲ್ಲಿನ ಯಾವುದೇ ಸಮೀಕ್ಷೆ, ವಿಚಾರಣೆ, ತಪಾಸಣೆ, ಶೋಧನೆ ಅಥವಾ ಯಾವುದೇ ಇತರೇ ನಡಾವಳಿಗಳಿಗೆ ಅನುಗುಣವಾಗಿ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗಿರುವ ಒಬ್ಬ ವ್ಯಕ್ತಿಯು ಅಂಥ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಲು ವಿಫಲನಾಗಿರುವುದು ಯುಕ್ತ ಅಧಿಕಾರಿಗೆ ಕಂಡುಬಂದಲ್ಲಿ, ಅಂಥ ಅಧಿಕಾರಿಯು ಸದರಿ ವ್ಯಕ್ತಿಯನ್ನು ತಾತ್ಕಾಲಿಕ ಆಧಾರದಲ್ಲಿ ನೋಂದಣಿ ಮಾಡಬಹುದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–12**ರಲ್ಲಿ ಒಂದು ಆದೇಶವನ್ನು ನೀಡಬಹುದು.

(2) ಉಪನಿಯಮ (1)ರ ಅಡಿಯಲ್ಲಿ ಮಂಜೂರು ಮಾಡಲಾದ ನೋಂದಣಿಯು, ನೋಂದಣಿ ಮಂಜೂರಾತಿಯ ಆದೇಶದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಉಪನಿಯಮ (1)ರ ಅಡಿಯಲ್ಲಿ ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಂದಣಿ ಮಂಜೂರಾತಿಯ ದಿನಾಂಕದಿಂದ ತೊಂಬತ್ತು ದಿನಗಳ ಒಳಗಾಗಿ ನಿಯಮ 8 ಅಥವಾ ನಿಯಮ 12ರ ಅಡಿಯಲ್ಲಿ ಉಪಬಂಧಿಸಿದ ನಮೂನೆ ಮತ್ತು ವಿಧಾನದಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು ಸದರಿ ವ್ಯಕ್ತಿಯು, ತಾತ್ಕಾಲಿಕ ನೊಂದಣಿಯ ಮಂಜೂರಾತಿಯ ವಿರುದ್ಧವಾಗಿ ಅಪೀಲನ್ನು ಸಲ್ಲಿಸಿದ್ದಲ್ಲಿ, ಅಂಥ ಸಂದರ್ಭದಲ್ಲಿ, ಅಪೀಲು ಪ್ರಾಧಿಕಾರವು ನೊಂದಣಿಯ ಬಾಧ್ಯತೆಯನ್ನು ಎತ್ತಿಹಿಡಿದಿರುವ ಆದೇಶ ನೀಡುವಿಕೆಯ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) ಉಪನಿಯಮ (3)ರ ಅಡಿಯಲ್ಲಿ ಸಲ್ಲಿಸಲಾದ ಒಂದು ಅರ್ಜಿಗೆ, ಪರಿಶೀಲನೆ ಮತ್ತು ನೋಂದಣಿ ಮಂಜೂರಾತಿಗೆ ಸಂಬಂದಿಸಿದ ನಿಯಮ 9 ಮತ್ತು ನಿಯಮ 10ರ ಉಪಬಂಧಗಳು *ಯಥೋಚಿತ ವ್ಯತ್ಯಾಸಗಳೊಡನೆ* ಅನ್ವಯವಾಗತಕ್ಕದ್ದು.

(5) ಉಪನಿಯಮ (4)ರ ಅಡಿಯಲ್ಲಿನ ಪರಿಶೀಲನೆಗೆ ಅನುಗುಣವಾಗಿ ನಿಯತಗೊಳಿಸಲಾದ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯು, ಉಪನಿಯಮ (1)ರ ಅಡಿಯಲ್ಲಿ ನೋಂದಣಿಯನ್ನು ಮಂಜೂರು ಮಾಡಿದ ಆದೇಶದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

17. ಕೆಲವು ವಿಶೇಷ ಸಂಸ್ಥೆಗಳಿಗೆ (ಎಂಟಿಟಿ) ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯತಗೊಳಿಸುವಿಕೆ.– (1) ಪ್ರಕರಣ 25ರ ಉಪಪ್ರಕರಣ (9)ರ ಉಪಬಂಧಗಳಿಗೆ ಅನುಸಾರವಾಗಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡುವುದು ಅಗತ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, ನಿಯಮ 8ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ಅರ್ಜಿಯ ಸಲ್ಲಿಕೆಯಾದ ತರುವಾಯ ಅಥವಾ ಸದರಿ ಅರ್ಜಿಯನ್ನು ಭರ್ತಿ ಮಾಡಿದ ನಂತರ, [5][ಅಥವಾ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರದ ಮಂತ್ರಾಲಯದಿಂದ ಶಿಫಾರಸ್ಸನ್ನು ಸ್ವೀಕರಿಸಿದ ನಂತರ]ಸದರಿ ವ್ಯಕ್ತಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನಿಯತಗೊಳಿಸಬಹುದು ಮತ್ತು ಅರ್ಜಿಸಲ್ಲಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ಒಂದು ಪ್ರಮಾಣ ಪತ್ರವನ್ನು ನೀಡಬಹುದು.

18. ನಾಮಫಲಕದ ಮೇಲೆ ನೋಂದಣಿ ಪತ್ರ ಮತ್ತು ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಪ್ರದರ್ಶಿಸುವುದು.– (1) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ತನ್ನ ನೋಂದಣಿ ಪ್ರಮಾಣಪತ್ರವನ್ನು, ತನ್ನ ಪ್ರಧಾನ ವ್ಯವಹಾರದ ಸ್ಥಳದ ಮತ್ತು ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳ ಎದ್ದು ಕಾಣುವ ಜಾಗದಲ್ಲಿ ಪ್ರದರ್ಶಿಸತಕ್ಕದ್ದು.

(2) ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ತನ್ನ ಪ್ರಧಾನ ವ್ಯವಹಾರದ ಸ್ಥಳದ ಮತ್ತು ಪ್ರತಿಯೊಂದು ಹೆಚ್ಚುವರಿ ವ್ಯವಹಾರ ಸ್ಥಳ ಅಥವಾ ಸ್ಥಳಗಳ ಪ್ರವೇಶ ದ್ವಾರದಲ್ಲಿ ಪ್ರದರ್ಶಿಸಲಾದ ನಾಮಫಲಕ ಮೇಲೆ ತನ್ನ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಪ್ರದರ್ಶಿಸತಕ್ಕದ್ದು.

19. ನೋಂದಣಿಯ ತಿದ್ದುಪಡಿ.– (1) **ನಮೂನೆ ಜಿಎಸ್‌ಟಿ ಆರ್‌ಇಜಿ–01** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–07** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–09** ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–10**ರಲ್ಲಿ ನೋಂದಣಿಗಾಗಿ ಅಥವಾ **ನಮೂನೆ ಜಿಎಸ್‌ಟಿ ಆರ್‌ಇಜಿ–13**ರಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಗಾಗಿ ಅರ್ಜಿಯಲ್ಲಿ ಒದಗಿಸಿದ, ನೋಂದಣಿಯನ್ನು ಅಥವಾ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವ ಸಮಯದಲ್ಲಾಗಲಿ, ಕಾಲಾನುಕಾಲಕ್ಕೆ ತಿದ್ದುಪಡಿಮಾಡಿದಂತೆ, ಯಾವುದೇ ವಿವರಗಳಲ್ಲಿ ಬದಲಾವಣೆಯಾಗಿದ್ದಲ್ಲಿ, ಅಂಥ ಬದಲಾವಣೆಯಾದ ಹದಿನೈದು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಒಂದು ಅರ್ಜಿಯನ್ನು, ಅಂಥ ಬದಲಾವಣೆಗೆ ಸಂಬಂಧಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

ಪರಂತು–

(ಎ) ಪ್ರಕರಣ 29ರ ಅಡಿಯಲ್ಲಿ ನೋಂದಣಿಯ ರದ್ದತಿಗೆ ಆಧಾರವಾಗದ ಬದಲಾವಣೆಯು –

(i) ವ್ಯವಹಾರದ ಕಾನೂನು ಸಮ್ಮತ ಹೆಸರಿಗೆ;

(ii) ಪ್ರಧಾನ ವ್ಯವಹಾರದ ಸ್ಥಳದ ಅಥವಾ ಯಾವುದೇ ಹೆಚ್ಚುವರಿ ವ್ಯವಹಾರ ಸ್ಥಳದ ವಿಳಾಸಕ್ಕೆ; ಅಥವಾ

(iii) ವ್ಯವಹಾರದ ದೈನಂದಿನ ಕಾರ್ಯಗಳಿಗೆ ಜವಾಬ್ದಾರರಾಗಿರುವ ಪಾಲುದಾರರು ಅಥವಾ ನಿರ್ದೇಶಕರು, ಕರ್ತ, ನಿರ್ವಹಣಾ ಸಮಿತಿ, ಟ್ರಸ್ಟಿಗಳ ಮಂಡಳಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ತತ್ಸಮಾನರ ಸೇರ್ಪಡೆ, ಬಿಡುಗಡೆ ಅಥವಾ ನಿವೃತ್ತಿಗೆ,

–ಸಂಬಂಧಿಸಿದಲ್ಲಿ, ಯುಕ್ತ ಅಧಿಕಾರಿಯು, ಯುಕ್ತವಾದ ಪರಿಶೀಲನೆಯ ನಂತರ, **ನಮೂನೆ ಜಿಎಸ್‌ಟಿ ಆರ್‌ಇಜಿ–14ರಲ್ಲಿನ**ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಒಳಗಾಗಿ ತಿದ್ದುಪಡಿಯನ್ನು ಅನುಮೋದಿಸತಕ್ಕದ್ದು, ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–15ರಲ್ಲಿ**ಆದೇಶವನ್ನು ನೀಡತಕ್ಕದ್ದು ಮತ್ತು ತಿದ್ದುಪಡಿಯನ್ನು ಅಪೇಕ್ಷಿಸುವ ಘಟನೆ ಸಂಭವಿಸಿದ ದಿನಾಂಕದಂದು ಅಂಥ ತಿದ್ದುಪಡಿಯು ಜಾರಿಗೆ ಬರತಕ್ಕದ್ದು.

(ಬಿ) ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಖಂಡ (ಎ)ನ ಉಪಖಂಡ (i) ಮತ್ತು ಉಪಖಂಡ (iii)ಕ್ಕೆ ಸಂಬಂಧಿಸಿದ ಬದಲಾವಣೆಯು, ಅದೇ ಶಾಶ್ವತ ಖಾತೆ ಸಂಖ್ಯೆಯ ಮೇಲೆ ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ನೋಂದಾಯಿತ ವ್ಯಕ್ತಿಯು ಪಡೆದ ಎಲ್ಲಾ ನೋಂದಣಿಗಳಿಗೆ ಅನ್ವಯವಾಗತಕ್ಕದ್ದು.

(ಸಿ) ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿದಂತಹ ಯಾವುದೇ ವಿವರಗಳಿಗೆ ಬದಲಾವಣೆಯು ಸಂಬಂಧಿಸಿದಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಅರ್ಜಿಯು ಸಲ್ಲಿಕೆಯಾದ ಕೂಡಲೇ ನೋಂದಣಿಯ ಪ್ರಮಾಣಪತ್ರವು ತಿದ್ದುಪಡಿಯಾಗತಕ್ಕದ್ದು:

(ಡಿ) ಯಾವುದೇ ವ್ಯವಹಾರದ ಸಂರಚನೆಯಲ್ಲಿನ ಬದಲಾವಣೆಯು ಒಬ್ಬ ನೋಂದಾಯಿತ ವ್ಯಕ್ತಿಯ ಶಾಶ್ವತ ಖಾತೆ ಸಂಖ್ಯೆಯಲ್ಲಿನ ಬದಲಾವಣೆಗೆ ಕಾರಣವಾದಲ್ಲಿ, ಸದರಿ ವ್ಯಕ್ತಿಯು **ನಮೂನೆ ಜಿಎಸ್‌ಟಿ ಆರ್‌ಇಜಿ–1**ರಲ್ಲಿ ಹೊಸ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಮತ್ತು ಪರಂತು, ಸದರಿ ನಿಯಮದ ಅಡಿಯಲ್ಲಿ ಸಲ್ಲಿಸಿದ, ಕಾಲ ಕಾಲಕ್ಕೆ ತಿದ್ದುಪಡಿಯಾದಂತೆ, ಪ್ರಾಧಿಕೃತ ಸಹಿದಾರನ ಮೊಬೈಲ್ ಸಂಖ್ಯೆ ಅಥವಾ ಮಿಂಚೋಲೆಯ ವಿಳಾಸದಲ್ಲಿನ ಯಾವುದೇ ಬದಲಾವಣೆಯನ್ನು, ನಿಯಮ 8ರ ಉಪನಿಯಮ (2)ರ ಅಡಿಯಲ್ಲಿ ಉಪಬಂಧಿಸಿದ ವಿಧಾನದಲ್ಲಿ ಸಾಮಾನ್ಯ ಪೋರ್ಟಲ್ ಮುಖಾಂತರ ಆನ್‌ಲೈನ್ ಪರಿಶೀಲನೆಯ ನಂತರವೇ ಮಾತ್ರ ಕಾರ್ಯಗತಗೊಳಿಸತಕ್ಕದ್ದು.

---

[5]ಪದಗಳನ್ನು 29ನೇ ಜುಲೈ, 2017ರಿಂದ ಜಾರಿಗೆ ಬರುವಂತೆ, ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಸಿ/2017) ದಿನಾಂಕ 29–08–2017ರ ಮೂಲಕ ಸೇರಿಸಲಾಗಿದೆ.

(2) ಉಪನಿಯಮ (1)ರ ಅಡಿಯಲ್ಲಿ ಕೋರಲಾದ ತಿದ್ದುಪಡಿಯು ಅಪೇಕ್ಷಣೀಯವಿಲ್ಲವೆಂದಾಗಲಿ ಅಥವಾ ಅದರೊಂದಿಗೆ ಒದಗಿಸಿದ ದಸ್ತಾವೇಜುಗಳು ಅಪೂರ್ಣ ಅಥವಾ ಸರಿಯಿಲ್ಲವೆಂದಾಗಲಿ ಎನ್ನುವ ಅಭಿಪ್ರಾಯವನ್ನು ಯುಕ್ತ ಅಧಿಕಾರಿಯು ಹೊಂದಿದ್ದಲ್ಲಿ, ಅವನು, **ನಮೂನೆ ಜಿಎಸ್‌ಟಿ ಆರ್‌ಇಜಿ–14**ರಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–03**ರಲ್ಲಿ ಒಂದು ಸೂಚನಾ ಪತ್ರವನ್ನು, ಸದರಿ ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಒಳಗಾಗಿ, ಉಪನಿಯಮ (1)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಏಕೆ ತಿರಸ್ಕರಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ತೋರಿಸುವಂತೆ ನೋಂದಾಯಿತ ವ್ಯಕ್ತಿಯನ್ನು ಅಗತ್ಯ ಪಡಿಸಿ, ಜಾರಿಗೊಳಿಸಬಹುದು.

(3) ಉಪನಿಯಮ (2)ರ ಅಡಿಯಲ್ಲಿ ಕಾರಣವನ್ನು ಕೇಳಿ ನೀಡಲಾದ ಸೂಚನಾ ಪತ್ರಕ್ಕೆ ನೋಂದಾಯಿತ ವ್ಯಕ್ತಿಯು ಉತ್ತರವನ್ನು ಸದರಿ ಸೂಚನಾ ಪತ್ರ ಜಾರಿಯಾದ ದಿನಾಂಕದಿಂದ ಏಳು ಕೆಲಸದ ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–04**ರಲ್ಲಿ ಒದಗಿಸತಕ್ಕದ್ದು.

(4) ಉಪನಿಯಮ(3)ರ ಅಡಿಯಲ್ಲಿ ಒದಗಿಸಿದ ಉತ್ತರವು, ತೃಪ್ತಿದಾಯಕವಾಗಿಲ್ಲದಿರುವುದು ಕಂಡುಬಂದಲ್ಲಿ ಅಥವಾ ಉಪನಿಯಮ (2)ರ ಅಡಿಯಲ್ಲಿ ನೀಡಿದ ಸೂಚನಾ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಯಾವುದೇ ಉತ್ತರವನ್ನು ಉಪನಿಯಮ (3)ರ ಅಡಿಯಲ್ಲಿ ನಿಯಮಿಸಲಾದ ಅವಧಿಯ ಒಳಗಾಗಿ ಒದಗಿಸಿರದಿದ್ದಲ್ಲಿ, ಉಪನಿಯಮ (1)ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–05**ರಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(5) ಒಬ್ಬ ಯುಕ್ತ ಅಧಿಕಾರಿಯು,–

(ಎ) ಅರ್ಜಿಯನ್ನು ಸಲ್ಲಿಸಿದ ಹದಿನೈದು ಕೆಲಸದ ದಿನಗಳ ಅವಧಿಯ ಒಳಗಾಗಿ, ಅಥವಾ
(ಬಿ) ಉಪನಿಯಮ (3)ರ ಅಡಿಯಲ್ಲಿನ ಕಾರಣ ಕೇಳುವ ಸೂಚನಾ ಪತ್ರಕ್ಕೆ ಉತ್ತರವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಅವಧಿಯ ಒಳಗಾಗಿ,

–ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ, ನೋಂದಣಿಯ ಪ್ರಮಾಣ ಪತ್ರವು, ಅರ್ಜಿಯಲ್ಲಿ ಕೋರಿರುವಷ್ಟರ ಮಟ್ಟಿಗೆ ತಿದ್ದುಪಡಿಯಾಗತಕ್ಕದ್ದು ಮತ್ತು ತಿದ್ದುಪಡಿಯಾದ ಪ್ರಮಾಣಪತ್ರವನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ನೋಂದಾಯಿತ ವ್ಯಕ್ತಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

20. ನೋಂದಣಿಯ ರದ್ದತಿಗಾಗಿ ಅರ್ಜಿ.– (1) ನಿಯಮ 12ರ ಅಡಿಯಲ್ಲಿ ಯಾರಿಗೆ ನೋಂದಣಿಯನ್ನು ಮಂಜೂರು ಮಾಡಲಾಗಿದೆಯೋ ಆ ಒಬ್ಬ ವ್ಯಕ್ತಿಯನ್ನು ಅಥವಾ ನಿಯಮ 17ರ ಅಡಿಯಲ್ಲಿ ಯಾರಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮಂಜೂರು ಮಾಡಲಾಗಿದೆಯೋ ಆ ಒಬ್ಬ ವ್ಯಕ್ತಿಯನ್ನು ಹೊರತು ಪಡಿಸಿದಂತೆ, ಪ್ರಕರಣ 29ರ ಉಪಪ್ರಕರಣ (1)ರ ಅಡಿಯಲ್ಲಿ ತನ್ನ ನೋಂದಣಿಯ ರದ್ದತಿಯನ್ನು ಕೋರುವ ಒಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–16**ರಲ್ಲಿ ಒಂದು ಅರ್ಜಿಯನ್ನು, ಅದರಲ್ಲಿ ನೋಂದಣಿಯ ರದ್ದತಿಯನ್ನು ಕೋರಿರುವ ದಿನಾಂಕದಂದು ದಾಸ್ತಾನಿನಲ್ಲಿರುವ ಹೂಡುವಳಿಗಳು ಮತ್ತು ದಾಸ್ತಾನಿನಲ್ಲಿರುವ ಅರೆ–ಸಿದ್ಧರೂಪದ ಅಥವಾ ಸಿದ್ಧರೂಪದ ಸರಕುಗಳಲ್ಲಿ ಒಳಗೊಂಡಿರುವ ಹೂಡುವಳಿಗಳ ಮತ್ತು ದಾಸ್ತಾನಿನಲ್ಲಿರುವ ಬಂಡವಾಳ ಸರಕುಗಳ ವಿವರಗಳು, ಅವುಗಳ ಮೇಲಿನ ಬಾಧ್ಯತೆ, ಅಂಥ ಬಾಧ್ಯತೆಗೆ ಪ್ರತಿಯಾಗಿ ಸಂದಾಯ ಮಾಡಿರುವುದು ಏನಾದರೂ ಇದ್ದರೆ ಆ ವಿವರಗಳನ್ನು ಒಳಗೊಂಡು, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅರ್ಜಿಯ ಜೊತೆಗೆ ಅದಕ್ಕೆ ಪೂರಕವಾದ ಸಂಬಂಧಿತ ದಸ್ತಾವೇಜುಗಳನ್ನು, ರದ್ದತಿಯನ್ನು ಅಪೇಕ್ಷಿಸುವ ಘಟನೆ ಸಂಭವಿಸಿದ ಮೂವತ್ತು ದಿನಗಳ ಒಳಗಾಗಿ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಬಹುದು:

ಪರಂತು, ಸ್ವಇಚ್ಛೆಯಿಂದ ನೋಂದಾಯಿತನಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಯ ಸಂದರ್ಭದಲ್ಲಿ, ನೋಂದಣಿ ಜಾರಿಯಾದ ದಿನಾಂಕದಿಂದ ಒಂದು ವರ್ಷ ಮುಗಿಯುವ ಮೊದಲು, ನೋಂದಣಿಯ ರದ್ದತಿಯ ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

21. ಕೆಲವೊಂದು ಸಂದರ್ಭಗಳಲ್ಲಿ ನೋಂದಣಿಯನ್ನು ರದ್ದುಗೊಳಿಸಬೇಕಿರುವುದು.– ಒಬ್ಬ ವ್ಯಕ್ತಿಗೆ ಮಂಜೂರು ಮಾಡಿದ ನೋಂದಣಿಯು, ಸದರಿ ವ್ಯಕ್ತಿಯು,–

(ಎ) ಘೋಷಿತ ವ್ಯವಹಾರ ಸ್ಥಳದಿಂದ ಯಾವುದೇ ವ್ಯವಹಾರವನ್ನು ನಡೆಸುತ್ತಿಲ್ಲದಿದ್ದರೆ;
(ಬಿ) ಈ ಅಧಿನಿಯಮದ ಅಥವಾ ಇದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಸರಕು ಅಥವಾ ಸೇವೆಗಳ ಪೂರೈಕೆಯಿಲ್ಲದೆ ಬೆಲೆಪಟ್ಟಿ ಅಥವಾ ಬಿಲ್ಲನ್ನು ನೀಡುತ್ತಿದ್ದರೆ; ಅಥವಾ
(ಸಿ) ಅಧಿನಿಯಮದ ಪ್ರಕರಣ 171ರ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ಮಾಡಿದ ನಿಯಮಗಳನ್ನು ಉಲ್ಲಂಘಿಸಿದರೆ,

–ರದ್ದತಿಗೆ ಬಾಧ್ಯವಾಗಿರತಕ್ಕದ್ದು.

22. ನೋಂದಣಿಯ ರದ್ದತಿ.– (1) ಒಬ್ಬ ವ್ಯಕ್ತಿಯ ನೋಂದಣಿಯು ಪ್ರಕರಣ 29ರ ಅಡಿಯಲ್ಲಿ ರದ್ದತಿಗೆ ಬಾಧ್ಯವಾಗಿದೆ ಎಂದು ನಂಬಲು ಯುಕ್ತ ಅಧಿಕಾರಿಗೆಕಾರಣಗಳಿದ್ದಲ್ಲಿ, ಆತನು **ನಮೂನೆ ಜಿಎಸ್‌ಟಿ ಆರ್‌ಇಜಿ–17**ರಲ್ಲಿ ಒಂದು ಸೂಚನಾ ಪತ್ರವನ್ನು, ಅವನ ನೋಂದಣಿಯನ್ನು ಏಕೆ ರದ್ದುಗೊಳಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ಸದರಿ ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಅವಧಿಯ ಒಳಗಾಗಿ, ತೋರಿಸುವಂತೆ ಅವನನ್ನು ಅಗತ್ಯ ಪಡಿಸಿ, ನೀಡಬಹುದು.

(2) ಉಪನಿಯಮ (1)ರ ಅಡಿಯಲ್ಲಿ ನೀಡಲಾದ ಕಾರಣವನ್ನು ಕೇಳುವ ಸೂಚನಾ ಪತ್ರಕ್ಕೆ ಉತ್ತರವನ್ನು ಸದರಿ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–18**ರಲ್ಲಿ ಒದಗಿಸತಕ್ಕದ್ದು.

(3) ತನ್ನ ನೋಂದಣಿಯ ರದ್ದತಿಗಾಗಿ ಅರ್ಜಿಯನ್ನು ಸಲ್ಲಿಸಿರುವ ಒಬ್ಬ ವ್ಯಕ್ತಿಯು ನೋಂದಣಿಗೆ ಬಾಧ್ಯನಾಗದೆಯಿರುವಲ್ಲಿ ಅಥವಾ ಆತನ ನೋಂದಣಿಯು ರದ್ದತಿಗೆ ಬಾಧ್ಯವಾಗಿದ್ದಲ್ಲಿ, ಯುಕ್ತ ಅಧಿಕಾರಿಯು ನಿಯಮ 20ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯ ದಿನಾಂಕದಿಂದ ಅಥವಾ ಸಂದರ್ಭಾನುಸಾರವಾಗಿ, ಉಪನಿಯಮ (1)ರ ಅಡಿಯಲ್ಲಿ ನೀಡಲಾದ ಕಾರಣವನ್ನು ಕೇಳುವ ಸೂಚನಾ ಪತ್ರದ ಉತ್ತರದ ದಿನಾಂಕದಿಂದ ಮೂವತ್ತು

ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–19**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು, ಆತನು ನಿರ್ಧರಿಸುವ ದಿನಾಂಕದಿಂದ ಜಾರಿಗೆ ಬರುವಂತೆ ನೋಂದಣಿಯನ್ನು ರದ್ದುಗೊಳಿಸತಕ್ಕದ್ದು ಮತ್ತು ಪ್ರಕರಣ 29ರ ಉಪಪ್ರಕರಣ (5)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ಒಳಗೊಂಡಂತೆ, ಯಾವುದೇ ತೆರಿಗೆಯ, ಬಡ್ಡಿಯ ಅಥವಾ ದಂಡದ ಹಿಂಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಿ ತೆರಿಗೆದಾಯಕ ವ್ಯಕ್ತಿಯನ್ನು ಅಧಿಸೂಚಿಸತಕ್ಕದ್ದು.

(4) ಉಪನಿಯಮ (2)ರ ಅಡಿಯಲ್ಲಿ ಒದಗಿಸಿದ ಉತ್ತರವು ತೃಪ್ತಿದಾಯಕವಾಗಿದ್ದಲ್ಲಿ, ಯುಕ್ತ ಅಧಿಕಾರಿಯು ನಡಾವಳಿಗಳನ್ನು ಕೈಬಿಡತಕ್ಕದ್ದು ಮತ್ತು ನಮೂನೆ ಜಿಎಸ್‌ಟಿ ಆರ್‌ಇಜಿ–20ರಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(5) ಉಪನಿಯಮ (3)ರ ಉಪಬಂಧಗಳು, ಮೃತ ಮಾಲೀಕನ ಕಾನೂನು ಸಮ್ಮತ ವಾರಸುದಾರರಿಗೆ, ಸ್ವತಃ ಮಾಲೀಕನೇ ಅರ್ಜಿಯನ್ನು ಸಲ್ಲಿಕೆ ಮಾಡಿದ ಹಾಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

23. ನೋಂದಣಿಯ ರದ್ದತಿಯ ಹಿಂಪಡೆಯುವಿಕೆ.– (1) ಯಾರ ನೋಂದಣಿಯನ್ನು ಯುಕ್ತ ಅಧಿಕಾರಿಯು ತನ್ನ ಸ್ವಪ್ರೇರಣೆಯಿಂದ ರದ್ದುಗೊಳಿಸಿರುವನೋ ಆ ಒಬ್ಬ ನೋಂದಾಯಿತ ವ್ಯಕ್ತಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–21**ರಲ್ಲಿ ನೋಂದಣಿ ರದ್ದತಿಯ ಹಿಂಪಡೆಯುವಿಕೆಗಾಗಿ ಒಂದು ಅರ್ಜಿಯನ್ನು, ನೋಂದಣಿ ರದ್ದತಿಯ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಅಂಥ ಯುಕ್ತ ಅಧಿಕಾರಿಗೆ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸಬಹುದು.

ಪರಂತು, ರಿಟರ್ನಗಳನ್ನು ಒದಗಿಸಲು ನೋಂದಾಯಿತ ವ್ಯಕ್ತಿಯು ವಿಫಲವಾಗಿರುವುದಕ್ಕಾಗಿ ನೋಂದಣಿಯನ್ನು ರದ್ದು ಮಾಡಲಾಗಿದ್ದರೆ, ಅಂಥ ರಿಟರ್ನಗಳನ್ನು ಒದಗಿಸಿರುವುದನ್ನು ಮತ್ತು ಅಂಥ ರಿಟರ್ನಗಳ ನಿಬಂಧನೆಗಳಿಗೆ ಅನುಗುಣವಾಗಿ ತೆರಿಗೆಯ, ಹಾಗೆ ಬಾಕಿಯಿರುವ ಯಾವುದೇ ಮೊತ್ತವನ್ನು, ಅದಕ್ಕಾಗಿ ಸಂದಾಯ ಮಾಡಬೇಕಿರುವ ಬಡ್ಡಿ, ದಂಡದ ಯಾವುದೇ ಮೊತ್ತ ಮತ್ತು ಸದರಿ ರಿಟರ್ನಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ವಿಳಂಬ ಶುಲ್ಕದ ಜೊತೆಗೆ ಸಂದಾಯ ಮಾಡಲಾಗಿರುವುದನ್ನು ಹೊರತುಪಡಿಸಿದಂತೆ, ಹಿಂಪಡೆಯುವಿಕೆಯ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

(2) (ಎ) ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ನೋಂದಣಿಯ ರದ್ದತಿಯ ಹಿಂಪಡೆಯುವಿಕೆಗಾಗಿ ಸಾಕಷ್ಟು ಕಾರಣಾಧಾರಗಳಿವೆಯೆಂದುಯುಕ್ತ ಅಧಿಕಾರಿಗೆ ಮನವರಿಕೆಯಾದಲ್ಲಿ, ಅವನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಇಜಿ–22**ರಲ್ಲಿ ಒಂದು ಆದೇಶದ ಮೂಲಕ ನೋಂದಣಿಯ ರದ್ದತಿಯನ್ನು ಹಿಂಪಡೆಯತಕ್ಕದ್ದು ಮತ್ತು ಅದನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

(ಬಿ) ಯುಕ್ತ ಅಧಿಕಾರಿಯು, ಖಂಡ (ಎ)ನಲ್ಲಿ ನಿರ್ದಿಷ್ಟಪಡಿಸಿರುವುಗಳನ್ನು ಹೊರತುಪಡಿಸಿದ ಸನ್ನಿವೇಶಗಳ ಅಡಿಯಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–05**ರಲ್ಲಿ ಒಂದು ಆದೇಶದ ಮೂಲಕ ನೋಂದಣಿಯ ರದ್ದತಿಯ ಹಿಂಪಡೆಯುವಿಕೆಯ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಅದನ್ನು ಅರ್ಜಿದಾರನಿಗೆ ತಿಳಿಸಬಹುದು.

(3) ಯುಕ್ತ ಅಧಿಕಾರಿಯು, ಉಪನಿಯಮ (2)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಲಾದ ಆದೇಶವನ್ನು ಹೊರಡಿಸುವ ಮೊದಲು, ಅರ್ಜಿದಾರನನ್ನು ಉಪನಿಯಮ (1)ರ ಅಡಿಯಲ್ಲಿ ಹಿಂಪಡೆಯುವಿಕೆಗಾಗಿ ಸಲ್ಲಿಸಿದ ಅರ್ಜಿಯನ್ನು ಏಕೆ ತಿರಸ್ಕರಿಸಬಾರದು ಎನ್ನುವುದಕ್ಕೆ ಕಾರಣಗಳನ್ನು ನೀಡುವಂತೆ ಕೋರಿ**ನಮೂನೆ ಜಿಎಸ್‌ಟಿ ಆರ್‌ಇಜಿ–23**ರಲ್ಲಿ ಒಂದು ಸೂಚನಾ ಪತ್ರವನ್ನು ನೀಡತಕ್ಕದ್ದು, ಮತ್ತು ಅರ್ಜಿದಾರನು ಸೂಚನಾ ಪತ್ರ ಜಾರಿಯಾದ ಏಳು ದಿನಗಳ ಅವಧಿಯ ಒಳಗಾಗಿ, **ನಮೂನೆ ಜಿಎಸ್‌ಟಿ ಆರ್‌ಇಜಿ–24**ರಲ್ಲಿ ಉತ್ತರವನ್ನು ಒದಗಿಸತಕ್ಕದ್ದು.

(4) **ನಮೂನೆ ಜಿಎಸ್‌ಟಿ ಆರ್‌ಇಜಿ–24**ರಲ್ಲಿ ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ಸ್ವೀಕರಿಸಿದ ತರುವಾಯ, ಯುಕ್ತ ಅಧಿಕಾರಿಯು, ಉಪನಿಯಮ (2)ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ಅರ್ಜಿದಾರನಿಂದ ಅಂಥ ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ, ಅರ್ಜಿಯನ್ನು ವಿಲೇ ಮಾಡಲು ಮುಂದುವರಿಯತಕ್ಕದ್ದು.

24. ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿನ ನೋಂದಾಯಿತ ವ್ಯಕ್ತಿಗಳ ವಲಸೆ.– (1) (ಎ) ಮೂಲದಲ್ಲಿ ತೆರಿಗೆಯನ್ನು ಮುರುಗಡೆ ಮಾಡುವ ಒಬ್ಬ ವ್ಯಕ್ತಿಯನ್ನು ಅಥವಾ ಒಬ್ಬ ಹೂಡುವಳಿ ಸೇವೆ ಹಂಚಿಕೆದಾರನನ್ನು ಹೊರತುಪಡಿಸಿದಂತೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ನೋಂದಾಯಿತನಾದ ಮತ್ತು ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಉಪಬಂಧಗಳ ಅಡಿಯಲ್ಲಿ ನೀಡಲಾದ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಮಿಂಚೋಲೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸಿಂಧುಗೊಳಿಸುವಿಕೆಯ ಮೂಲಕ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

(ಬಿ) ಖಂಡ (ಎ)ನ ಅಡಿಯಲ್ಲಿ ದಾಖಲು ಮಾಡಿಕೊಂಡ ನಂತರ, ಸದರಿ ವ್ಯಕ್ತಿಗೆ ತಾತ್ಕಾಲಿಕ ಆಧಾರದಲ್ಲಿ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು ಮತ್ತು **ನಮೂನೆ ಜಿಎಸ್‌ಟಿ ಆರ್‌ಇಜಿ–25**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು, ಅದರಲ್ಲಿ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ಸಂಖ್ಯೆಯನ್ನು ಸೇರಿಸಿ, ಸಾಮಾನ್ಯ ಪೋರ್ಟಲ್‌ನಲ್ಲಿ ಅವನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು:

ಪರಂತು, ಒಂದು ಶಾಶ್ವತ ಖಾತೆ ಸಂಖ್ಯೆಯ ಆಧಾರದ ಮೇಲೆ, ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಅನೇಕ ನೋಂದಣಿಗಳನ್ನು ಮಂಜೂರು ಮಾಡಲಾಗಿರುವ ಒಬ್ಬ ತೆರಿಗೆದಾಯಕ ವ್ಯಕ್ತಿಗೆ, ಈ ಅಧಿನಿಯಮದ ಅಡಿಯಲ್ಲಿ ಒಂದೇ ಒಂದು ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.

(2) (ಎ) ಉಪನಿಯಮ (1)ರ ಅಡಿಯಲ್ಲಿ ತಾತ್ಕಾಲಿಕ ನೋಂದಣಿಯನ್ನು ಮಂಜೂರು ಮಾಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ, ನಮೂನೆ ಜಿಎಸ್‌ಟಿ ಆರ್‌ಇಜಿ–26ರಲ್ಲಿ ಒಂದು ಅರ್ಜಿಯನ್ನು, ಸದರಿ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳೊಂದಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(ಬಿ) ಖಂಡ (ಎ)ನಲ್ಲಿ ಕೇಳಲಾದ ಮಾಹಿತಿಯನ್ನು ಮೂರುತಿಂಗಳ ಅವಧಿಯ ಒಳಗಾಗಿ ಅಥವಾ ಈ ಸಂಬಂಧದಲ್ಲಿ ವಿಸ್ತರಿಸಬಹುದಾದ ಅಂಥ ಮುಂದುವರೆದ ಅವಧಿಯ ಒಳಗಾಗಿ ಒದಗಿಸತಕ್ಕದ್ದು.

(ಸಿ) ಅರ್ಜಿಯಲ್ಲಿ ಒದಗಿಸಲಾದ ಮಾಹಿತಿ ಮತ್ತು ವಿವರಗಳು ಯುಕ್ತ ಅಧಿಕಾರಿಗೆ ಸರಿಯಾಗಿವೆಯೆಂದು ಮತ್ತು ಸಂಪೂರ್ಣವೆಂದು ಕಂಡುಬಂದರೆ, **ನಮೂನೆ ಜಿಎಸ್‌ಟಿ ಆರ್‌ಇಜಿ–06**ರಲ್ಲಿ ನೋಂದಣಿ ಪ್ರಮಾಣ ಪತ್ರವನ್ನು, ವಿದ್ಯುನ್ಮಾನ ರೀತಿಯಲ್ಲಿ ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(3) ಉಪನಿಯಮ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳು ಅಥವಾ ಮಾಹಿತಿಯನ್ನು ಒದಗಿಸದೆ ಇದ್ದಲ್ಲಿ ಅಥವಾ ಸರಿಯಾಗಿವೆಯೆಂದು ಮತ್ತು ಸಂಪೂರ್ಣವೆಂದು ಕಂಡುಬರದಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಇಜಿ–27**ರಲ್ಲಿ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಿದ ನಂತರ ಮತ್ತು ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶವನ್ನು ನೀಡಿದ ನಂತರ, ಉಪನಿಯಮ (1)ರ ಅಡಿಯಲ್ಲಿ ಮಂಜೂರು ಮಾಡಲಾದ ತಾತ್ಕಾಲಿ ನೋಂದಣಿಯನ್ನು ರದ್ದುಪಡಿಸತಕ್ಕದ್ದು ಮತ್ತು ನಮೂನೆ ಜಿಎಸ್‌ಟಿ ಆರ್‌ಇಜಿ–28ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು.

ಪರಂತು, ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಯುಕ್ತವಾದ ಅವಕಾಶವನ್ನು ನೀಡಿದ ನಂತರ, ಯಾವ ಕಾರಣಕ್ಕಾಗಿ ಸೂಚನಪತ್ರವನ್ನು ನೀಡಲಾಗಿದೆಯೋ ಆ ಕಾರಣ ಅಸ್ತಿತ್ವದಲ್ಲಿಲ್ಲ ಎಂದು ಕಂಡು ಬಂದರೆ, **ನಮೂನೆ ಜಿಎಸ್‌ಟಿ ಆರ್‌ಇಜಿ–27**ರಲ್ಲಿ ನೀಡಲಾದ ಕಾರಣ ಕೇಳುವ ಸೂಚನಾ ಪತ್ರವನ್ನು, **ನಮೂನೆ ಜಿಎಸ್‌ಟಿ ಆರ್‌ಇಜಿ–20**ರಲ್ಲಿ ಒಂದು ಆದೇಶವನ್ನು ನೀಡುವುದರ ಮೂಲಕ ಹಿಂತೆಗೆದುಕೊಳ್ಳಬಹುದು.

(4) ಉಪನಿಯಮ (2)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಿದ ಮಾಹಿತಿ ಮತ್ತು ವಿವರಗಳನ್ನು ಒದಗಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ನೋಂದಣಿ ಪ್ರಮಾಣಪತ್ರವನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಅರ್ಜಿದಾರನಿಗೆ ಲಭ್ಯವಾಗುವಂತೆ ಮಾಡಿರದಿದ್ದಲ್ಲಿ ಮತ್ತು ಉಪನಿಯಮ (3)ರ ಅಡಿಯಲ್ಲಿ ಸದರಿ ಅವಧಿಯ ಒಳಗಾಗಿ ಯಾವುದೇ ಸೂಚನಾ ಪತ್ರವನ್ನು ನೀಡಿರದಿದ್ದಲ್ಲಿ, ನೋಂದಣಿಯು ಮಂಜೂರು ಮಾಡಲಾಗಿದೆ ಎಂದು ಪರಿಭಾಸತಕ್ಕದ್ದು ಮತ್ತು ಯುಕ್ತವಾಗಿ ಸಹಿಮಾಡಿದ ಅಥವಾ ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಲಾದ ಸದರಿ ನೋಂದಣಿ ಪ್ರಮಾಣಪತ್ರವನ್ನು ನೋಂದಾಯಿತ ವ್ಯಕ್ತಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(5) ಅಧಿನಿಯಮದ ಅಡಿಯಲ್ಲಿ, ನೋಂದಣಿಗೆ ಬಾಧ್ಯನಾಗದಿರುವ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ವ್ಯಕ್ತಿಯು, [6][7][8][31ನೇ ಡಿಸೆಂಬರ್ 2017ರಂದು ಅಥವಾ ಮುಂಚೆ]]], ಆತನ ಆಯ್ಕೆಯನುಸಾರ,**ನಮೂನೆ ಜಿಎಸ್‌ಟಿ ಆರ್‌ಇಜಿ–29**ರಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಆತನಿಗೆ ಮಂಜೂರು ಮಾಡಿದ ನೋಂದಣಿಯ ರದ್ದತಿಗಾಗಿ ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸಬಹುದು ಮತ್ತು ಯುಕ್ತ ಅಧಿಕಾರಿಯು ತಾನು ಸೂಕ್ತವೆಂದು ಪರಿಭಾವಿಸಿದ ಅಂಥ ವಿಚಾರಣೆಯನ್ನು ನಡೆಸಿದ ನಂತರ, ಸದರಿ ನೋಂದಣಿಯನ್ನು ರದ್ದುಪಡಿಸತಕ್ಕದ್ದು.

25. ಕೆಲವೊಂದು ಸಂದರ್ಭಗಳಲ್ಲಿ ವ್ಯವಹಾರದ ಆವರಣಗಳ ಭೌತಿಕ ಪರಿಶೀಲನೆ.– ಯುಕ್ತ ಅಧಿಕಾರಿಗೆ, ನೋಂದಣಿಯನ್ನು ಮಂಜೂರು ಮಾಡಿದ ನಂತರ, ನೋಂದಾಯಿತ ವ್ಯಕ್ತಿಯ ವ್ಯವಹಾರದ ಸ್ಥಳದ ಭೌತಿಕ ಪರಿಶೀಲನೆಯನ್ನು ಮಾಡುವುದು ಅಗತ್ಯವಿದೆ ಎಂದು ಮನವರಿಕೆಯಾದಲ್ಲಿ, ಅವನು ಅಂಥ ಪರಿಶೀಲನೆಯನ್ನು ಮಾಡಿಸಬಹುದು ಮತ್ತು ಪರಿಶೀಲನಾ ವರದಿಯನ್ನು, ಛಾಯಾಚಿತ್ರಗಳನ್ನು ಒಳಗೊಂಡಂತೆ ಇತರೇ ದಸ್ತಾವೇಜುಗಳೊಂದಿಗೆ, **ನಮೂನೆ ಜಿಎಸ್‌ಟಿ ಆರ್‌ಇಜಿ–30**ರಲ್ಲಿ, ಅಂಥ ಪರಿಶೀಲನೆಯ ದಿನಾಂಕದ ನಂತರದ ಹದಿನೈದು ಕೆಲಸದ ದಿನಗಳ ಅವಧಿಯ ಒಳಗಾಗಿ, ಸಾಮಾನ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

26. ಅಧಿಪ್ರಮಾಣೀಕರಣದ ವಿಧಾನ.– (1) ಸೂಚನಾ ಪತ್ರಗಳಿಗೆ ಉತ್ತರಗಳೇನಾದರೂ ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಎಲ್ಲಾ ಅರ್ಜಿಗಳನ್ನು, ಹೊರಮುಖ ಮತ್ತು ಒಳಮುಖ ಪೂರೈಕೆಗಳ ವಿವರಗಳನ್ನು ಒಳಗೊಂಡಂತೆ ರಿಟರ್ನಗಳನ್ನು, ಅಪೀಲುಗಳನ್ನು ಅಥವಾ ಈ ನಿಯಮಗಳ ಅಡಿಯಲ್ಲಿ ಸಲ್ಲಿಸಲು ಅಗತ್ಯವಿರುವ ಯಾವುದೇ ಇತರ ದಸ್ತಾವೇಜುಗಳನ್ನು, ಡಿಜಿಟಲ್ ಸಹಿಯಿರುವ ಪ್ರಮಾಣಪತ್ರದೊಂದಿಗೆ ಅಥವಾ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ (2000ದ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ನಿರ್ದಿಷ್ಟಪಡಿಸಿದ ಇ–ಸಹಿಯ ಮೂಲಕ ಅಥವಾ ಈ ಸಂಬಂಧದಲ್ಲಿ [9][ಆಯುಕ್ತರಿಂದ]ಅಧಿಸೂಚಿಸಿದ ಯಾವುದೇ ಇತರ ಬಗೆಯ ಸಹಿಯ ಅಥವಾ ಪರಿಶೀಲನಾ ಪ್ರಕಾರದ ಮೂಲಕ ಪರಿಶೀಲಿಸಿ ವಿದ್ಯುನ್ಮಾನ ರೀತಿಯಲ್ಲಿ

---

[6] "ಗೊತ್ತುಪಡಿಸಲಾದ ದಿನದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ" ಪದಗಳಿಗಾಗಿ, 28ನೇ ಜೂನ್, 2017ರಿಂದ ಜಾರಿಗೆ ಬರುವಂತೆ, ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಬಿ/2017) ದಿನಾಂಕ 01–08–2017ರ ಮೂಲಕ ಈ ಪದಗಳನ್ನು ಪ್ರತಿಯೋಜಿಸಲಾಗಿದೆ.

[7] "30ನೇ ಸೆಪ್ಟಂಬರ್ 2017ರ ಒಳಗಾಗಿ" ಪದಗಳಿಗಾಗಿ, 30ನೇ ಸೆಪ್ಟಂಬರ್ 2017ರಿಂದ ಜಾರಿಗೆ ಬರುವಂತೆಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಎಫ್/2017) ದಿನಾಂಕ 17–10–2017ರ ಮೂಲಕ ಹಾಗೂ ಶುದ್ಧಿಪತ್ರ ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 28–12–2017ಓದಿಕೊಂಡು ಈ ಪದಗಳನ್ನು ಪ್ರತಿಯೋಜಿಸಲಾಗಿದೆ.

[8] "31ನೇ ಅಕ್ಟೋಬರ್ 2017ರ ಒಳಗಾಗಿ" ಪದಗಳಿಗಾಗಿ, ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಐ/2017) ದಿನಾಂಕ 13–12–2017ರ ಮೂಲಕ ಹಾಗೂ ಶುದ್ಧಿಪತ್ರ ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 28–12–2017ಓದಿಕೊಂಡು ಈ ಪದಗಳನ್ನು ಪ್ರತಿಯೋಜಿಸಲಾಗಿದೆ.

[9] "ಮಂಡಳಿಯಿಂದ" ಪದಗಳಿಗಾಗಿ ಶುದ್ಧಿಪತ್ರ ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 28–12–2017ರ ಮೂಲಕ ತಿದ್ದುಪಡಿ ಮಾಡಲಾಗಿದೆ.

ಸಲ್ಲಿಸತಕ್ಕದ್ದು:

ಪರಂತು, ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ನೋಂದಾಯಿತನಾದ ಒಬ್ಬ ನೋಂದಾಯಿತ ವ್ಯಕ್ತಿಯು, ಡಿಜಿಟಲ್ ಸಹಿಯಿರುವಪ್ರಮಾಣಪತ್ರದ ಮೂಲಕ ಮಾತ್ರ ಪರಿಶೀಲಿಸಿದ ದಸ್ತಾವೇಜುಗಳು ಅಥವಾ ಅರ್ಜಿಯನ್ನು ಒದಗಿಸತಕ್ಕದ್ದು:

(2) ರಿಟರ್ನಗಳನ್ನು ಒಳಗೊಂಡಂತೆ ಆನ್‌ಲೈನ್‌ನಲ್ಲಿ ಒದಗಿಸಿದ ಪ್ರತಿಯೊಂದು ದಸ್ತಾವೇಜಗೆ–

(ಎ) ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಸ್ವತಃ ವ್ಯಕ್ತಿಯ ಮೂಲಕಅಥವಾ ಅವನು ಭಾರತದಲ್ಲಿಕಿ ಇರದಿದ್ದಲ್ಲಿ, ಈ ಸಂಬಂಧದಲ್ಲಿ ಅವನಿಂದ ಯುಕ್ತವಾಗಿ ಪ್ರಾಧಿಕೃತರಾದ ಕೆಲವು ಇತರ ವ್ಯಕ್ತಿಗಳ ಮೂಲಕಮತ್ತು ವ್ಯಕ್ತಿಯು ತನ್ನ ವ್ಯವಹಾರಗಳಿಗೆ ಹಾಜರಾಗಲು ಮಾನಸಿಕವಾಗಿ ಅಸಮರ್ಥನಾಗಿದ್ದಲ್ಲಿ, ಆತನ ಪೋಷಕ ಅಥವಾ ಆತನ ಪರವಾಗಿ ಕಾರ್ಯನಿರ್ವಹಿಸಲು ಸಮರ್ಥನಾದ ಯಾವುದೇ ಇತರ ವ್ಯಕ್ತಿಯಿಂದ;

(ಬಿ)ಹಿಂದೂ ಅವಿಭಾಜ್ಯ ಕುಟುಂಬದ ಸಂದರ್ಭದಲ್ಲಿ, ಒಬ್ಬ ಕರ್ತನಿಂದ ಅಥವಾ ಕರ್ತನು ಭಾರತದಲ್ಲಿ ಇರದಿದ್ದಲ್ಲಿ, ಅಥವಾ ತನ್ನ ವ್ಯವಹಾರಗಳಿಗೆ ಹಾಜರಾಗಲು ಮಾನಸಿಕವಾಗಿ ಅಸಮರ್ಥನಾಗಿದ್ದಲ್ಲಿ, ಅಂಥ ಕುಟಂಬದ ಯಾವುದೇ ಇತರ ವಯಸ್ಕ ಸದಸ್ಯನಿಂದ ಅಥವಾ ಅಂಥ ಕರ್ತನ ಪ್ರಾಧಿಕೃತ ಸಹಿದಾರನಿಂದ;

(ಸಿ) ಒಂದು ಕಂಪನಿಯ ಸಂದರ್ಭದಲ್ಲಿ, ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಡಿ) ಸರ್ಕಾರ ಅಥವಾ ಯಾವುದೇ ಸರ್ಕಾರದ ಏಜೆನ್ಸಿ ಅಥವಾ ಸ್ಥಳೀಯ ಪ್ರಾಧಿಕಾರದ ಸಂದರ್ಭದಲ್ಲಿ, ಈ ಸಂಬಂಧದಲ್ಲಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯಿಂದ;

(ಇ) ಒಂದು ಪಾಲುದಾರಿಕಾ ಸಂಸ್ಥೆಯ ಸಂದರ್ಭದಲ್ಲಿ, ಅದರ ಅಪ್ರಾಪ್ತನಾಗಿರದ ಯಾವುದೇ ಪಾಲುದಾರನಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಎಫ್) ಯಾವುದೇ ಇತರೇ ಸಂಘದ ಸಂದರ್ಭದಲ್ಲಿ, ಸಂಘದ ಯಾವುದೇ ಸದಸ್ಯನಿಂದ ಅಥವಾ ವ್ಯಕ್ತಿಗಳಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಜಿ) ಒಂದು ಟ್ರಸ್ಟ್‌ನ ಸಂದರ್ಭದಲ್ಲಿ, ಟ್ರಸ್ಟಿಯಿಂದ ಅಥವಾ ಯಾವುದೇ ಟ್ರಸ್ಟಿಯಿಂದ ಅಥವಾ ಪ್ರಾಧಿಕೃತ ಸಹಿದಾರನಿಂದ;

(ಹೆಚ್) ಇತರೇ ಯಾವುದೇ ವ್ಯಕ್ತಿಗಳ ಸಂದರ್ಭದಲ್ಲಿ, ಆತನ ಪರವಾಗಿ ಕಾರ್ಯನಿರ್ವಹಿಸಲು ಸಮರ್ಥನಾದ ಕೆಲವು ವ್ಯಕ್ತಿಯಿಂದ, ಅಥವಾ ಪ್ರಕರಣ 48ರ ಉಪಬಂಧಗಳಿಗೆ ಅನುಸಾರವಾಗಿ ಪ್ರಾಧಕೃತನಾದ ಒಬ್ಬ ವ್ಯಕ್ತಿಯು,

– ಸಹಿಮಾಡಿರತಕ್ಕದ್ದು ಮತ್ತು ವಿದ್ಯುನ್ಮಾನ ಪರಿಶೀಲನೆಯ ಕೋಡ್ ಮುಖಾಂತರ ಪರಿಶೀಲಿಸಿರತಕ್ಕದ್ದು.

(3) ಈ ನಿಯಮಗಳ ಅಡಿಯಲ್ಲಿನ ಎಲ್ಲಾ ಸೂಚನಾಪತ್ರಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಆದೇಶಗಳನ್ನು, ಯುಕ್ತ ಅಧಿಕಾರಿಯಿಂದ ಅಥವಾ ಅಂಥ ಸೂಚನಾಪತ್ರಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಆದೇಶಗಳನ್ನು, ನೀಡಲು ಪ್ರಾಧಿಕೃತನಾದ ಯಾವುದೇ ಇತರೇ ಅಧಿಕಾರಿಯಿಂದ, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ (2000ದ ಕೇಂದ್ರ ಅಧಿನಿಯಮ 21) ಅಡಿಯಲ್ಲಿ ನಿರ್ದಿಷ್ಟಪಡಿಸಿದ ಡಿಜಿಟಲ್ ಸಹಿಯಿರುವಪ್ರಮಾಣಪತ್ರದೊಂದಿಗೆ ವಿದ್ಯುನ್ಮಾನ ರೀತಿಯಲ್ಲಿ ನೀಡತಕ್ಕದ್ದು.

ಅಧ್ಯಾಯIV
ಪೂರೈಕೆಯ ಮೌಲ್ಯದ ನಿರ್ಧರಣೆ

27. ಪ್ರತಿಫಲವು ಪೂರ್ಣವಾಗಿ ಹಣದ ರೂಪದಲ್ಲಿಲ್ಲದಿರುವಾಗ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯ.– ಪೂರ್ಣವಾಗಿ ಹಣದಲ್ಲಿ ಇಲ್ಲದ ಪ್ರತಿಫಲಕ್ಕಾಗಿ ಮಾಡಿದ ಸರಕು ಅಥವಾ ಸೇವೆಗಳ ಪೂರೈಕೆಯಾದಲ್ಲಿ, ಪೂರೈಕೆಯ ಮೌಲ್ಯವು,

(ಎ) ಅಂಥ ಪೂರೈಕೆಯ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು;

(ಬಿ) ಮುಕ್ತ ಮಾರುಕಟ್ಟೆಯ ಮೌಲ್ಯವು ಲಭ್ಯವಿರದಿದ್ದರೆ, ಹಣದ ರೂಪದ ಪ್ರತಿಫಲದ ಮತ್ತು ಹಣದ ರೂಪದಲ್ಲಿರದ ಪ್ರತಿಫಲಕ್ಕೆ ತತ್ಸಮಾನವಾದ ಹಣದಲ್ಲಿನ ಯಾವುದೇ ಅಂಥ ಮುಂದುವರೆದ ಮೊತ್ತದ, ಪೂರೈಕೆಯ ಸಮಯದಲ್ಲಿ ಅಂಥ ಮೊತ್ತ ತಿಳಿದುಬಂದರೆ, ಒಟ್ಟು ಮೊತ್ತವಾಗಿರತಕ್ಕದ್ದು;

(ಸಿ) ಖಂಡ (ಎ) ಅಥವಾ ಖಂಡ (ಬಿ)ಯ ಅಡಿಯಲ್ಲಿ, ಪೂರೈಕೆಯ ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ಅದೇ ತರಹದ ಮತ್ತು ಗುಣಮಟ್ಟದ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯವಾಗಿರತಕ್ಕದ್ದು;

(ಡಿ) ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ, ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸಿದಂತೆ ಹಣದ ರೂಪದ ಪ್ರತಿಫಲದ ಮತ್ತು ಹಣದ ರೂಪದಲ್ಲಿರದ ಪ್ರತಿಫಲಕ್ಕೆ ತತ್ಸಮಾನವಾದ ಹಣದಲ್ಲಿನ ಯಾವುದೇ ಅಂಥ ಮುಂದುವರೆದ ಮೊತ್ತದ ಒಟ್ಟು ಮೊತ್ತವಾಗಿರತಕ್ಕದ್ದು;

ದೃಷ್ಟಾಂತ:

(1) ಒಂದು ಹೊಸ ದೂರವಾಣಿಯನ್ನು ಒಂದು ಹಳೆಯದಾದ ದೂರವಾಣಿಯ ವಿನಿಮಯದೊಂದಿಗೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಪೂರೈಕೆ ಮಾಡಿದ್ದಲ್ಲಿ ಮತ್ತು ವಿನಿಮಯರಹಿತವಾದ ಹೊಸ ದೂರವಾಣಿಯ ಬೆಲೆ ಇಪ್ಪತ್ತು ಸಾವಿರದ ನಾಲ್ಕು ಸಾವಿರ ರೂಪಾಯಿಗಳಾಗಿದ್ದರೆ, ಹೊಸ ದೂರವಾಣಿಯ ಮುಕ್ತ ಮಾರುಕಟ್ಟೆಯ ಮೌಲ್ಯವು ಇಪ್ಪತ್ತು ಸಾವಿರದ ನಾಲ್ಕು ಸಾವಿರ ರೂಪಾಯಿಗಳಾಗಿರುತ್ತದೆ.

(2) ಒಂದು ಲ್ಯಾಪ್‌ಟಾಪ್‌ಅನ್ನು ಸ್ವೀಕರಿಸುವವನಿಂದ ತಯಾರಿಕೆಯಾದ ಪ್ರಿಂಟರ್‌ನ್ನು ವಸ್ತು ವಿನಿಮಯದೊಂದಿಗೆ ನಲವತ್ತು ಸಾವಿರ ರೂಪಾಯಿಗಳಿಗೆ ಪೂರೈಕೆ ಮಾಡಿದ್ದಲ್ಲಿ ಮತ್ತು ಪೂರೈಕೆಯ ಸಮಯದಲ್ಲಿ ಪ್ರಿಂಟರ್‌ನ ಮೌಲ್ಯವು ನಾಲ್ಕು ಸಾವಿರ ರೂಪಾಯಿಗಳಾಗಿದ್ದು ಆದರೆ ಲ್ಯಾಪ್‌ಟಾಪ್‌ನ ಮುಕ್ತ ಮಾರುಕಟ್ಟೆಯ ಬೆಲೆ ಗೊತ್ತಿಲ್ಲದಿದ್ದಾಗ, ಲ್ಯಾಪ್‌ಟಾಪ್‌ನ ಪೂರೈಕೆ ಮೌಲ್ಯ ನಲವತ್ತ ನಾಲ್ಕು ಸಾವಿರ ರೂಪಾಯಿಗಳಾಗಿರುತ್ತದೆ.

28. ಏಜೆಂಟನ ಮೂಲಕವಾಗಿರುವುದನ್ನು ಹೊರತುಪಡಿಸಿದಂತೆ, ವಿಭಿನ್ನ ಅಥವಾ ಸಂಬಂಧಿತ ವ್ಯಕ್ತಿಗಳ ನಡುವೆ ನಡೆದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ.– ಪ್ರಕರಣ 25ರ ಉಪಪ್ರಕರಣ (4) ಮತ್ತು (5)ರಲ್ಲಿ ನಿರ್ದಿಷ್ಟಪಡಿಸಿದ ವಿಭಿನ್ನ ವ್ಯಕ್ತಿಗಳ ನಡುವಿನ ಅಥವಾ ಏಜೆಂಟನ ಮೂಲಕ ಪೂರೈಕೆ ಮಾಡುವುದನ್ನು ಹೊರತುಪಡಿಸಿದಂತೆ ಪೂರೈಕೆದಾರ ಮತ್ತು ಸ್ವೀಕರಿಸುವವನು ಸಂಬಂಧಿತರಾಗಿದ್ದಲ್ಲಿ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವು,–

(ಎ) ಅಂಥ ಪೂರೈಕೆಯ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು;

(ಬಿ) ಮುಕ್ತ ಮಾರುಕಟ್ಟೆಯ ಮೌಲ್ಯವು ಲಭ್ಯವಿರದಿದ್ದರೆ, ಅದೇ ತರಹದ ಮತ್ತು ಗುಣಮಟ್ಟದ ಸರಕು ಅಥವಾ ಸೇವೆಗಳ ಪೂರೈಕೆಯ ಮೌಲ್ಯವಾಗಿರತಕ್ಕದ್ದು;

(ಸಿ) ಖಂಡ (ಎ) ಅಥವಾ ಖಂಡ (ಬಿ)ಯ ಅಡಿಯಲ್ಲಿ, ಮೌಲ್ಯವನ್ನು ನಿರ್ಧರಿಸಲಾಗದಿದ್ದರೆ, ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸಲಾದ ಮೌಲ್ಯವಾಗಿರತಕ್ಕದ್ದು:

ಪರಂತು, ಸ್ವೀಕರಿಸುವವನು ಸರಕುಗಳನ್ನು ಹಾಗೆಯೇ ಮುಂದುವರೆದ ಪೂರೈಕೆ ಮಾಡಲು ಉದ್ದೇಶಿಸಿದ್ದಲ್ಲಿ, ಮೌಲ್ಯವು, ಪೂರೈಕೆದಾರನ ಆಯ್ಕೆಯ ಅನ್ವಯ, ಸ್ವೀಕರಿಸುವವನಿಂದ ಸಂಬಂಧಿತ ವ್ಯಕ್ತಿಯಾಗಿರದ ತನ್ನ ಗ್ರಾಹಕನಿಗೆ ಅದೇ ತರಹದ ಮತ್ತು ಗುಣಮಟ್ಟದ ಸರಕುಗಳ ಪೂರೈಕೆಗಾಗಿ ವಿಧಿಸಿದ ಬೆಲೆಯ ಶೇಕಡಾ ತೊಂಬತ್ತರಷ್ಟಕ್ಕೆ ತತ್ಸಮಾನವಾದ ಒಂದು ಮೊತ್ತವಾಗಿರತಕ್ಕದ್ದು:

ಮತ್ತು ಪರಂತು, ಸ್ವೀಕರಿಸುವವನು ಪೂರ್ಣ ಹೂಡುವಳಿ ತೆರಿಗೆ ಜಮೆಗೆ ಅರ್ಹನಾಗಿದ್ದಲ್ಲಿ, ಬೆಲೆಪಟ್ಟಿಯಲ್ಲಿ ಘೋಷಿಸಲಾದ ಮೌಲ್ಯವನ್ನು ಸರಕು ಅಥವಾ ಸೇವೆಗಳ ಮುಕ್ತ ಮಾರುಕಟ್ಟೆಯ ಮೌಲ್ಯ ಎಂದು ಪರಿಭಾವಿಸತಕ್ಕದ್ದು.

29. ಒಬ್ಬ ಏಜೆಂಟನ ಮೂಲಕ ಮಾಡಿದ ಅಥವಾ ಸ್ವೀಕರಿಸಿದ ಸರಕುಗಳ ಪೂರೈಕೆಯ ಮೌಲ್ಯ.–ಪ್ರಧಾನಕರ್ತ ಮತ್ತು ಆತನ ಏಜೆಂಟನ ನಡುವಿನ ಸರಕುಗಳ ಪೂರೈಕೆಯ ಮೌಲ್ಯವು,–

(ಎ) ಪೂರೈಕೆ ಮಾಡಲಾದ ಸರಕುಗಳ ಮುಕ್ತ ಮಾರುಕಟ್ಟೆಯ ಮೌಲ್ಯವಾಗಿರತಕ್ಕದ್ದು ಅಥವಾ ಸರಕುಗಳನ್ನು ಹಾಗೆಯೇ ಮುಂದುವರೆದ ಪೂರೈಕೆಮಾಡಲು ಉದ್ದೇಶಿಸಿದ್ದಲ್ಲಿ, ಪೂರೈಕೆದಾರನ ಆಯ್ಕೆಯ ಅನ್ವಯ, ಸ್ವೀಕರಿಸುವವನಿಂದ ಸಂಬಂಧಿತ ವ್ಯಕ್ತಿಯಾಗಿರದ ತನ್ನ ಗ್ರಾಹಕನಿಗೆ ಅದೇ ತರಹದ ಮತ್ತು ಗುಣಮಟ್ಟದ ಸರಕುಗಳ ಪೂರೈಕೆಗಾಗಿ ವಿಧಿಸಿದ ಬೆಲೆಯ ಶೇಕಡಾ ತೊಂಬತ್ತರಷ್ಟಾಗಿರತಕ್ಕದ್ದು:

ದೃಷ್ಟಾಂತ: *ಒಬ್ಬ ಪ್ರಧಾನಕರ್ತನು ನೆಲಗಡಲೆಯನ್ನು ತನ್ನ ಏಜೆಂಟನಿಗೆ ಪೂರೈಕೆ ಮಾಡಿದ್ದು ಮತ್ತು ಆ ಏಜೆಂಟನು ಆ ಪೂರೈಕೆಯ ದಿನದಂದು, ತರುವಾಯದ ಪೂರೈಕೆಯಲ್ಲಿ ಅದೇ ತರಹದ ಮತ್ತು ಗುಣಮಟ್ಟದ ನೆಲಗಡಲೆಯನ್ನು ಪ್ರತಿ ಕ್ವಿಂಟಾಲ್‌ಗೆ ಐದು ಸಾವಿರ ರೂಪಾಯಿಗಳ ಬೆಲೆಯಲ್ಲಿ ಪೂರೈಕೆ ಮಾಡುತ್ತಿರುತ್ತಾನೆ. ಮತ್ತೊಬ್ಬ ಸ್ವತಂತ್ರನಾದ ಪೂರೈಕೆದಾರ ಸದರಿ ಏಜೆಂಟನಿಗೆ ಅದೇ ತರಹದ ಮತ್ತು ಗುಣಮಟ್ಟದ ನೆಲಗಡಲೆಯನ್ನು ಪ್ರತಿ ಕ್ವಿಂಟಾಲ್‌ಗೆ ನಾಲ್ಕು ಸಾವಿರದ ಐನೂರ ಐವತ್ತು ರೂಪಾಯಿಗಳ ಬೆಲೆಯಲ್ಲಿ ಪೂರೈಕೆ ಮಾಡುತ್ತಿರುತ್ತಾನೆ. ಪ್ರಧಾನಕರ್ತನಿಂದ ಮಾಡಿದ ಪೂರೈಕೆಯ ಮೌಲ್ಯವು ಪ್ರತಿ ಕ್ವಿಂಟಾಲ್‌ಗೆ ನಾಲ್ಕು ಸಾವಿರದ ಐನೂರ ಐವತ್ತು ರೂಪಾಯಿಗಳು ಆಗಿರತಕ್ಕದ್ದು ಅಥವಾ ಆತನು ಆಯ್ಕೆಯನ್ನು ಚಲಾಯಿಸಿದ್ದಲ್ಲಿ, ಆ ಮೌಲ್ಯವು ಐದು ಸಾವಿರ ರೂಪಾಯಿಗಳ ಶೇಕಡ 90%ರಷ್ಟಾದ ನಾಲ್ಕು ಸಾವಿರದ ಐನೂರು ರೂಪಾಯಿಗಳು ಪ್ರತಿ ಕ್ವಿಂಟಾಲ್‌ಗೆ ಆಗಿರತಕ್ಕದ್ದು.*

(ಬಿ) ಪೂರೈಕೆಯ ಮೌಲ್ಯವನ್ನು ಖಂಡ (ಎ)ನ ಅಡಿಯಲ್ಲಿ, ನಿರ್ಧರಿಸಲಾಗದಿದ್ದಲ್ಲಿ, ಅದನ್ನು ನಿಯಮ 30 ಅಥವಾ ನಿಯಮ 31ನ್ನು ಅದೇ ಕ್ರಮದಲ್ಲಿ ಅನ್ವಯಿಸಿ ನಿರ್ಧರಿಸತಕ್ಕದ್ದು;

30. ಬೆಲೆಯ ಆಧಾರದಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ.– ಈ ಹಿಂದಿನ ಯಾವುದೇ ನಿಯಮಗಳ ಮೂಲಕ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವನ್ನು ನಿರ್ಧರಿಸಲಾಗದಿದ್ದಲ್ಲಿ, ಮೌಲ್ಯವು, ಉತ್ಪಾದನೆ ಅಥವಾ ತಯಾರಿಕೆಯ ವೆಚ್ಚದ ಅಥವಾ ಅಂಥ ಸರಕುಗಳ ಆರ್ಜನಾ ವೆಚ್ಚದ ಅಥವಾ ಅಂಥ ಸೇವೆಗಳ ಒದಗಿಸುವಿಕೆಯ ವೆಚ್ಚದ ಶೇಕಡ ನೂರ ಹತ್ತರಷ್ಟಾಗಿರತಕ್ಕದ್ದು.

31. ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯ ನಿರ್ಧರಣೆಗಾಗಿ ಉಳಿಕೆವಿಧಾನ.– ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೌಲ್ಯವನ್ನು ನಿಯಮ 1 ರಿಂದ 4ರುಗಳ ಅಡಿಯಲ್ಲಿ ನಿರ್ಧರಿಸಲಾಗದಿದ್ದಲ್ಲಿ, ಅದನ್ನು, ಪ್ರಕರಣ 15 ಮತ್ತು ಈ ಅಧ್ಯಾಯದ ಉಪಬಂಧಗಳ ತತ್ವಗಳು ಮತ್ತು ಸಾಮಾನ್ಯ ಉಪಬಂಧಗಳೊಂದಿಗೆ ಸುಸಂಗತವಾಗಿರುವ ಯುಕ್ತವಾದ ಮಾರ್ಗಗಳನ್ನು ಉಪಯೋಗಿಸಿ ನಿರ್ಧರಿಸತಕ್ಕದ್ದು:

ಪರಂತು, ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆದಾರನು, ನಿಯಮ 30ನ್ನು ಗಣನೆಗೆ ತೆಗೆದುಕೊಳ್ಳದೆ ಈ ನಿಯಮವನ್ನು ಆಯ್ಕೆ ಮಾಡಿಕೊಳ್ಳಬಹುದು.

32. ಕೆಲವೊಂದು ಪೂರೈಕೆಗಳಿಗೆ ಸಂಬಂಧಿಸಿದಂತೆ ಮೌಲ್ಯದ ನಿರ್ಧರಣೆ.–(1) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕೆಳಗೆ ನಿರ್ದಿಷ್ಟಪಡಿಸಿದ ಪೂರೈಕೆಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು, ಪೂರೈಕೆದಾರನ ಆಯ್ಕೆಯ ಅನ್ವಯ, ಇನ್ನು ಮುಂದೆ ಒದಗಿಸಲಾದ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

(2) ಹಣ ಬದಲಾವಣೆಯನ್ನು ಒಳಗೊಂಡಂತೆ, ವಿದೇಶಿ ಕರೆನ್ಸಿಯ ಖರೀದಿ ಅಥವಾ ಮಾರಾಟಕ್ಕೆ ಸಂಬಂಧಿಸಿದ ಸೇವೆಗಳ ಪೂರೈಕೆಯ ಮೌಲ್ಯವನ್ನು, ಸೇವೆಯ ಪೂರೈಕೆದಾರನು ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು, ಅಂದರೆ:–

(ಎ) ಒಂದು ಕರೆನ್ಸಿಯು, ಭಾರತೀಯ ರೂಪಾಯಿಗಳಿಂದ ಅಥವಾ ರೂಪಾಯಿಗಳಿಗೆ ವಿನಿಮಯವಾದಾಗ, ಮೌಲ್ಯವು, ಅದರ ಕೊಳ್ಳುವ ದರ ಅಥವಾ ಸಂದರ್ಭಾನುಸಾರವಾಗಿ ಮಾರಾಟದ ದರ ಮತ್ತು ಆ ಸಮಯದಲ್ಲಿನ ಆ ಕರೆನ್ಸಿಯ ಭಾರತೀಯ ರಿಸರ್ವ್ ಬ್ಯಾಂಕಿನ ಉಲ್ಲೇಖಿದ ದರದ ವ್ಯತ್ಯಾಸವನ್ನು, ಕರೆನ್ಸಿಯ ಒಟ್ಟು ಘಟಕಗಳಿಂದ ಗುಣಿಸಿದ ಮೊತ್ತಕ್ಕೆ ಸಮನಾಗಿರತಕ್ಕದು:

ಪರಂತು, ಕರೆನ್ಸಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಉಲ್ಲೇಖ ದರವು ಲಭ್ಯವಿಲ್ಲದ ಸಂದರ್ಭದಲ್ಲಿ, ಮೌಲ್ಯವು, ಹಣವನ್ನು ಬದಲಾಯಿಸುವ ವ್ಯಕ್ತಿಯು ಒದಗಿಸಿದ ಅಥವಾ ಸ್ವೀಕರಿಸಿದ ಭಾರತೀಯ ರೂಪಾಯಿಗಳ ಒಟ್ಟು ಮೊತ್ತದ ಶೇಕಡ 1ರಷ್ಟಿರತಕ್ಕದ್ದು:

ಮತ್ತು ಪರಂತು, ವಿನಿಮಯವಾದ ಎರಡು ಕರೆನ್ಸಿಗಳಲ್ಲಿ ಯಾವುದೂ ಸಹ ಭಾರತೀಯ ರೂಪಾಯಿಯಾಗಿರದಿದ್ದಲಿ, ಮೌಲ್ಯವು, ಹಣವನ್ನು ಬದಲಾಯಿಸುವ ವ್ಯಕ್ತಿಯು, ಆ ಎರಡು ಕರೆನ್ಸಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ಒದಗಿಸಿದ ಉಲ್ಲೇಖಿದ ದರದಲ್ಲಿ ಆ ದಿನದಲ್ಲಿ ಭಾರತೀಯ ರೂಪಾಯಿಗೆ ವಿನಿಮಯ ಮಾಡಿದಾಗ ಸ್ವೀಕರಿಸಬಹುದಾದ ಎರಡು ಮೊತ್ತಗಳಲ್ಲಿ ಕಡಿಮೆಯಿರುವ ಮೊತ್ತದ ಶೇಕಡ 1ರಷ್ಟಕ್ಕೆ ಸಮನಾಗಿರತಕ್ಕದ್ದು.

ಅಲ್ಲದೇ ಪರಂತು, ಸೇವೆಗಳನ್ನು ಪೂರೈಕೆ ಮಾಡುವ ಒಬ್ಬ ವ್ಯಕ್ತಿಯು ಒಂದು ಹಣಕಾಸು ವರ್ಷಕ್ಕೆ ಖಂಡ (ಬಿ)ಯ ನಿಬಂಧನೆಗೆ ಅನುಸಾರವಾಗಿ ಮೌಲ್ಯವನ್ನು ನಿಶ್ಚಿತಪಡಿಸಿಕೊಳ್ಳುವ ಆಯ್ಕೆಯನ್ನು ಚಲಾಯಿಸಬಹುದು ಮತ್ತು ಅಂಥ ಆಯ್ಕೆಯನ್ನು ಆ ಹಣಕಾಸು ವರ್ಷದ ಉಳಿದ ಭಾಗದ ಅವಧಿಯಲ್ಲಿ ಹಿಂತೆಗೆದುಕೊಳ್ಳತಕ್ಕದ್ದಲ್ಲ.

(ಬಿ) ಸೇವೆಗಳ ಪೂರೈಕೆದಾರನ ಆಯ್ಕೆಯ ಅನ್ವಯ, ಹಣ ಬದಲಾವಣೆಯನ್ನು ಒಳಗೊಂಡಂತೆ, ವಿದೇಶಿ ಕರೆನ್ಸಿಯ ಪೂರೈಕೆಗೆ ಸಂಬಂಧಿಸಿದಂತೆ ಮೌಲ್ಯವನ್ನು, –

(i) ಇನ್ನೂರ ಐವತ್ತು ರೂಪಾಯಿಗಳ ಕನಿಷ್ಟ ಮೊತ್ತಕ್ಕೆ ಒಳಪಟ್ಟು, ಒಂದು ಲಕ್ಷ ರೂಪಾಯಿಗಳ ವರೆಗಿನ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಒಂದರಷ್ಟು;

(ii) ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನದಾದ ಮತ್ತು ಹತ್ತು ಲಕ್ಷ ರೂಪಾಯಿಗಳವರೆಗಿನ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಅರ್ಧದಷ್ಟು ಮತ್ತು ಒಂದು ಸಾವಿರ ರೂಪಾಯಿಗಳು; ಮತ್ತು

(iii) ಅರವತ್ತು ಸಾವಿರ ರೂಪಾಯಿಗಳ ಗರಿಷ್ಟ ಮೊತ್ತಕ್ಕೆ ಒಳಪಟ್ಟು, ಹತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನದಾದ ಒಂದು ಮೊತ್ತಕ್ಕೆ ವಿನಿಮಯವಾದ ಕರೆನ್ಸಿಯ ಒಟ್ಟು ಮೊತ್ತದ ಶೇಕಡ ಹತ್ತನೇ ಒಂದರಷ್ಟು ಮತ್ತು ಐದು ಸಾವಿರದ ಐದುನೂರು ರೂಪಾಯಿಗಳು,

–ಎಂದು ಪರಿಭಾವಿಸತಕ್ಕದ್ದು.

(3) ವಾಯುಯಾನಕ್ಕಾಗಿ ಟಿಕೆಟುಗಳನ್ನು ಬುಕ್ ಮಾಡುವುದಕ್ಕೆ ಸಂಬಂಧಿಸಿದಂತೆ ಒಬ್ಬ ವಾಯು ಯಾನದ ಏಜೆಂಟನಿಂದ ಒದಗಿಸಿದ ಸೇವೆಗಳ ಪೂರೈಕೆಯ ಮೌಲ್ಯವನ್ನು, ದೇಶೀಯ ಬುಕಿಂಗ್‌ಗಳ ಸಂದರ್ಭದಲ್ಲಿ ಮೂಲ ಪ್ರಯಾಣದರದ ಶೇಕಡ ಐದರ ದರದಲ್ಲಿ ಲೆಕ್ಕ ಹಾಕಲಾದ ಒಂದು ಮೊತ್ತವೆಂದು ಮತ್ತು ವಾಯುಯಾನದ ಮೂಲಕ ಪ್ರಯಾಣಕ್ಕಾಗಿ ಅಂತರರಾಷ್ಟ್ರೀಯ ಬುಕಿಂಗ್‌ಗಳ ಸಂದರ್ಭದಲ್ಲಿ ಮೂಲ ಪ್ರಯಾಣದರದ ಶೇಕಡ ಹತ್ತರದರದಲ್ಲಿ ಲೆಕ್ಕ ಹಾಕಲಾದ ಒಂದು ಮೊತ್ತವೆಂದು ಪರಿಭಾವಿಸತಕ್ಕದ್ದು.

ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ, ಪದಾವಳಿಯಾದ **"ಮೂಲ ಪ್ರಯಾಣದರ"** ಎಂದರೆ ವಾಯುಯಾನ ಸಂಸ್ಥೆಯು ವಾಯುಯಾನ ಏಜೆಂಟನಿಗೆ ಸಾಮಾನ್ಯವಾಗಿ ಯಾವುದರ ಮೇಲೆ ಕಮಿಷನ್‌ನನ್ನು ಸಂದಾಯ ಮಾಡುತ್ತದೆಯೋ, ಆ ವಾಯುಯಾನ ಪ್ರಯಾಣದರದ ಆ ಭಾಗ.

(4) ಜೀವ ವಿಮೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಸೇವೆಗಳ ಪೂರೈಕೆಯ ಮೌಲ್ಯವು,–

(ಎ) ಸೇವೆಗಳ ಪೂರೈಕೆಯ ಸಮಯದಲ್ಲಿ ಪಾಲಿಸಿದಾರನಿಗೆ, ಅಂಥ ಒಂದು ಮೊತ್ತವನ್ನು ತಿಳಿಸಿದ್ದರೆ, ಪಾಲಸಿದಾರನ ಪರವಾಗಿ ಹೂಡಿಕೆ ಅಥವಾ ಉಳಿತಾಯಕ್ಕೆ ಹಂಚಿಕೆ ಮಾಡಲಾದ ಮೊತ್ತದಿಂದಕಡಿತಗೊಳಿಸಿ, ಪಾಲಿಸಿದಾರನಿಗೆ ಹೊರಿಸಿದ ಒಟ್ಟು ವಿಮಾ ಕಂತಿನ ಮೊತ್ತ;

(ಬಿ) (ಎ)ನ್ನು ಹೊರತುಪಡಿಸಿದ, ವಾರ್ಷಿಕ ಏಕಕಂತಿನ ಪಾಲಿಸಿಗಳ ಸಂದರ್ಭಗಳಲ್ಲಿ, ಪಾಲಸಿದಾರನಿಗೆ ಹೊರಿಸಿದ ಮಾಡಿದ ಏಕಕಂತಿನ ಶೇಕಡ ಹತ್ತರಷ್ಟು; ಅಥವಾ

(ಸಿ) ಇತರೇ ಎಲ್ಲಾ ಸಂದರ್ಭಗಳಲ್ಲಿ, ಪ್ರಥಮ ವರ್ಷದಲ್ಲಿ ಪಾಲಿಸಿದಾರನಿಗೆ ಹೊರಿಸಿದವಿಮಾಕಂತಿನ ಶೇಕಡಾ ಇಪ್ಪತ್ತೈದರಷ್ಟು ಮತ್ತು ತರುವಾಯದ ವರ್ಷಗಳಲ್ಲಿ, ಪಾಲಿಸಿದಾರನಿಗೆ ವಿಧಿಸಿದ ವಿಮಾಕಂತಿನ ಶೇಕಡಾ ಹನ್ನೆರಡೂವರೆಯಷ್ಟು ಇರತಕ್ಕದ್ದು.

ಪರಂತು, ಪಾಲಸಿದಾರನು ಜೀವ ವಿಮೆಯಲ್ಲಿನ ಗಂಡಾಂತರ ರಕ್ಷಣೆಗಾಗಿ ಮಾತ್ರವೇ ವಿಮಾಕಂತನ್ನು ಸಂದಾಯ ಮಾಡಿದ್ದಲ್ಲಿ, ಈ ಉಪ ನಿಯಮದಲ್ಲಿರುವ ಯಾವುದೂ ಅನ್ವಯವಾಗತಕ್ಕದ್ದಲ್ಲ.

(5) ಇನ್ನೊಬ್ಬನು ಉಪಯೋಗಿಸಿದ ಸರಕುಗಳನ್ನು, ಅಂದರೆ ಅವು ಇರುವ ಹಾಗೆಯೇ ಅಥವಾ ಸರಕುಗಳ ಸ್ವರೂಪವನ್ನು ಬದಲಿಸದ ಅಂಥ ಸಣ್ಣ ಪ್ರಮಾಣದ ಸಂಸ್ಕರಣೆಯ ನಂತರ, ಉಪಯೋಗಿಸಿದ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರದಲ್ಲಿ ತೊಡಗಿರುವ ಒಬ್ಬ ವ್ಯಕ್ತಿಯು, ತೆರಿಗೆದಾಯಕ ಪೂರೈಕೆಯನ್ನು ಒದಗಿಸುತ್ತಿದ್ದಲ್ಲಿ ಮತ್ತು ಅಂಥ ಸರಕುಗಳ ಖರೀದಿಯ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಪಡೆದುಕೊಂಡಿರದಿದ್ದಲ್ಲಿ, ಪೂರೈಕೆಯ ಮೌಲ್ಯವು ಮಾರಾಟದ ಬೆಲೆ ಮತ್ತು ಖರೀದಿಯ ಬೆಲೆಯ ನಡುವಿನ ವ್ಯತ್ಯಾಸವಾಗಿರತಕ್ಕದ್ದು ಮತ್ತು ಅಂಥ ಪೂರೈಕೆಯ ಮೌಲ್ಯವು ಋಣಾತ್ಮಕವಾಗಿದ್ದಲ್ಲಿ, ಅದನ್ನು ಕಡೆಗಣಿಸತಕ್ಕದ್ದು:

ಪರಂತು, ಸಾಲ ಅಥವಾ ಋಣವನ್ನು ವಸೂಲಿ ಮಾಡುವ ಉದ್ದೇಶದಿಂದ ನೋಂದಾಯಿತನಲ್ಲದ ಒಬ್ಬ ತಪ್ಪಿತ ಸಾಲಗಾರನಿಂದ ಪುನರ್ ಸ್ವಾಧೀನಪಡಿಸಿಕೊಂಡ ಸರಕುಗಳ ಖರೀದಿಯ ಮೌಲ್ಯವು, ಖರೀದಿಯ ದಿನಾಂಕ ಮತ್ತು ಅಂಥ ಪುನರ್ ಸ್ವಾಧೀನಪಡಿಸಿಕೊಳ್ಳುವ ವ್ಯಕ್ತಿಯಿಂದ ವಿಲೇವಾರಿಗೊಳ್ಳುವ ದಿನಾಂಕದ ನಡುವಿನ ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ಶೇಕಡ ಐದು ಅಂಶಗಳಷ್ಟು ಇಳಿಕೆ ಮಾಡಿದ ತಪ್ಪಿತ ಸಾಲಗಾರನು ಖರೀದಿಸಿರುವ ಅಂಥ ಸರಕುಗಳ ಖರೀದಿ ಬೆಲೆ ಎಂದು ಪರಿಭಾವಿಸತಕ್ಕದ್ದು.

(6) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಪ್ರತಿಯಾಗಿ ವಾಪಸ್ಸು ಪಡೆಯಬಹುದಾದಂಥಹ ಒಂದು ಟೋಕನ್ ಅಥವಾ ಒಂದು ವೋಚರ್, ಅಥವಾ ಒಂದು ಕೂಪನ್, ಅಥವಾ ಒಂದು ಸ್ಟಾಂಪಿನ (ಅಂಚೆ ಸ್ಟಾಂಪನ್ನು ಹೊರತುಪಡಿಸಿದಂತೆ) ಮೌಲ್ಯವು, ಅಂಥ ಟೋಕನ್, ವೋಚರ್, ಕೂಪನ್, ಸ್ಟಾಂಪಿಗೆ ಪ್ರತಿಯಾಗಿ ವಿವಾಪಸ್ಸು ಪಡೆಯಬಹುದಾದಂಥಹ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹಣದ ಮೌಲ್ಯಕ್ಕೆ ಸಮನಾಗಿರತಕ್ಕದ್ದು.

(7) ಹೂಡುವಳಿ ತೆರಿಗೆ ಜಮೆ ಲಭ್ಯವಿದ್ದಲ್ಲಿ, ಪ್ರಕರಣ 25ರಲ್ಲಿ ಉಲ್ಲೇಖಿಸಿದಂತಹ ಭಿನ್ನ ವ್ಯಕ್ತಿಗಳ ನಡುವೆ, ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ ಅಂಥ ಸೇವೆ ಒದಗಿಸುವವರ ವರ್ಗದಿಂದ ಒದಗಿಸಿದ ಅನುಸೂಚಿ Iರ ಖಂಡಿಕೆ 2ರಲ್ಲಿ ಉಲ್ಲೇಖಿಸಲಾದ, ತೆರಿಗೆದಾಯಕ ಸೇವೆಯ ಮೌಲ್ಯವು ಶೂನ್ಯ ಎಂದು ಪರಿಭಾವಿಸತಕ್ಕದ್ದು.

33. ಶುದ್ಧ ಏಜೆಂಟನ ಸಂದರ್ಭದಲ್ಲಿ ಸೇವೆಗಳ ಪೂರೈಕೆಯ ಮೌಲ್ಯ.– ಈ ಅಧ್ಯಾಯದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಾಗಿ ಒಬ್ಬ ಪೂರೈಕೆದಾರನು ಭರಿಸಿದ ವೆಚ್ಚ ಅಥವಾ ಖರ್ಚುಗಳನ್ನು, ಕೆಳಕಂಡ ಎಲ್ಲಾ ಷರತ್ತುಗಳನ್ನು ಪೂರೈಸಿದ್ದರೆ ಪೂರೈಕೆಯ ಮೌಲ್ಯದಿಂದಬಿಟ್ಟು ಬಿಡತಕ್ಕದ್ದು, ಅಂದರೆ,–

(i) ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಕಾರ್ಯನಿರ್ವಹಿಸುತ್ತಿರುವ ಪೂರೈಕೆದಾರನು, ಅಂಥ ಸ್ವೀಕರಿಸುವವನ ಅಧಿಕಾರ ಪತ್ರದ ಮೇರೆಗೆ ಮೂರನೆ ವ್ಯಕ್ತಿಗೆ ಅವನು ಸಂದಾಯ ಮಾಡಿದಾಗ;

(ii) ಪೂರೈಕೆಯನ್ನು ಸ್ವೀಕರಿಸುವವನ ಪರವಾಗಿ ಶುದ್ಧ ಏಜೆಂಟನು ಮಾಡಿದ ಸಂದಾಯವನ್ನು, ಶುದ್ಧ ಏಜಂಟನು ಸೇವೆಯನ್ನು ಸ್ವೀಕರಿಸುವನಿಗೆ ನೀಡಿದ ಬೆಲೆಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೂಚಿಸಿರಬೇಕು; ಮತ್ತು

(iii) ಶುದ್ಧ ಏಜೆಂಟನು ಮೂರನೇ ವ್ಯಕ್ತಿಯಿಂದ ಪೂರೈಕೆಯನ್ನು ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಪಡೆದುಕೊಳ್ಳುವ ಪೂರೈಕೆಗಳು, ತನ್ನ ಖಾತೆಯಲ್ಲಿ ಆತನು ಪೂರೈಕೆ ಮಾಡುವ ಸೇವೆಗಳ ಜೊತೆಗೆ ಹೆಚ್ಚುವರಿಯಾಗಿರಬೇಕು.

ವಿವರಣೆ.– *ಈ ನಿಯಮದ ಉದ್ದೇಶಗಳಿಗಾಗಿ, "ಶುದ್ಧ ಏಜೆಂಟ್" ಎಂದರೆ,–*

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯ ಕ್ರಮದಲ್ಲಿ, ವೆಚ್ಚ ಅಥವಾ ಖರ್ಚುಗಳನ್ನು ಭರಿಸುವುದಕ್ಕಾಗಿ, ಶುದ್ಧ ಏಜೆಂಟನಾಗಿ ಕಾರ್ಯ ನಿರ್ವಹಿಸಲು ಪೂರೈಕೆಯನ್ನು ಸ್ವೀಕರಿಸುವವನ ಜೊತೆಯಲ್ಲಿ ಕರಾರಿನ ಒಪ್ಪಂದಕ್ಕೆ ಒಳಗಾಗುವ;

(ಬಿ) ಪೂರೈಕೆಯ ಸ್ವೀಕರಿಸುವವನ ಶುದ್ಧ ಏಜೆಂಟನಂತೆ ಪಡೆದುಕೊಂಡ ಅಥವಾ ಪೂರೈಕೆ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಯಾವುದೇ ಸ್ವಾಮ್ಯವನ್ನು ಹೊಂದಲು ಇಚ್ಚಿಸದ ಅಥವಾ ಹೊಂದಿರದ;

(ಸಿ) ಹಾಗೆ ಪಡೆದುಕೊಂಡ ಅಂಥ ಸರಕು ಅಥವಾ ಸೇವೆಗಳನ್ನು ತನ್ನ ಸ್ವಂತ ಹಿತಾಸಕ್ತಿಗೆ ಉಪಯೋಗಿಸಿಕೊಳ್ಳದ; ಮತ್ತು

(ಡಿ) ತನ್ನ ಸ್ವಂತ ಖಾತೆಯಲ್ಲಿ ಅವನು ಒದಗಿಸುವ ಪೂರೈಕೆಗಾಗಿ ಸ್ವೀಕರಿಸುವ ಮೊತ್ತಕ್ಕೆ ಹೆಚ್ಚುವರಿಯಾಗಿ, ಅಂಥ ಸರಕು ಅಥವಾ ಸೇವೆಗಳನ್ನು ಪಡೆದುಕೊಳ್ಳಲು ಭರಿಸಿದ ವಾಸ್ತವಿಕ ಮೊತ್ತವನ್ನು ಮಾತ್ರ ಸ್ವೀಕರಿಸುವ,

–ಒಬ್ಬ ವ್ಯಕ್ತಿ.

ದೃಷ್ಟಾಂತ.– ಕಾರ್ಪೊರೇಟ್ ಸೇವೆಗಳ ಪಾಲುದಾರಿಕಾ ಸಂಸ್ಥೆಯಾದ ಎ ಯು, ಬಿ ಕಂಪನಿಯ ನಿಗಮನಕ್ಕೆ ಸಂಬಂಧಿಸಿದ ಕಾನೂನು ಕಾರ್ಯವನ್ನು ನಿರ್ವಹಿಸುವುದರಲ್ಲಿ ತೊಡಿಗಿಕೊಂಡಿರುತ್ತದೆ. ಅದರ ಸೇವಾ ಶುಲ್ಕಗಳನ್ನು ಹೊರತು ಪಡಿಸಿ, ಎ ಯು ಕಂಪನಿಯ ಹೆಸರಿಗಾಗಿ ಕಂಪನಿಗಳ ರಿಜಿಸ್ಟ್ರಾರ್‌ಗೆ ಸಂದಾಯ ಮಾಡಿದ ನೋಂದಣಿ ಶುಲ್ಕ ಮತ್ತು ಅನುಮೋದನಾ ಶುಲ್ಕವನ್ನು ಸಹ ಬಿ ಯಿಂದ ವಸೂಲಿ ಮಾಡುತ್ತದೆ. ಕಂಪನಿಗಳ ರಿಜಿಸ್ಟ್ರಾರ್‌ರಿಂದ ಚಾರ್ಜು ಮಾಡಿದ, ಹೆಸರಿನ ನೋಂದಣಿ ಮತ್ತು ಅನುಮೋದನೆಯ ಶುಲ್ಕವು ಬಿ ಯ ಮೇಲಿನ ಕಡ್ಡಾಯ ವಿಧಿಸುವಿಕೆಯಾಗಿದೆ. ಆ ಶುಲ್ಕಗಳನ್ನು ಸಂದಾಯ ಮಾಡುವಲ್ಲಿ ಎ ಯು ಕೇವಲ ಒಬ್ಬ ಶುದ್ಧ ಏಜಂಟನಂತೆ ಕಾರ್ಯನಿರ್ವಹಿಸಿದೆ. ಆದ್ದರಿಂದ, ಎ ಯ ವಸೂಲಿಯಅಂಥ ವೆಚ್ಚಗಳ ಒಂದು ಬಟವಾಡೆಯಾಗಿದೆ ಮತ್ತು ಎ ಯಿಂದ ಬಿಗೆ ಮಾಡಿದ ಪೂರೈಕೆಯ ಮೌಲ್ಯದ ಭಾಗವಲ್ಲ.

[10][**34. ಮೌಲ್ಯದ ನಿರ್ಧರಣೆಗಾಗಿ ಭಾರತೀಯ ರೂಪಾಯಿಗಳನ್ನು ಹೊರತುಪಡಿಸಿದ ಕರೆನ್ಸಿಯ ವಿನಿಮಯ ದರ.**– (1)ತೆರಿಗೆದಾಯಕ ಸರಕುಗಳ ಮೌಲ್ಯದ ನಿರ್ಧರಣೆಗಾಗಿ ವಿನಿಮಯ ದರವು, ಪ್ರಕರಣ 12ರ ನಿಬಂಧನೆಗಳಿಗೆ ಅನುಸಾರವಾಗಿ ಅಂಥ ಸರಕುಗಳ ಪೂರೈಕೆಯ ಸಮಯದ ದಿನಾಂಕಕ್ಕಾಗಿ ಸೀಮಾಸುಂಕಗಳ ಅಧಿನಿಯಮ 1962ರ ಪ್ರಕರಣ 14ರ ಅಡಿಯಲ್ಲಿ ಮಂಡಳಿಯಿಂದ ಅಧಿಸೂಚಿಸಿದ ಅನ್ವಯವಾಗುವ ವಿನಿಮಯ ದರವಾಗಿರತಕ್ಕದ್ದು.

(2) ತೆರಿಗೆದಾಯಕ ಸೇವೆಗಳ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿನ ವಿನಿಮಯ ದರವು, ಪ್ರಕರಣ 13ರ ನಿಬಂಧನೆಗಳನುಸಾರ ಅಂಥ ಸೇವೆಗಳ ಪೂರೈಕೆಯ ಸಮಯದ ದಿನಾಂಕಕ್ಕಾಗಿ, ಸಾಮಾನ್ಯವಾಗಿ ಸ್ವೀಕೃತವಾದ ಲೆಕ್ಕದ ತತ್ವಗಳ ಪ್ರಕಾರ ನಿರ್ಧರಿಸಿದ ಅನ್ವಯವಾಗುವ ವಿನಿಮಯ ದರವಾಗಿರತಕ್ಕದ್ದು.]

35.ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆಯನ್ನು ಒಳಗೊಂಡ ಪೂರೈಕೆಯ ಮೌಲ್ಯ.– ಪೂರೈಕೆಯ ಮೌಲ್ಯವು, ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆಯನ್ನು ಒಳಗೊಂಡಿದ್ದಲ್ಲಿ, ತೆರಿಗೆಯ ಮೊತ್ತವನ್ನು ಕೆಳಕಂಡ ವಿಧಾನದಲ್ಲಿ ನಿರ್ಧರಿಸತಕ್ಕದ್ದು.

---

(ii) ಪ್ರಾಧಿಕೃತ ಬ್ಯಾಂಕುಗಳ ಮೂಲಕ ಕ್ರೆಡಿಟ್‌ಕಾರ್ಡ್ ಅಥವಾ ಡೆಬಿಟ್‌ಕಾರ್ಡ್;

(iii) ಯಾವುದೇ ಬ್ಯಾಂಕಿನಿಂದ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್) ಅಥವಾ ನೈಜ ಸಮಯದಲ್ಲಿ ಒಟ್ಟು ಇತ್ಯರ್ಥ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ಅಥವಾ

(iv) ಪ್ರತಿ ತೆರಿಗೆ ಅವಧಿಗೆ ಪ್ರತಿಚಲನ್‌ಗೆ ಹತ್ತು ಸಾವಿರ ರೂಪಾಯಿವರೆಗಿನ ಠೇವಣಿಗಾಗಿ, ನಗದು, ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ನ ಮೂಲಕ ಪ್ರಾಧಿಕೃತ ಬ್ಯಾಂಕುಗಳ ಮೂಲಕ ಕೌಂಟರ್ ಮೇಲಿನ ಸಂದಾಯ:

ಪರಂತು, ಕೌಂಟರ್ ಮೇಲಿನ ಸಂದಾಯ ಸಂದರ್ಭದಲ್ಲಿ ಪ್ರತಿ ಚಲನ್‌ಗೆ ಹತ್ತು ಸಾವಿರ ರೂಪಾಯಿಗಳ ಠೇವಣಿಯ ನಿರ್ಬಂಧವು ಕೆಳಕಂಡವರು ಮಾಡುವ ಠೇವಣಿಗಳಿಗೆ ಅನ್ವಯಿಸತಕ್ಕದಲ್ಲ–

(ಎ)ಸರ್ಕಾರಿ ಇಲಾಖೆಗಳು ಅಥವಾ ಆಯುಕ್ತರಿಂದ ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಯಾವುದೇ ವ್ಯಕ್ತಿಗಳಿಂದ ಮಾಡಬೇಕಾದ ಯಾವುದೇ ಇತರ ಠೇವಣಿಗಳು;

(ಬಿ) ಯುಕ್ತ ಅಧಿಕಾರಿ ಅಥವಾ ನೋಂದಣಿಯಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ವ್ಯಕ್ತಿಯಿಂದಸಂದಾಯವಾಗೆ ಉಳಿದಿರುವ ಬಾಕಿಯನ್ನು, ಜಪ್ತಿ ಅಥವಾ ಚರಾಸ್ತಿ ಅಥವಾ ಚಿರಾಸ್ತಿಯ ಮಾರಾಟದ ಮೂಲಕ ವಸೂಲಿ ಮಾಡುವುದನ್ನು ಒಳಗೊಂಡಂತೆ, ವಸೂಲಿ ಮಾಡಲು ಪ್ರಾಧಿಕೃತನಾದ ಯಾವುದೇ ಇತರ ಅಧಿಕಾರಿ;

(ಸಿ) ಯುಕ್ತ ಅಧಿಕಾರಿ ಅಥವಾ ಯಾವುದೇ ತನಿಖೆ ಅಥವಾ ಜಾರಿ ಚಟುವಟಿಕೆ ಅಥವಾ ಮುಂಗಡ ಠೇವಣಿಯ ಸಂದರ್ಭದಲ್ಲಿ ನಗದು, ಚೆಕ್ ಅಥವಾ ಡಿಮ್ಯಾಂಡ್‌ಡ್ರಾಫ್ಟ್ ರೂಪದಲ್ಲಿ ಮೊತ್ತಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರಾಧಿಕರಣವನ್ನು ಪಡೆದಿರುವ ಯಾವುದೇ ಇತರೇ ಅಧಿಕಾರಿ;

[29][ಮತ್ತು ಪರಂತು, ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ವಿಕೇಂದ್ರೀಕೃತ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ತೆರಿಗೆದಾಯಕನಲ್ಲದ ಆನ್‌ಲೈನ್ ಸ್ವೀಕರಿಸುವವನಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯು, ವಿಶ್ವವ್ಯಾಪಿ ಅಂತರಬ್ಯಾಂಕು ಹಣಕಾಸು ದೂರಸಂಪರ್ಕ ಸಂದಾಯ ಜಾಲಕ್ಕಾಗಿ ಸೊಸೈಟಿಯ ಮೂಲಕ ಅಂತರರಾಷ್ಟ್ರೀಯ ಹಣ ವರ್ಗಾವಣೆಯ ಮೂಲಕವು ಸಹ, ಮಂಡಳಿಯು ಅಧಿಸೂಚಿಸಬೇಕಿರುವ ದಿನಾಂಕದಿಂದ ಉಪನಿಯಮ (2)ರ ಅಡಿಯಲ್ಲಿ ಠೇವಣಿಯನ್ನು ಮಾಡಬಹುದು.]

ವಿವರಣೆ:– ಈ ಉಪನಿಯಮದ ಉದ್ದೇಶಗಳಿಗಾಗಿ, ಚಲನ್‌ನಲ್ಲಿ ಸೂಚಿಸಲಾದ ಯಾವುದೇ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ, ಅಂಥ ಸಂದಾಯಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಕಮಿಷನ್ ಯಾವುದಾದರು ಇದ್ದರೆ, ಅಂಥ ಸಂದಾಯವನ್ನು ಮಾಡುವ ವ್ಯಕ್ತಿಯಿಂದ ಅದನ್ನು ಭರಿಸತಕ್ಕದ್ದು ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(4) ಅಧಿನಿಯಮದ ಅಡಿಯಲ್ಲಿ ನೊಂದಾಯಿತನಾಗಿಲ್ಲದಿರುವ ವ್ಯಕ್ತಿಯಿಂದ ಮಾಡುವುದು ಅಗತ್ಯವಿರುವ ಯಾವುದೇ ಸಂದಾಯವನ್ನು, ಸಾಮಾನ್ಯ ಪೋರ್ಟಲ್ ಮೂಲಕ ಸೃಷ್ಟಿಸಲಾದ ತಾತ್ಕಾಲಿಕ ಗುರುತಿನ ಸಂಖ್ಯೆಯ ಆಧಾರದ ಮೇಲೆ ಮಾಡತಕ್ಕದ್ದು.

(5) ಯಾವುದೇ ಬ್ಯಾಂಕಿನಿಂದ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್) ಅಥವಾ ನೈಜ ಸಮಯದಲ್ಲಿ ಒಟ್ಟು ಇತ್ಯರ್ಥ (ರಿಯಲ್ ಟೈಮ್ ಗ್ರಾಸ್ ಸೆಟ್ಲ್‌ಮೆಂಟ್) ರೂಪದಲ್ಲಿ ಸಂದಾಯ ಮಾಡಿದ್ದಲ್ಲಿ, ಆಜ್ಞಾಪನಾ ನಮೂನೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಚಲನ್‌ನೊಂದಿಗೆ ಸೃಷ್ಟಿಸತಕ್ಕದ್ದು ಮತ್ತು ಅದನ್ನು ಸಂದಾಯವನ್ನು ಎಲ್ಲಿ ಮಾಡಲಾಗಿರುತ್ತದೆಯೋ ಆ ಬ್ಯಾಂಕಿಗೆ ಸಲ್ಲಿಸತಕ್ಕದ್ದು:

---

[28]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಸಿ/2017) ದಿನಾಂಕ 29–08–2017ರ ಮೂಲಕ ಪರಂತುಕಗಳನ್ನು ಸೇರಿಸಲಾಗಿದೆ.

[29]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಸಿ/2017) ದಿನಾಂಕ 29–08–2017ರ ಮೂಲಕ ಎರಡನೇ ಪರಂತುಕವನ್ನು ಪ್ರತಿಯೋಜಿಸಲಾಗಿದೆ.

ಪರಂತು, ಆಜ್ಞಾಪನಾ ನಮೂನೆಯು ಚಲನನ್ನು ಸೃಷ್ಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಂದು ಅವಧಿಯವರೆಗೆ ಸಿಂಧುವಾಗಿರುತಕ್ಕದ್ದು.

(6) ಪ್ರಾಧಿಕೃತ ಬ್ಯಾಂಕಿನಲ್ಲಿ ನಿರ್ವಹಿಸಲಾಗಿರುವ ಸಂಬಂಧಿತ ಸರ್ಕಾರಿ ಖಾತೆಗೆ ಮೊತ್ತವು ಯಶಸ್ವಿಯಾಗಿ ಜಮೆಗೊಂಡ ಮೇಲೆ, ಸಂಗ್ರಹಣಾ ಬ್ಯಾಂಕಿನಿಂದ ಒಂದು ಚಲನ್ ಗುರುತಿನ ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು ಮತ್ತು ಅದನ್ನು ಚಲನ್‌ನಲ್ಲಿ ಸೂಚಿಸತಕ್ಕದ್ದು.

(7) ಸಂಗ್ರಹಣಾ ಬ್ಯಾಂಕಿನಿಂದ ಒಂದು ಚಲನ್ ಗುರುತಿನ ಸಂಖ್ಯೆಯನ್ನು ಸ್ವೀಕರಿಸಿದ ಮೇಲೆ, ಸದರಿ ಮೊತ್ತವನ್ನು, ಯಾರ ಪರವಾಗಿ ಠೇವಣಿಯನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ವಿದ್ಯುನ್ಮಾನ ನಗದು ಖಾತೆಗೆ ಜಮ ಮಾಡತಕ್ಕದ್ದು ಮತ್ತು ಇದರ ಪರಿಣಾಮವಾಗಿ ಸಾಮಾನ್ಯ ಪೋರ್ಟಲ್ ಒಂದು ರಶೀದಿಯನ್ನು ಲಭ್ಯವಾಗುವಂತೆ ಮಾಡತಕ್ಕದ್ದು.

(8)ಸಂಬಂಧಪಟ್ಟ ವ್ಯಕ್ತಿಯ ಬ್ಯಾಂಕ್ ಖಾತೆ ಅಥವಾ ಆತನ ಪರವಾಗಿ ಠೇವಣಿ ಮಾಡುವ ವ್ಯಕ್ತಿಯ ಠೇವಣಿಗೆ ಖರ್ಚುಹಾಕಲಾಗಿದ್ದು ಆದರೆ ಚಲನ್ ಗುರುತಿನ ಸಂಖ್ಯೆ ಸೃಷ್ಟಿಯಾಗದಿದ್ದಲ್ಲಿ ಅಥವಾ ಸೃಷ್ಟಿಯಾಗಿದ್ದೂ, ಸಾಮಾನ್ಯ ಪೋರ್ಟಲ್‌ನಲ್ಲಿ ತಿಳಿಸಲಾಗದಿದ್ದಲ್ಲಿ, ಸದರಿ ವ್ಯಕ್ತಿಯು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–07**ರಲ್ಲಿ ಬ್ಯಾಂಕಿಗೆ ಅಥವಾ ಠೇವಣಿಯನ್ನು ಪ್ರಾರಂಭಿಸಿದ ವಿದ್ಯುನ್ಮಾನ ಗೇಟ್‌ವೇ ಮೂಲಕ ನಿವೇದಿಸಬಹುದು.

(9)ಪ್ರಕರಣ 51ರ ಅಡಿಯಲ್ಲಿಮುರುಗಡೆಗೊಳಿಸಲಾದ ಅಥವಾ ಪ್ರಕರಣ 52ರ ಅಡಿಯಲ್ಲಿ ಸಂಗ್ರಹಿಸಲಾದ ಮತ್ತು ತೆರಿಗೆದಾಯಕ ವ್ಯಕ್ತಿಯಿಂದ ಸದರಿ ಮೊತ್ತವನ್ನು ಮುರುಗಡೆಗೊಳಿಸಿದವನಿಂದ ಅಥವಾ ಸಂದರ್ಭಾನುಸಾರವಾಗಿ ಸಂಗ್ರಹಿಸಿದವರಿಂದ ನಮೂನೆ ಜಿಎಸ್‌ಟಿಆರ್–02ರಲ್ಲಿ ಕ್ಲೇಮು ಮಾಡಲಾದ ಯಾವುದೇ ಮೊತ್ತವನ್ನು ನಿಯಮ 87ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಗೆ ಜಮೆ ಮಾಡತಕ್ಕದ್ದು.

(10)ಒಬ್ಬ ವ್ಯಕ್ತಿಯವಿದ್ಯಾನ್ಮಾನ ನಗದು ಖಾತೆಯಿಂದ, ಯಾವುದೇ ಮೊತ್ತದ ಮರುಪಾವತಿಯನ್ನು ಕ್ಲೇಮ್ ಮಾಡಿದ್ದಲ್ಲಿ, ಸದರಿ ಮೊತ್ತವನ್ನು ವಿದ್ಯುನ್ಮಾನ ನಗದು ಖಾತೆಯಲ್ಲಿ ಖರ್ಚುಹಾಕತಕ್ಕದ್ದು.

(11) ಹಾಗೆ ಸಲ್ಲಿಸಿದ ಮರುಪಾವತಿ, ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ, ತಿರಸ್ಕೃತಗೊಂಡರೆ, ಉಪನಿಯಮ (10)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು, ತಿರಸ್ಕೃತವಾದುದಷ್ಟರ ಮಟ್ಟಿಗೆ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಪಿಎಂಟಿ–03**ರಲ್ಲಿನ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(12) ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ವಿದ್ಯುನ್ಮಾನ ನಗದು ಖಾತೆಯಲ್ಲಿ ಯಾವುದೇ ನ್ಯೂನ್ಯತೆಗಳನ್ನು ಗಮನಿಸಿದ ತರುವಾಯ, ಅದನ್ನು ಈ ವಿಷಯದಲ್ಲಿನ ಅಸ್ತಿತ್ವದಲ್ಲಿರುವ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ, ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಪಿಎಂಟಿ–04**ರಲ್ಲಿ ತಿಳಿಸತಕ್ಕದ್ದು.

ವಿವರಣೆ 1.– ಅಪೀಲು ಅಂತಿಮವಾಗಿ ತಿರಸ್ಕೃತವಾದರೆ ಮರುಪಾವತಿಯು ತಿರಸ್ಕೃತವಾಗಿದೆ ಪರಿಭಾವಿಸತಕ್ಕದ್ದು.

ವಿವರಣೆ 2.– ಈ ನಿಯಮದ ಉದ್ದೇಶಕ್ಕಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು, ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

88. ಪ್ರತಿಯೊಂದು ವ್ಯವಹಾರಕ್ಕಾಗಿ ಗುರುತಿನ ಸಂಖ್ಯೆ.– (1)ವಿದ್ಯುನ್ಮಾನ ನಗದು ಅಥವಾ ಜಮೆಖಾತೆಯಿಂದ ಪ್ರತಿ ಖರ್ಚು ಅಥವಾ ಸಂದರ್ಭಾನುಸಾರವಾಗಿ ಜಮೆಗಾಗಿ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು.

(2)ಯಾವುದೇ ಬಾಧ್ಯತೆಯ ವಿಮೋಚನೆಗೆ ಸಂಬಂಧಿಸಿದ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸಂಬಂಧಿಸಿದ ವಿದ್ಯುನ್ಮಾನ ಬಾಧ್ಯತೆ ರಿಜಿಸ್ಟರ್‌ನಲ್ಲಿ ಸೂಚಿಸತಕ್ಕದ್ದು.

(3)ಉಪ–ನಿಯಮ (2)ರಡಿಯಲ್ಲಿರುವುಗಳನ್ನು ಹೊರತುಪಡಿಸಿದ ಇತರೇ ಕಾರಣಗಳಿಗಾಗಿ ವಿದ್ಯುನ್ಮಾನ ಬಾಧ್ಯತೆಯಲ್ಲಿನ ಪ್ರತಿ ಜಮೆಗಾಗಿ ಸಾಮಾನ್ಯ ಪೋರ್ಟಲ್‌ನಲ್ಲಿ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಜನರೇಟ್ ಸೃಷ್ಟಿಸತಕ್ಕದ್ದು.

ಅಧ್ಯಾಯ – X
ಮರುಪಾವತಿ

89. ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಗಾಗಿ ಅರ್ಜಿ.– (1)ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಹೊರತುಪಡಿಸಿದಂತೆ, ಆತನಿಂದ ಸಂದಾಯವಾದ ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಯನ್ನು ಕ್ಲೇಮು ಮಾಡುವ ಪ್ರಕರಣ 55ರ ಅಡಿಯಲ್ಲಿ ನೀಡಲಾದ ಅಧಿಸೂಚನೆಯಿಂದ ವ್ಯಾಪ್ತವಾಗುವ ವ್ಯಕ್ತಿಗಳನ್ನು ಹೊರತು ಪಡಿಸಿದ ಯಾವೊಬ್ಬ ವ್ಯಕ್ತಿಯು, ಒಂದು ಅರ್ಜಿಯನ್ನು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ರಲ್ಲಿ ಸಾಮಾನ್ಯ

ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಉಳಿಕೆಗೆ ಸಂಬಂಧಿಸಿದ ಮರುಪಾವತಿಯ ಯಾವುದೇ ಕ್ಲೇಮನ್ನು, ಸಂಬಂಧಿಸಿದ ತೆರಿಗೆ ಅವಧಿಗಾಗಿ, **ನಮೂನೆ ಜಿಎಸ್‌ಟಿಆರ್–3** ಅಥವಾ **ನಮೂನೆ ಜಿಎಸ್‌ಟಿಆರ್–4 ಅಥವಾ** ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–7**ರಲ್ಲಿಒದಗಿಸಿದ ರಿಟರ್ನಿನ ಮೂಲಕ ಮಾಡತಕ್ಕದ್ದು:

ಮತ್ತು ಪರಂತು, ವಿಶೇಷ ಆರ್ಥಿಕ ವಲಯ ಘಟಕ ಅಥವಾ ಒಂದು ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಸಂಬಂಧಿಸಿದಂತೆ, ಮರುಪಾವತಿಗಾಗಿ ಅರ್ಜಿಯನ್ನು ಕೆಳಕಂಡವರು ಸಲ್ಲಿಸತಕ್ಕದ್ದು–

(ಎ) ವಲಯದ ನಿರ್ಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ವಿಶೇಷ ಆರ್ಥಿಕ ವಲಯದಲ್ಲಿ ಅಂಥ ಸರಕುಗಳು ಪೂರ್ಣವಾಗಿ ಅಂಗೀಕಾರವಾದ ನಂತರ ಸರಕುಗಳ ಪೂರೈಕೆದಾರ;

(ಬಿ) ವಲಯದ ನಿರ್ಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ಸೇವೆಗಳ ಸ್ವೀಕೃತಿಗೆ ಸಂಬಂಧಿಸಿದ ಅಂಥ ಪುರಾವೆಗಳ ಜೊತೆಯಲ್ಲಿ ಸೇವೆಗಳ ಪೂರೈಕೆದಾರ

[30][ಅಲ್ಲದೆ ಪರಂತು, ಪರಿಭಾವಿತ ರಫ್ತುಗಳು ಎಂದು ಗಣನೆಗೆ ತೆಗೆದುಕೊಳ್ಳಲಾದ ಪೂರೈಕೆಗಳಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಕೆಳಕಂಡವರುಗಳು ಸಲ್ಲಿಸಬಹುದು,–

(ಎ) ಪರಿಭಾವಿತ ರಫ್ತಿನ ಪೂರೈಕೆಗಳನ್ನು ಸ್ವೀಕರಿಸುವವನು;

(ಬಿ) ಸ್ವೀಕರಿಸುವವನು ಅಂಥ ಪೂರೈಕೆಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿರದಿದ್ದಲ್ಲಿ ಮತ್ತು ಅದಕ್ಕಾಗಿ ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಬಹುದು ಎಂದು ಒಂದು ವಾಗ್ದಾನ ಪತ್ರವನ್ನು ನೀಡಿರುವ ಸಂದರ್ಭದಲ್ಲಿ ಪರಿಭಾವಿತ ರಫ್ತಿನ ಪೂರೈಕೆಗಳ ಪೂರೈಕೆದಾರ;]

ಅಲ್ಲದೆ ಪರಂತು, , ನೊಂದಣಿಯ ಸಮಯದಲ್ಲಿ ಪ್ರಕರಣ 27ರ ಅಡಿಯಲ್ಲಿ ಆತನಿಂದ ಠೇವಣಿಯಿಟ್ಟ ಮುಂಗಡ ತೆರಿಗೆಯಲ್ಲಿ, ಅರ್ಜಿದಾರನಿಂದ ಸಂದಾಯ ಮಾಡಬೇಕಾದ ತೆರಿಗೆಯನ್ನು ಹೊಂದಿಸಿದ ನಂತರದ ಯಾವುದೇ ಮೊತ್ತದ ಮರುಪಾವತಿಯನ್ನು, ಆತನಿಂದ ಒದಗಿಸುವುದು ಅಗತ್ಯವಿರುವ ಕೊನೆಯ ರಿಟರ್ನಿನಲ್ಲಿ ಕ್ಲೇಮು ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿನ ಅರ್ಜಿಯು, ಅರ್ಜಿದಾರನಿಗೆ ಮರುಪಾವತಿಯು ಬಾಕಿಯಿದೆ ಎಂದು ಸಂಸ್ಥಾಪಿಸಲು, ಅನ್ವಯವಾಗುವಂತೆ, ಕೆಳಕಂಡ ಯಾವುದಾದರೊಂದು ದಸ್ತಾವೇಜುಗಳ ಪುರಾವೆಗಳೊಂದಿಗೆ ಜೊತೆಗೂಡಿರತಕ್ಕದ್ದು:–

(ಎ) ಆದೇಶದ ಉಲ್ಲೇಖ ಸಂಖ್ಯೆ ಮತ್ತು ಅಂಥ ಮರುಪಾವತಿಗೆ ಕಾರಣವಾಗುವ ಯುಕ್ತ ಅಧಿಕಾರಿಯಿಂದ ಅಥವಾ ಒಂದು ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ಹೊರಡಿಸಿದ ಆದೇಶದ ಒಂದು ಪ್ರತಿ ಅಥವಾ ಪ್ರಕರಣ 107ರ ಉಪಪ್ರಕರಣ (6)ರಲ್ಲಿ ಅಥವಾ ಪ್ರಕರಣ 112ರ ಉಪಪ್ರಕರಣ (8)ರಲ್ಲಿ ನಿರ್ದಿಷ್ಟಪಡಿಸಿರುವ ಮರುಪಾವತಿಯಾಗಿ ಕ್ಲೇಮುಮಾಡಿರುವ ಸಂದಾಯದ ಉಲ್ಲೇಖ ಸಂಖ್ಯೆ;

(ಬಿ) ಶಿಪ್ಪಿಂಗ್ ಬಿಲ್ಲುಗಳ ಅಥವಾ ರಫ್ತುವಿನ ಬಿಲ್ಲುಗಳ ಸಂಖ್ಯೆ ಮತ್ತು ದಿನಾಂಕ ಮತ್ತು ಸರಕುಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಸಿ) ಬೆಲೆಪಟ್ಟಿಗಳ ಮತ್ತು ಸೇವೆಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ಬ್ಯಾಂಕಿನ ರಿಯಲೈಸೇಷನ್ ಪ್ರಮಾಣಪತ್ರಗಳು ಅಥವಾ ಸಂದರ್ಭಾನುಸಾರವಾಗಿ ವಿದೇಶಿ ಒಳಮುಖ ಹಣರವಾನೆ ಪ್ರಮಾಣಪತ್ರಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಡಿ) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆಯೊಂದಿಗೆ ನಿಯಮ 46ರಲ್ಲಿ ಉಪಬಂಧಿಸಿದಂತೆ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಇ) ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆ ಮತ್ತು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ವಿಶೇಷ ಆರ್ಥಿಕ ವಲಯ ಅಧಿನಿಯಮ, 2005ರ ಅಡಿಯಲ್ಲಿ ಪರಿಭಾಷಿಸಿದಂತಹ ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ, ಪೂರೈಕೆದಾರನಿಗೆ ಸ್ವೀಕರಿಸುವವನಿಂದ ಮಾಡಲಾದ, ಅವುಗಳ ಪುರಾವೆ ಜೊತೆಯಲ್ಲಿನ, ಸಂದಾಯದ ವಿವರಗಳನ್ನು ಒಳಗೊಂಡಿರುವ ಒಂದು ವಿವರಪತ್ರ;

(ಎಫ್) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕು ಅಥವ

[30]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಹೆಚ್/2017) ದಿನಾಂಕ 09–11–2017ರ ಮೂಲಕ ಮೂರನೇ ಪರಂತುಕವನ್ನು ಪ್ರತಿಯೋಜಿಸಲಾಗಿದೆ.

ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಸರಕು ಅಥವ ಸೇವೆಗಳ ಪೂರೈಕೆದಾರನಿಂದ ಸಂದಾಯ ಮಾಡಿದ ತೆರಿಗೆಯ ಹೂಡುವಳಿ ತೆರಿಗೆ ಜಮೆಯನ್ನು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್ ಉಪಯೋಗಿಸಿಲ್ಲ ಎನ್ನುವ ಒಂದು ಘೋಷಣಾ ಪತ್ರ;

(ಜಿ) ಪರಭಾವಿತ ರಫ್ತುಗಳ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಈ ಸಂಗಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಇತರೇ ಪುರಾವೆಯ ಜೊತೆಗಿನ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಹೆಚ್) ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿದ್ದಲ್ಲಿ, ಪ್ರಕರಣ 54ರ ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಕ್ಲೇಮು ಸಂಬಂಧಿಸಿರುವ ಸಂದರ್ಭದಲ್ಲಿ, ಒಂದು ತೆರಿಗೆ ಅವಧಿಯಲ್ಲಿ ಸ್ವೀಕರಿಸಿದ ಮತ್ತು ನೀಡಿದ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ** ಅನುಬಂಧ 1ರಲ್ಲಿ ಒಂದು ವಿವರಪತ್ರ;

(ಐ) ತಾತ್ಕಾಲಿಕ ಕರನಿರ್ಧರಣೆಯ ಅಂತಿಮಗೊಳಿಸುವಿಕೆಯ ಕಾರಣದಿಂದಾಗಿ ಮರುಪಾವತಿ ಉದ್ಭವಿಸಿದ ಸಂದರ್ಭದಲ್ಲಿ, ಅಂತಿಮ ಕರನಿರ್ಧರಣಾ ಆದೇಶದ ಉಲ್ಲೇಖ ಸಂಖ್ಯೆ ಮತ್ತು ಸದರಿ ಆದೇಶದ ಒಂದು ಪ್ರತಿ;

(ಜೆ) ರಾಜ್ಯದೊಳಗಿನ ಪೂರೈಕೆ ಎಂದು ಪರಿಗಣಿಸಲಾಗಿರುವ ಆದರೆ ತರುವಾಯವಾಗಿ ಅಂತರ–ರಾಜ್ಯ ಪೂರೈಕೆ ಎಂದಾದ ವ್ಯವಹಾರಗಳ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಕೆ) ತೆರಿಗೆಯ ಹೆಚ್ಚುವರಿ ಸಂದಾಯದ ಕಾರಣದಿಂದಾದ ಕ್ಲೇಮಿನ ಮೊತ್ತದ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಎಲ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದೆ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವ ಒಂದ ಘೋಷಣಾ ಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

(ಎಮ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದೆ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ಅನುಬಂಧ 2ರಲ್ಲಿ ನೀಡಿರುವ ಒಂದು ಪ್ರಮಾಣಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ–

(i) ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಿದ ಮರುಪಾವತಿಗಳ ಸಂದರ್ಭದಲ್ಲಿ, ಪದಾವಳಿಯಾದ **"ಬೆಲೆಪಟ್ಟಿ"** ಎಂದರೆ ಪ್ರಕರಣ 31ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಧೃಢೀಕರಿಸುವ ಬೆಲೆಪಟ್ಟಿ;

(ii) ಸ್ವೀಕರಿಸುವವನಿಂದ ತೆರಿಗೆಯ ಮೊತ್ತವನ್ನು ವಸೂಲು ಮಾಡಲಾಗಿದ್ದಲ್ಲಿ, ತೆರಿಗೆಯ ಹೊರೆಯು ಅಂತಿಮ ಗ್ರಾಹಕನಿಗೆ ವರ್ಗಾಯಿಸಲಾಗಿದೆ ಎಂದು ಪರಿಭಾವಿತವಾಗತಕ್ಕದ್ದು.

(3) ಅರ್ಜಿಯು, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಸಂಬಂಧಿಸಿದಲ್ಲಿ, ವಿದ್ಯುನ್ಮಾನ ಜಮೆ ಖಾತೆಗೆ, ಅರ್ಜಿದಾರನಿಂದ ಹಾಗೆ ಕ್ಲೇಮು ಮಾಡಿದ ಮರುಪಾವತಿಗೆ ಸಮಾನವಾದ ಒಂದು ಮೊತ್ತವನ್ನು ಖರ್ಚುಹಾಕತಕ್ಕದ್ದು.

(4) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 16ರ ಉಪಪ್ರಕರಣ(3)ರ ಉಪಬಂಧಗಳಿಗೆ ಅನುಸಾರವಾಗಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೇ ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಶೂನ್ಯ–ದರ ಪೂರೈಕೆಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಮರುಪಾವತಿ ಮೊತ್ತ= (ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು +ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು

ಇದರಲ್ಲಿ,–

(ಎ) "ಮರುಪಾವತಿ ಮೊತ್ರ" ಎಂದರೆ, ಅಂಗೀಕರಿಸಬಹುದಾದ ಗರಿಷ್ಟ ಮರುಪಾವತಿ;

(ಬಿ) "ನಿವ್ವಳ ಐಟಿಸಿ" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ;

(ಸಿ) "ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು" ಎಂದರೆ ಸಂಬಂಧಿಸಿದ ಅವಧಿಯಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ ಮಾಡಿದ ಸರಕುಗಳ ಶೂನ್ಯ–ದರ ಪೂರೈಕೆ;

(ಡಿ) "ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು" ಎಂದರೆ ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ, ಕೆಳಕಂಡ ವಿಧಾನದಲ್ಲಿ ಲೆಕ್ಕಾಹಾಕಿ ಮಾಡಿದ ಸೇವೆಗಳ ಶೂನ್ಯ–ದರ ಪೂರೈಕೆ, ಎಂದರೆ:–

ಶೂನ್ಯ–ದರ ಸೇವೆಗಳ ಪೂರೈಕೆಯು, "ಶೂನ್ಯ–ದರ ಸೇವೆಗಳ ಪೂರೈಕೆಗಳಿಗಾಗಿ ಸಂಬಂಧಿಸಿದ ಅವಧಿಯಲ್ಲಿ ಸ್ವೀಕರಿಸಿರುವ ಮತ್ತು "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಸ್ವೀಕರಿಸಿದ, ಅದಕ್ಕಾಗಿ ಸೇವೆಗಳ ಪೂರೈಕೆ ಸಂಬಂಧಿಸಿದ ಅವಧಿಯಲ್ಲಿ ಪೂರ್ಣಗೊಳ್ಳದಿರುವ, ಮುಂಗಡಗಳಷ್ಟು ಇಳಿಕೆ ಮಾಡಿ, ಪೂರೈಕೆಯು ಪೂರ್ಣಗೊಂಡಿರುವ ಅದಕ್ಕಾಗಿ ಸಂದಾಯವನ್ನು, ಸಂಬಂಧಿಸಿದ ಅವಧಿಗಿಂತ ಹಿಂದಿನ ಯಾವುದೇ ಅವಧಿಯಲ್ಲಿ "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಮುಂಗಡವಾಗಿ ಸ್ವೀಕರಿಸಿರುವ ಸಂದಾಯಗಳ ಸಮಗ್ರವಾಗಿರುತ್ತದೆ;

(ಇ) "ಹೊಂದಿಸಿದ ಒಟ್ಟು ವಹಿವಾಟು" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ "ಶೂನ್ಯ–ದರದ ಪೂರೈಕೆಗಳನ್ನು ಹೊರತುಪಡಿಸಿದ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿ, ಪ್ರಕರಣ 2ರ [31][ಖಂಡ (112)]ರಲ್ಲಿ ಪರಿಭಾಷಿಸಿದಂತೆ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟು;

(ಎಫ್) "ಸಂಬಂಧಿಸಿದ ಅವಧಿ" ಎಂದರೆ ಕ್ಲೇಮನ್ನು ಸಲ್ಲಿಸಲಾಗಿರುವ ಅವಧಿ.

(5) ವಿಲೋಮ ಸುಂಕ ಸ್ವರೂಪದ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಗರಿಷ್ಟ ಮರುಪಾವತಿ ಮೊತ್ರ= (ವಿಲೋಮ ದರದ ಸರಕುಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು–ಅಂಥ ವಿಲೋಮ ದರದ ಸರಕುಗಳ ಪೂರೈಕೆ ಮೇಲೆ ಸಂದಾಯ ಮಾಡಬೇಕಾದ ತೆರಿಗೆ.

ವಿವರಣೆ,– ಈ ಉಪ ನಿಯಮದ ಉದ್ದೇಶಗಳಿಗಾಗಿ ಪದಾವಳಿಯಾದ "ನಿವ್ವಳ ಐಟಿಸಿ" ಮತ್ತು "ಹೊಂದಿಸಿದ ಒಟ್ಟು ವಹಿವಾಟು" ಎನ್ನುವುದು ಉಪ ನಿಯಮ (4)ರಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

90. ಸ್ವೀಕೃತಿ.– (1)ಅರ್ಜಿಯು, ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಯ ಕ್ಲೇಮಿಗೆ ಸಂಬಂಧಿಸಿದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಿಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(2) ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಗಾಗಿ ಕ್ಲೇಮನ್ನು ಹೊರತುಪಡಿಸಿದ, ಮರುಪಾವತಿಯ ಅರ್ಜಿಯನ್ನು ಯುಕ್ತ ಅಧಿಕಾರಿಗೆ ರವಾನಿಸತಕ್ಕದ್ದು, ಅವರು, ಸದರಿ ಅರ್ಜಿಯನ್ನು, ಸಲ್ಲಿಸಿದ ಹದಿನೈದು ದಿನಗಳ ಅವಧಿಯ ಒಳಗಾಗಿ ಅದರ ಸಂಪೂರ್ಣತೆಗಾಗಿ ಸೂಕ್ಷ್ಮ ಪರಿಶೀಲನೆ ಮಾಡತಕ್ಕದ್ದು, ಅರ್ಜಿಯು ನಿಯಮ 89ರ ಉಪನಿಯಮ (2), (3) ಮತ್ತು (4)ರ ನಿಬಂಧನೆಗಳಿಗನುಸಾರವಾಗಿ ಪೂರ್ಣವಾಗಿರುವುದು ಕಂಡಬಂದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(3) ಯಾವುದೇ ನ್ಯೂನ್ಯತೆಯನ್ನು ಗಮನಿಸಿದಲ್ಲಿ, ಯುಕ್ತ ಅಧಿಕಾರಿಯು, ಅರ್ಜಿದಾರನಿಗೆ ನ್ಯೂನ್ಯತೆಗಳನ್ನು**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ, ಅಂಥ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಒಂದು ಹೊಸ ಮರುಪಾವತಿ ಅರ್ಜಿಯನ್ನು ಸಲ್ಲಿಸುವಂತೆ ಆತನನ್ನು ಅಗತ್ಯಪಡಿಸಿ ತಿಳಿಸುವುದು.

(4) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಸಹ ಪರಿಭಾವಿಸತಕ್ಕದ್ದು.

(5) ಕೇಂದ್ರ ಸರಕು ಮತ್ತು ಸೇವೆಗಳ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಪರಿಭಾವಿಸತಕ್ಕದ್ದು.

---

[31]**1ನೇ ಜುಲೈ 2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಬಿ/2017) ದಿನಾಂಕ 01–08–2017ರ ಮೂಲಕ "ಪ್ರಕರಣ2ರ ಉಪಪ್ರಕರಣ (112)" ಪದಗಳಿಗಾಗಿ ಪ್ರತಿಯೋಜಿಸಲಾಗಿದೆ.**

91, ತಾತ್ಕಾಲಿಕ ಮರುಪಾವತಿಯ ಮಂಜೂರಾತಿ.– (1)ಪ್ರಕರಣ 54ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ತಾತ್ಕಾಲಿಕ ಮರುಪಾವತಿಯನ್ನು, ಮರುಪಾವತಿಗೆ ಸಂಬಂಧಿಸಿದ ತೆರಿಗೆ ಅವಧಿಯ ನಿಕಟ ಪೂರ್ವವಾಗಿ ಬರುವ ಐದು ವರ್ಷಗಳ ಯಾವುದೇ ತೆರಿಗೆ ಅವಧಿಯ ಸಮಯದಲ್ಲಿ, ಬಚ್ಚಿಟ್ಟ ತೆರಿಗೆಯ ಮೊತ್ತ ಇನ್ನೂರ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರುವಲ್ಲಿ, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿನ ಕಾನೂನಿನ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಮರುಪಾವತಿಯನ್ನು ಕ್ಲೇಮು ಮಾಡಿರುವ ವ್ಯಕ್ತಿಯು ಅಭಿಯೋಜನೆಗೊಂಡಿಲ್ಲಬಾರದು ಎನ್ನುವ ಷರತ್ತಿಗೆ ಒಳಪಟ್ಟು ಮಂಜೂರು ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಕ್ಲೇಮನ್ನು ಮತ್ತು ಅದಕ್ಕೆ ಪೂರಕವಾಗಿ ಸಲ್ಲಿಸಲಾಗಿರುವ ಪುರಾವೆಯ ಸೂಕ್ಷ್ಮ ಪರಿಶೀಲನೆಯ ನಂತರ ಮತ್ತು ಮರುಪಾವತಿಯಂತೆ ಕ್ಲೇಮು ಮಾಡಿರುವ ಮೊತ್ತವು, ಪ್ರಕರಣ 54ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ಅರ್ಜಿದಾರನಿಗೆ ಉಪನಿಯಮ (1)ರ ಅಡಿಯಲ್ಲಿ ಬಾಕಿ ಇದೆ ಎಂದು ಮೇಲ್ನೋಟಕ್ಕೆ ಮನದಟ್ಟು ಮಾಡಿಕೊಂಡ ನಂತರ, ನಿಯಮ 90ರ ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿನ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳನ್ನು ಮೀರದ ಅವಧಿಯ ಒಳಗಾಗಿ ತಾತ್ಕಾಲಿಕ ಆಧಾರದ ಮೇಲೆ ಸದರಿ ಅರ್ಜಿದಾರನಿಗೆ ಬಾಕಿಯಿರುವ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–04**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಉಪನಿಯಮ (2)ರ ಅಡಿಯಲ್ಲಿ ಮಂಜೂರು ಮಾಡಿದ ಮೊತ್ತಕ್ಕಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದು, ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಅಥವಾ ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

92. ಮರುಪಾವತಿ ಮಂಜೂರಾತಿಯ ಆದೇಶ.– (1) ಅರ್ಜಿಯನ್ನು ಪರೀಕ್ಷಿಸಿದ ನಂತರ, ಯುಕ್ತ ಅಧಿಕಾರಿಯು, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿ ಮರುಪಾವತಿಯು ಬಾಕಿಯಿದೆ ಮತ್ತು ಅರ್ಜಿದಾರನಿಗೆ ಸಂದಾಯ ಮಾಡಬಹುದು ಎನ್ನುವುದನ್ನು ಮನದಟ್ಟು ಮಾಡಿಕೊಂಡಲ್ಲಿ, ಹಕ್ಕುಳ ಅರ್ಜಿದಾರನಿಗೆ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಅದರಲ್ಲಿ, ಪ್ರಕರಣ 54ರ ಉಪಪ್ರಕರಣ (6)ರ ಅಡಿಯಲ್ಲಿ ತಾತ್ಕಾಲಿಕ ಆಧಾರದಲ್ಲಿ ಆತನಿಗೆ ಮರುಪಾವತಿ ಮಾಡಲಾಗಿರುವ ಮೊತ್ತ ಏನಾದರು ಇದ್ದರೆ, ಅದನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಹೊಂದಿಸಿದ ಮೊತ್ತವನ್ನು ಮತ್ತು ಮರುಪಾವತಿ ಮಾಡಬಹುದಾದ ಉಳಿಕೆ ಮೊತ್ತವನ್ನು ನಮೂದಿಸಿ ಮಾಡತಕ್ಕದ್ದು.

ಪರಂತು, ಮರುಪಾವತಿಯ ಮೊತ್ತವನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಸಂಪೂರ್ಣವಾಗಿ ಹೊಂದಾಣಿಕೆ ಮಾಡಿದ್ದಲ್ಲಿ, ಹೊಂದಾಣಿಕೆಯ ವಿವರವನ್ನು ನೀಡುವ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಎನಲ್ಲಿ ನೀಡತಕ್ಕದ್ದು.

(2) ಯುಕ್ತ ಅಧಿಕಾರಿ ಅಥವಾ ಆಯುಕ್ತರು, ಮರುಪಾವತಿಯ ಮೊತ್ತ ಉಪಪ್ರಕರಣ (10) ಅಥವಾ, ಸಂದರ್ಭಾನುಸಾರವಾಗಿ, ಉಪಪ್ರಕರಣ (11)ರ ಉಪಬಂಧಗಳ ಅಡಿಯಲ್ಲಿ ತಡೆಹಿಡಿಯುವಿಕೆಗೆ ಬಾಧ್ಯವಾಗುತ್ತದೆ ಎಂದು ಮನದಟ್ಟು ಮಾಡಿಕೊಂಡಿದ್ದಲ್ಲಿ, ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಬಿನಲ್ಲಿ ಅಂಥ ಮರುಪಾವತಿಯನ್ನು ತಡೆಹಿಡಿಯುವುದಕ್ಕಾಗಿ ಕಾರಣಗಳನ್ನು ತಿಳಿಸಿ ಮಾಹಿತಿ ನೀಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಮರುಪಾವತಿಯಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಯಾವುದೇ ಭಾಗ, ಅಂಗೀಕಾರಾರ್ಹವಲ್ಲ ಅಥವಾ ಅರ್ಜಿದಾರನಿಗೆ ಸಂದಾಯ ಮಾಡುವಾಗಿಲ್ಲ ಎಂದು, ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮನದಟ್ಟು ಮಾಡಿಕೊಂಡರೆ, ಆತನು, ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–08**ರಲ್ಲಿ ಒಂದು ಸೂಚನಾ ಪತ್ರವನ್ನು, ಅಂಥ ಸೂಚನಾ ಪತ್ರ ನೀಡಿದ ಹದಿನೈದು ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–09**ರಲ್ಲಿ ಉತ್ತರವನ್ನು ನೀಡುವಂತೆ ಆತನನ್ನು ಅಗತ್ಯಪಡಿಸಿ ನೀಡತಕ್ಕದ್ದು ಮತ್ತು ಉತ್ತರವನ್ನು ಪರಿಗಣಿಸಿದ ನಂತರ, ಮರುಪಾವತಿಯ ಮೊತ್ತವನ್ನು ಪೂರ್ಣವಾಗಿ ಅಥವಾ ಭಾಗವಾಗಿ ಮಂಜೂರು ಮಾಡಿ ಅಥವಾ ಸದರಿ ಮರುಪಾವತಿ ಕ್ಲೇಮನ್ನು ತಿರಸ್ಕರಿಸಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಸದರಿ ಆದೇಶವನ್ನು ಅರ್ಜಿದಾರನಿಗೆ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು ಮತ್ತು ಉಪನಿಯಮ (1)ರ ಉಪಬಂಧಗಳು, ಮರುಪಾವತಿ ಕ್ಲೇಮು ಮಾಡಿರುವಷ್ಟರ ಮಟ್ಟಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಯಾವುದೇ ಮರುಪಾವತಿಯ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(4) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಬಹುದು ಎಂದು ಮನದಟ್ಟು ಮಾಡಿಕೊಂಡರೆ, ಆತನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದನ್ನು, ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(5) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಲಾಗುವುದಿಲ್ಲ ಎಂದು ಮನದಟ್ಟು ಮಾಡಿಕೊಂಡರೆ, ಆತನು

ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಬೇಕಾದ ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸೂಚನೆಯನ್ನು ನೀಡತಕ್ಕದ್ದು.

93. ತಿರಸ್ಕೃತ ಮರುಪಾವತಿ ಕ್ಲೇಮು ಮೊತ್ತದ ಜಮೆ.– (1) ನಿಯಮ 90ರ ಉಪನಿಯಮ (3)ರ ಅಡಿಯಲ್ಲಿ ಯಾವುದೇ ನ್ಯೂನ್ಯತೆಗಳನ್ನುತಿಳಸಲಾಗಿದ್ದಲ್ಲಿ, ನಿಯಮ 89ರ ಉಪನಿಯಮ (3)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(2) ಮರುಪಾವತಿಯಾಗಿ ಕ್ಲೇಮು ಮಾಡಿದ ಯಾವುದೇ ಮೊತ್ತವನ್ನು ನಿಯಮ 92ರ ಅಡಿಯಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ತಿರಸ್ಕರಿಸಿದ್ದಲ್ಲಿ, ತಿರಸ್ಕರಣೆಯಷ್ಟರ ಮಟ್ಟಿಗೆ ಖರ್ಚುಹಾಕಲಾದ ಮೊತ್ತವನ್ನು, **ನಮೂನೆ ಜಿಎಸ್‌ಟಿ ಪಿಎಂಟಿ–03**ರಲ್ಲಿ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

94. ವಿಳಂಬ ಮರುಪಾವತಿಗಳ ಮೇಲಿನ ಬಡ್ಡಿ ಮಂಜೂರಾತಿಯ ಆದೇಶ.– ಯಾವುದೇ ಬಡ್ಡಿ, ಅರ್ಜಿದಾರನಿಗೆ ಪ್ರಕರಣ 56ರ ಅಡಿಯಲ್ಲಿ ಬಾಕಿಯಿರುವಲ್ಲಿ ಮತ್ತು ಸಂದಾಯ ಮಾಡಬೇಕಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯೊಂದಿಗೆಒಂದು ಆದೇಶವನ್ನು ಮಾಡತಕ್ಕದ್ದು, ಅದರಲ್ಲಿ, ವಿಳಂಬವಾದ ಮರುಪಾವತಿಯ ಮೊತ್ತ, ಬಡ್ಡಿಯನ್ನು ಸಂದಾಯ ಮಾಡಬೇಕಾದ ವಿಳಂಬದ ಅವಧಿ ಮತ್ತು ಸಂದಾಯ ಮಾಡಬೇಕಾದ ಬಡ್ಡಿಯ ಮೊತ್ತವನ್ನು ನಿರ್ದಿಷ್ಟ ಪಡಿಸತಕ್ಕದ್ದು, ಮತ್ತು ಅಂಥ ಬಡ್ಡಿಯ ಮೊತ್ತವನ್ನು ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

95. ಕೆಲವು ವ್ಯಕ್ತಿಗಳಿಗೆ ತೆರಿಗೆಯ ಮರುಪಾವತಿ.– (1) ಪ್ರಕರಣ 55ರ ಅಡಿಯಲ್ಲಿ ನೀಡಿದ ಅಧಿಸೂಚನೆಯ ಪ್ರಕಾರ ತನ್ನ ಒಳಮುಖ ಪೂರೈಕೆಗಳ ಮೇಲೆ ಆತನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯ ಕ್ಲೇಮಿಗೆ ಅರ್ಹನಿರುವ ಯಾವೊಬ್ಬ ವ್ಯಕ್ತಿಯು, ಸಂವಾದಿ ಪೂರೈಕೆದಾರರಿಂದ**ನಮೂನೆ ಜಿಎಸ್‌ಟಿಆರ್–1**ರಲ್ಲಿ ಹೊರಮುಖ ಪೂರೈಕೆಗಳಿಗಾಗಿ ಒದಗಿಸಿದ ವಿವರಪತ್ರದ ಆಧಾರದಲ್ಲಿ ಸಿದ್ಧಪಡಿಸಿದ, **ನಮೂನೆ ಜಿಎಸ್‌ಟಿಆರ್ 11**ರಲ್ಲಿನ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಪತ್ರದ ಜೊತೆಯಲ್ಲಿ,ಮರುಪಾವತಿಗಾಗಿ ಅರ್ಜಿಯನ್ನು,**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10**ರಲ್ಲಿ, ಪ್ರತಿ ತ್ರೈಮಾಸಿಕಕ್ಕೆ ಒಂದು ಬಾರಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಮರುಪಾವತಿಯ ಅರ್ಜಿಯನ್ನು ಸ್ವೀಕರಿಸುದುದಕ್ಕಾಗಿ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ನೀಡತಕ್ಕದ್ದು.

(3) ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾತಿಯು ಕೆಳಕಂಡಂತಿದ್ದರೆ ಲಭ್ಯವಿರತಕ್ಕದ್ದು–

(ಎ)ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳನ್ನು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ತೆರಿಗೆ ಬೆಲೆಪಟ್ಟಿಗೆ ಪ್ರತಿಯಾಗಿ ಸ್ವೀಕರಿಸಿದ್ದಾಗ ಮತ್ತು ಒಂದು ತೆರಿಗೆ ಬೆಲೆಪಟ್ಟಿಯ ಅಡಿಯಲ್ಲಿ ವ್ಯಾಪ್ತವಾದ ಪೂರೈಕೆಯ ಬೆಲೆಯು, ತೆರಿಗೆ ಸಂದಾಯ ಮಾಡಿರುವುದು ಏನಾದರು ಇದ್ದರೆ, ಅದನ್ನು ಬಿಟ್ಟು ಐದು ಸಾವಿರ ರೂಪಾಯಿಗಳನ್ನು ಮೀರಿದ್ದಾಗ;

(ಬಿ) ಅರ್ಜಿದಾರನ ಹೆಸರು ಮತ್ತು ಸರಕು ಅಥವಾ ಸೇವೆಗಳ ತೆರಿಗೆ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಬೆಲೆಪಟ್ಟಿಯಲ್ಲಿ ನಮೂದಾಗಿದ್ದಾಗ; ಮತ್ತು

(ಸಿ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರೇ ನಿರ್ಬಂಧಗಳು ಮತ್ತು ಷರತ್ತುಗಳನ್ನು ಪೂರೈಸಿದ್ದಾಗ.

(4) ನಿಯಮ 92ರ ಉಪಬಂಧಗಳು, ಈ ನಿಮಯದ ಅಡಿಯಲ್ಲಿ ಮರುಪಾವತಿಯ ಮಂಜೂರಾತಿ ಮತ್ತು ಸಂದಾಯಕ್ಕಾಗಿ, ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(5) ಒಂದು ಕೌಲು ಅಥವಾ ಇತರೇ ಅಂತರರಾಷ್ಟ್ರೀಯ ಒಪ್ಪಂದ, ಅದರಲ್ಲಿ ರಾಷ್ಟ್ರಪತಿ ಅಥವಾ ಭಾರತ ಸರ್ಕಾರ ಪಕ್ಷಕಾರರಾಗಿರುವುದರಲ್ಲಿನ ಒಂದು ವ್ಯಕ್ತ ಉಪಬಂಧವು, ಈ ಅಧ್ಯಾಯದ ನಿಯಮಗಳ ಉಪಬಂಧಗಳೊಂದಿಗೆ ಅಸಂಗತವಾಗಿದ್ದಲ್ಲಿ, ಅಂಥ ಕೌಲು ಅಥವಾ ಅಂತರರಾಷ್ಟ್ರೀಯ ಒಪ್ಪಂದ ಚಾಲ್ತಿಯಲ್ಲಿರತಕ್ಕದ್ದು.

96. ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.– (1) ಒಬ್ಬ ರಫ್ತುದಾರನಿಂದ ಸಲ್ಲಿಸಲಾದ ಶಿಪ್ಪಿಂಗ್ ಬಿಲ್‌ನ್ನು ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಗಾಗಿ ಸಲ್ಲಿಸಲಾದ ಅರ್ಜಿ ಎಂದು ಪರಿಭಾವಿಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಕೆಳಕಂಡತೆ ಇರುವಾಗ ಮಾತ್ರ ಸಲ್ಲಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು:–

(ಎ) ರಫ್ತು ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರದಲ್ಲಿನ ವ್ಯಕ್ತಿಯು, ಶಿಪ್ಪಿಂಗ್ ಬಿಲ್‌ಗಳ ಅಥವಾ ರಫ್ತು ಬಿಲ್‌ಗಳ ಸಂಖ್ಯೆ ಮತ್ತು ದಿನಾಂಕವನ್ನು ಹೊಂದಿರುವ ರಫ್ತು ಪ್ರಣಾಳಿಕೆ ಅಥವಾ ಒಂದು ರಫ್ತು ವರದಿಯನ್ನು ಯುಕ್ತವಾಗಿ ಸಲ್ಲಿಸಿದ್ದಾಗ; ಮತ್ತು

(ಬಿ) ಅರ್ಜಿದಾರನು, ಒಂದು ಸಿಂಧುವಾದ ರಿಟರ್ನನ್ನು **ನಮೂನೆ ಜಿಎಸ್‌ಟಿಆರ್‌–3**ರಲ್ಲಿ [32][ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್‌–3**ಬಿಯಲ್ಲಿ]ಒದಗಿಸಿದ್ದಾಗ;

(2) **ನಮೂನೆ ಜಿಎಸ್‌ಟಿಆರ್‌–1**ರಲ್ಲಿ ಒಳಗೊಂಡಿರುವ ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ವಿವರಗಳನ್ನು, ಸಾಮಾನ್ಯ ಪೋರ್ಟಲ್‌ನ ಮೂಲಕ ಸೀಮಾಸುಂಕ ಇಲಾಖೆಯಿಂದ ಹೆಸರಿಸಲಾದ ಸಿಸ್ಟಂಗೆ ಪ್ರಸರಣಗೊಳಿಸತಕ್ಕದ್ದು ಮತ್ತು ಸದರಿ ಸಿಸ್ಟಂ ಸಾಮಾನ್ಯ ಪೋರ್ಟಲ್‌ಗೆ, ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾಗಿರುವ ಆ ಸರಕುಗಳು ಭಾರತದ ಹೊರಗಡೆಗೆ ರಫ್ತಾಗಿವೆ ಎನ್ನುವ ಒಂದು ಧೃಢೀಕರಣವನ್ನು ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

[33][ಪರಂತು ಒಂದು ತೆರಿಗೆ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್‌–1ರಲ್ಲಿ** ಹೊರಮುಖ ಪೂರೈಕೆಯ ವಿವರಗಳನ್ನು ಒದಗಿಸುವುದಕ್ಕಾಗಿ ಇರುವ ದಿನಾಂಕವನ್ನು, ಅಧಿನಿಯಮದ ಪ್ರಕರಣ 37ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಸ್ತರಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್‌–3ಬಿ**ಯಲ್ಲಿ ರಿಟರ್ನನ್ನು ಒದಗಿಸಲಾದ ನಂತರ ಪೂರೈಕೆದಾರನು **ನಮೂನೆ ಜಿಎಸ್‌ಟಿಆರ್‌–1ರ** ಕೋಷ್ಟಕ 6ಎನಲ್ಲಿ ನಿರ್ದಿಷ್ಟಪಡಿಸಿದಂತೆ ರಫ್ತುಗಳಿಗೆ ಸಂಬಂಧಿಸಿದ ವಿವರವನ್ನು ಒದಗಿಸತಕ್ಕದ್ದು ಮತ್ತು ಅದು ಸಾಮಾನ್ಯ ಪೋರ್ಟಲ್‌ನಿಂದ ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕ ಇಲಾಖೆಯಿಂದ ವಿನ್ಯಾಸಗೊಳಿಸಲಾದ ಸಿಸ್ಟಂಗೆ ಪ್ರಸರಣಗೊಳ್ಳತಕ್ಕದ್ದು:

ಮತ್ತು ಪರಂತು, ಮೊದಲನೇ ಪರಂತುಕದ ಅಡಿಯಲ್ಲಿ ಕೋಷ್ಟಕ 6ಎನಲ್ಲಿ ಒದಗಿಸಿದ ಮಾಹಿತಿಯು, ಸದರಿ ತೆರಿಗೆ ಅವಧಿಗೆ **ನಮೂನೆ ಜಿಎಸ್‌ಟಿಆರ್‌–1** ರಲ್ಲಿ ಸ್ವಯಂ–ರಚಿತಗೊಳ್ಳತಕ್ಕದ್ದು.**]**

(3) ಸಾಮಾನ್ಯ ಪೋರ್ಟಲ್‌ನಿಂದ **ನಮೂನೆ ಜಿಎಸ್‌ಟಿಆರ್‌–3**[34][ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್‌–3**ಬಿಯಲ್ಲಿ]ಒಂದು ಸಿಂಧುವಾದ ರಿಟರ್ನನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಸೀಮಾಸುಂಕದಿಂದ ಹೆಸರಿಸಲಾದ ಸಿಸ್ಟಂ, ಮರುಪಾವತಿಯ ಕ್ಲೇಮನ್ನು ಪ್ರಕ್ರಿಯೆಗೊಳಿಸತಕ್ಕದ್ದು ಮತ್ತು ಪ್ರತಿ ಶಿಪ್ಪಿಂಗ್ ಬಿಲ್ ಅಥವಾ ರಫ್ತುವಿನ ಬಿಲ್‌ಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಏಕೀಕೃತ ತೆರಿಗೆಗೆ ಸಮಾನಾದ ಒಂದು ಮೊತ್ತವನ್ನು ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಸೀಮಾ ಸುಂಕ ಪ್ರಾಧಿಕಾರಗಳಿಗೆ ತಿಳಿಸಲಾಗಿರುವಂತೆ, ಅರ್ಜಿದಾರನ ಬ್ಯಾಂಕಿನ ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(4) ಮರುಪಾವತಿಗಾಗಿ ಕ್ಲೇಮನ್ನು ಕೆಳಕಂಡಂತೆ ಇದ್ದಲ್ಲಿ ತಡೆಹಿಡಿಯತಕ್ಕದ್ದು,–

(ಎ) ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಂದ ಮರುಪಾತಿಯ ಸಂದಾಯವನ್ನು, ಪ್ರಕರಣ 54ರ ಉಪಪ್ರಕರಣ (10) ಅಥವಾ ಉಪಪ್ರಕರಣ (11)ರ ಉಪಬಂಧಗಳಿಗೆ ಅನುಸಾರವಾಗಿ ವ್ಯಕ್ತಿ ಮರುಪಾವತಿಯನ್ನು ಕ್ಲೇಮು ಮಾಡುತ್ತಿರುವ ಕಾರಣದಿಂದಾಗಿ ತಡೆಹಿಡಿಯುವಂತೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ; ಅಥವಾ

(ಬಿ) ಸೀಮಾಸುಂಕದ ಯುಕ್ತ ಅಧಿಕಾರಿಯು, ಸರಕುಗಳು ಸೀಮಾಸುಂಕಗಳ ಅಧಿನಿಯಮ, 1962ರ ಉಪಬಂಧಗಳನ್ನು ಉಲ್ಲಂಘಿಸಿ ಸರಕುಗಳನ್ನು ರಫ್ತು ಮಾಡಲಾಗಿದೆ ಎಂದು ನಿರ್ಧರಿಸಿದ್ದಲ್ಲಿ.

(5) ಉಪನಿಯಮ (4)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಸೀಮಾಸುಂಕ ಠಾಣೆಯಲ್ಲಿರುವ ಏಕೀಕೃತ ತೆರಿಗೆಯ ಯುಕ್ತ ಅಧಿಕಾರಿಯು ಅರ್ಜಿದಾರನಿಗೆ ಮತ್ತು ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಗೆ ತಿಳಿಸತಕ್ಕದ್ದು, ಮತ್ತು ಅಂಥ ತಿಳುವಳಿಕೆಯ ಒಂದು ಪ್ರತಿಯನ್ನು ಸಾಮಾನ್ಯ ಪೋರ್ಟಲ್‌ಗೆ ಪ್ರಸರಣಗೊಳಿಸತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ತಿಳುವಳಿಕೆ ಪತ್ರವನ್ನು ಪ್ರಸರಣಗೊಳಿಸಿದ ತರುವಾಯ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ ಬಿನಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(7) ಅರ್ಜಿದಾರನು, ಉಪನಿಯಮ (4)ರ ಖಂಡ (ಎ)ಯ ಅಡಿಯಲ್ಲಿ ತಡೆಹಿಡಿದ ಮರುಪಾವತಿಯ ಮೊತ್ತಕ್ಕೆ ಹಕ್ಕುಳ್ಳವನಾಗಿರುವಲ್ಲಿ,ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಹೊರಡಿಸಿದ ನಂತರ ಮರುಪಾವತಿಯ ಮೊತ್ತವನ್ನು ನೀಡಲು ಮುಂದುವರಿಯತಕ್ಕದ್ದು.

(8) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಸರಕುಗಳ ವರ್ಗಕ್ಕಾಗಿ, ಭೂತಾನ್‌ಗೆ ರಫ್ತು ಮಾಡಲಾದುವುಗಳ ಮೇಲೆ ಏಕೀಕೃತ ತೆರಿಗೆಯ ಮರುಪಾವತಿಯನ್ನು,ಭೂತಾನ್ ಸರ್ಕಾರಕ್ಕೆ ಸಂದಾಯ ಮಾಡಬಹುದು ಮತ್ತು ಅಂಥ ಮರುಪಾವತಿಯನು ಭೂತಾನ್ ಸರ್ಕಾರಕ್ಕೆ

---

[32]01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ.

[33]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಐ/2017) ದಿನಾಂಕ 13–12–2017ರ ಮೂಲಕ ಈ ಪರಂತುಕಗಳನ್ನುಸೇರಿಸಲಾಗಿದೆ.

[34]01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ.

ಸಂದಾಯ ಮಾಡಿದ್ದಲ್ಲಿ, ರಫ್ತುದಾರನಿಗೆ ಏಕೀಕೃತ ತೆರಿಗೆಯ ಯಾವುದೇ ಮರುಪಾವತಿಯನ್ನು ಸಂದಾಯ ಮಾಡತಕ್ಕದ್ದಲ್ಲ.

[35][**96ಎ. ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಸರಕು ಅಥವಾ ಸೇವೆಗಳ ರಫ್ತುವಿನ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.**–(1) ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ ಸರಕು ಅಥವಾ ಸೇವೆಗಳ ರಫ್ತುವಿನ ಪೂರೈಕೆಯ ಆಯ್ಕೆಯನ್ನು ಉಪಯೋಗಿಸುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು, ರಫ್ತಿಗೆ ಮುನ್ನ, ಕ್ಷೇತ್ರ ವ್ಯಾಪ್ತಿಯ ಆಯುಕ್ತರಿಗೆ, ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಯ ಜೊತೆಯಲ್ಲಿ ಬಾಕಿಯಿರುವ ತೆರಿಗೆಯನ್ನು ಕೆಳಕಂಡ ಅವಧಿಯ ಒಳಗಾಗಿ ಸಂದಾಯ ಮಾಡುತ್ತೇನೆ ಎಂದು ತನ್ನನ್ನು ಬದ್ಧಗೊಳಿಸಿಕೊಂಡು, ಒಂದು ಬಾಂಡ್ ಅಥವಾ ವಾಗ್ದಾನ ಪತ್ರವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–11**ರಲ್ಲಿ ಒದಗಿಸತಕ್ಕದ್ದು–

(ಎ) ಸರಕುಗಳು ಭಾರತದ ಹೊರಗಡೆ ರಫ್ತಾಗಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಮೂರು ತಿಂಗಳು ಮುಗಿದ ನಂತರದ ಹದಿನೈದು ದಿನಗಳು[36][ಅಥವಾ ಆಯುಕ್ತರಿಂದ ಅನುಮತಿಸಬಹುದಾದ ಅಂಥ ಮುಂದುವರಿದ ಅವಧಿ]; ಅಥವಾ

(ಬಿ) ರಫ್ತುದಾರನಿಂದ ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಅಂಥ ಸೇವೆಗಳ ಸಂದಾಯವನ್ನು ಸ್ವೀಕರಿಸಿಲ್ಲದಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಒಂದು ವರ್ಷ ಅಥವಾ ಆಯುಕ್ತರಿಂದ ಅನುಮತಿಸಬಹುದಾದ ಅಂಥ ಮುಂದಿನ ಅವಧಿಯು ಮುಗಿದ ನಂತರದ ಹದಿನೈದು ದಿನಗಳು.

(2) ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಿದ ನಮೂನೆ ಜಿಎಸ್‌ಟಿಆರ್–1ರಲ್ಲಿ ಒಳಗೊಂಡಿರುವ ರಫ್ತು ಬೆಲೆಪಟ್ಟಿಯ ವಿವರಗಳನ್ನು, ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕಗಳ ಇಲಾಖೆಯಿಂದ ಹೆಸರಿಸಿದ ವ್ಯವಸ್ಥೆಗೆ ಪ್ರಸರಣ ಮಾಡತಕ್ಕದ್ದು ಮತ್ತು ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾದ ಸರಕುಗಳನ್ನು ಭಾರತದ ಹೊರಗಡೆ ರಫ್ತು ಮಾಡಲಾಗಿದೆ ಎನ್ನುವ ಒಂದು ಖಾತರಿಯನ್ನು ಸದರಿ ಸಿಸ್ಟಂನಿಂದ ಸಾಮಾನ್ಯ ಪೋರ್ಟಲ್‌ಗೆ ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

[37][ಪರಂತು ಒಂದು ತೆರಿಗೆ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–1ರಲ್ಲಿ** ಹೊರಮುಖ ಪೂರೈಕೆಯ ವಿವರಗಳನ್ನು ಒದಗಿಸುವುದಕ್ಕಾಗಿ ಇರುವ ದಿನಾಂಕವನ್ನು, ಅಧಿನಿಯಮದ ಪ್ರಕರಣ 37ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಸ್ತರಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನನ್ನು ಒದಗಿಸಲಾದ ನಂತರ ಪೂರೈಕೆದಾರನು **ನಮೂನೆ ಜಿಎಸ್‌ಟಿಆರ್–1ರ** ಕೋಷ್ಟಕ 6ಎನಲ್ಲಿ ನಿರ್ದಿಷ್ಟಪಡಿಸಿದಂತೆ ರಫ್ತುಗಳಿಗೆ ಸಂಬಂಧಿಸಿದ ವಿವರವನ್ನು ಒದಗಿಸತಕ್ಕದ್ದು ಮತ್ತು ಅದು ಸಾಮಾನ್ಯ ಪೋರ್ಟಲ್‌ನಿಂದ ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕ ಇಲಾಖೆಯಿಂದ ವಿನ್ಯಾಸಗೊಳಿಸಲಾದ ಸಿಸ್ಟಂಗೆ ಪ್ರಸರಣಗೊಳ್ಳತಕ್ಕದ್ದು:

ಮತ್ತು ಪರಂತು, ಮೊದಲನೇ ಪರಂತುಕದ ಅಡಿಯಲ್ಲಿ ಕೋಷ್ಟಕ 6ಎನಲ್ಲಿ ಒದಗಿಸಿದ ಮಾಹಿತಿಯು, ಸದರಿ ತೆರಿಗೆ ಅವಧಿಗೆ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಸ್ವಯಂ–ರಚಿತಗೊಳ್ಳತಕ್ಕದ್ದು.]

(3) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಸರಕುಗಳು ರಫ್ತಾಗದಿದ್ದಲ್ಲಿ ಮತ್ತು ಸದರಿ ಉಪನಿಯಮದಲ್ಲಿ ನಮೂದಿಸಿದ ಮೊತ್ತವನ್ನು ನೋಂದಾಯಿತ ವ್ಯಕ್ತಿಯು ಸಂದಾಯ ಮಾಡಲು ವಿಫಲನಾದಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ ರಫ್ತನ್ನು ತತ್‌ಕ್ಷಣದಲ್ಲಿ ಹಿಂಪಡೆಯತಕ್ಕದ್ದು ಮತ್ತು ಸದರಿ ಮೊತ್ತವನ್ನು ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 79ರ ಉಪಬಂಧಗಳಿಗೆ ಅನುಸಾರವಾಗಿ ವಸೂಲಾತಿ ಮಾಡತಕ್ಕದ್ದು.

(4) ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ, ಉಪನಿಯಮ (3) ನಿಬಂಧನೆಗಳಿಗೆ ಅನುಸಾರವಾಗಿ ಹಿಂಪಡೆಯಲಾದ ರಫ್ತನ್ನು, ನೋಂದಾಯಿತ ವ್ಯಕ್ತಿಯು ಬಾಕಿ ಮೊತ್ತವನ್ನು ಸಂದಾಯ ಮಾಡಿದಾಗ ಕೂಡಲೇ ಪೂರ್ವ ಸ್ಥಿತಿಗೆ ತರತಕ್ಕದ್ದು.

(5) ಮಂಡಳಿಯು, ಅಧಿಸೂಚನೆಯ ಮೂಲಕ, ಬಾಂಡ್‌ನ ಜಾಗದಲ್ಲಿ ಒಂದು ವಾಗ್ದಾನ ಪತ್ರವನ್ನು ಯಾವ ಷರತ್ತುಗಳು ಮತ್ತು ಸುರಕ್ಷತೆಗಳ ಅಡಿಯಲ್ಲಿ ಒದಗಿಸಬಹುದು ಎಂದು ನಿರ್ದಿಷ್ಟಪಡಿಸಬಹುದು.

(6) ಉಪನಿಯಮ (1)ರ ಉಪಬಂಧಗಳು ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರ ಅಥವಾ ವಿಶೇಷ ಆರ್ಥಿಕ ವಲಯ ಘಟಕಕ್ಕೆ ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗೆ ಸಂಬಂಧಿಸಿದಂತೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.]

97. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.– (1) ಎಲ್ಲಾ ಜಮೆಗಳನ್ನು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ನಿಯಮ 92ರ ಉಪನಿಯಮ (5)ರ ಅಡಿಯಲ್ಲಿ ಮಾಡತಕ್ಕದ್ದು.

(2) ನಿಧಿಗೆ ಜಮೆಗೊಳಿಸಲಾಗಿರುವ ಯಾವುದೇ ಮೊತ್ತವನ್ನು, ಯುಕ್ತ ಅಧಿಕಾರ, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ

---

[35]01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ

[36]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಹೆಚ್/2017) ದಿನಾಂಕ 09–11–2017ರ ಮೂಲಕ ಸೇರಿಸಲಾಗಿದೆ.

[37]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಐ/2017) ದಿನಾಂಕ 13–12–2017ರ ಮೂಲಕ ಈ ಪರಂತುಕಗಳನ್ನುಸೇರಿಸಲಾಗಿದೆ.

ಅಥವಾ ನ್ಯಾಯಾಲಯದ ಆದೇಶದಿಂದ ಯಾವುದೇ ಕ್ಷೇಮುದಾರನಿಗೆ ಸಂದಾಯ ಮಾಡುವಂತೆ ಆದೇಶಿಸಿರುವುದನ್ನು ಅಥವಾ ನಿರ್ದೇಶಿಸಿರುವುದನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ಪ್ರಕರಣ 58ರ ಉಪಪ್ರಕರಣ (1)ರ ಅಡಿಯಲ್ಲಿ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಮೊತ್ತದ ಯಾವುದೇ ಬಳಕೆಯನ್ನು, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಖರ್ಚು ಹಾಕುವುದರ ಮತ್ತು ಮೊತ್ತವು ಬಳಕೆಗಾಗಿ ವರ್ಗಾವಣೆಯಾಗಿರುವ ಖಾತೆಗೆ ಜಮೆಗೊಳಿಸುವುದರ ಮೂಲಕ ಮಾಡತಕ್ಕದ್ದು.

(4) ಸರ್ಕಾರವು, ಒಂದು ಆದೇಶದ ಮೂಲಕ, ಛೇರ್‌ಮನ್, ಉಪ–ಛೇರ್‌ಮನ್, ಒಬ್ಬ ಸದಸ್ಯ ಕಾರ್ಯದರ್ಶಿ ಮತ್ತು ಅದು ಸೂಕ್ತ ಎಂದು ಭಾವಿಸಬಹುದಾ ದ ಅಂಥ ಇತರ ಸದಸ್ಯರುಗಳನ್ನು ಒಳಗೊಂಡ ಒಂದು ಸ್ಥಾಯಿ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಸಮಿತಿಯು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಲಾದ ಹಣವನ್ನು ಗ್ರಾಹಕ ಕ್ಷೇಮಾಭಿವೃದ್ಧಿಗಾಗಿ ಸಮರ್ಪಕವಾದ ಬಳಕೆಗಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(5) ಸಮಿತಿಯು ಅವಶ್ಯಕತೆಯಿರುವಾಗ, ಮೂರು ತಿಂಗಳುಗಳಿಗೆ ಒಂದು ಬಾರಿ ಕಡಿಮೆಯಿಲ್ಲದಂತೆ ಸಭೆ ಸೇರತಕ್ಕದ್ದು.

(6) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಉಪಬಂಧಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೇ ಕಾನೂನಿನ ಅಡಿಯಲ್ಲಿ, ನೋಂದಾಯಿತವಾದ, ಮೂರು ವರ್ಷಗಳ ಅವಧಿಗಾಗಿ ಗ್ರಾಹಕರ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಹಕರುಗಳ ವಿಶೇಷವಾಗಿ ಮಹಿಳೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ; ಗ್ರಾಮ ಅಥವಾ ಮಂಡಲ ಅಥವಾ ಸಮಿತಿ ಮಟ್ಟದ ಸಹಕಾರಿ ಸಂಘಗಳನ್ನು ಒಳಗೊಂಡಂತೆಯಾವುದೇ ಏಜನ್ಸಿ ಅಥವಾ ಸಂಘಟನೆ ಅಥವಾ ಭಾರತೀಯ ಮಾನಕಗಳ ಬ್ಯೂರೋದಿಂದ, ಐದು ವರ್ಷಗಳ ಅವಧಿಗಾಗಿ, ಸಮೂಹ ಬಳಕೆಯ ಉತ್ಪನ್ನಗಳ ಮಾನಕ ಗುರುತಿನ ರೂಪಿಸುವಿಕೆಯಲ್ಲಿ ಮಹತ್ವದ ಕೊಡುಗೆಯನ್ನು ನೀಡುವ ಅಥವಾ ನೀಡಬಹುದಾಗಿರುವ ಕಾರ್ಯಸಾಧ್ಯವಾದ ಮತ್ತು ಉಪಯೋಗಕರವಾದ ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕಾಗಿ ಶಿಫಾರಸ್ಸುಗೊಂಡಿರುವ, ಕೈಗಾರಿಕಾ ವ್ಯಾಜ್ಯಗಳ ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ಪರಿಭಾಷಿಸಲಾದ ಯಾವುದೇ ಕೈಗಾರಿಕೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನಕ್ಕಾಗಿ ಅರ್ಜಿಯನ್ನು ಹಾಕಬಹುದು.

ಪರಂತು, ಒಬ್ಬ ಗ್ರಾಹಕನು, ಗ್ರಾಹಕರ ವ್ಯಾಜ್ಯದಲ್ಲಿನ ದೂರುದಾರನಾಗಿ ಆತನಿಂದ ಭರಿಸಿದ ಕಾನೂನು ವೆಚ್ಚಗಳ ಮರುಭರಿಸುವಿಕೆಗಾಗಿ ಅದರ ಅಂತಿಮ ನ್ಯಾಯನಿರ್ಣಯದ ನಂತರ ಅರ್ಜಿಯನ್ನು ಸಲ್ಲಿಸಬಹುದು.

(7) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನದ ಎಲ್ಲಾ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿ ಅರ್ಜಿದಾರನಿಂದ ಸಲ್ಲಿಸತಕ್ಕದ್ದು ಆದರೆ ಸಮಿತಿಯು ಮುಖ್ಯ ವಿಷಯಗಳ ವಿವರಗಳನ್ನು ಪರಿಶೀಲಿಸಲಾಗಿರುವ ಮತ್ತು ಅದಕ್ಕನುಗುಣವಾಗಿ ಸದಸ್ಯ ಕಾರ್ಯದರ್ಶಿಯಿಂದ ಪರಿಗಣನೆಗೆ ಶಿಫಾರಸ್ಸಾಗಿರುವ ಹೊರತು ಒಂದು ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

(8) ಸಮಿತಿಯು ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು–

(ಎ) ಅರ್ಜಿದಾರನ ಅಭಿರಕ್ಷೆ ಮತ್ತು ನಿಯಂತ್ರಣದಲ್ಲಿರುವ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಪರಿಕರಗಳು ಅಥವಾ ವಸ್ತುಗಳನ್ನು, ಅರ್ಜಿಯ ಸಮರ್ಪಕವಾದ ಮೌಲ್ಯಮಾಪನಕ್ಕಾಗಿ ಅದರ ಮುಂದೆ ಅಥವಾ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವಂತೆ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಬಿ) ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಎಂದು ಕ್ಲೇಮು ಮಾಡಲಾದ ಚಟುವಟಿಕೆಗಳು ನಡೆಯುತ್ತಿವೆ ಎಂದು ನಿರೂಪಿಸಬಹುದಾದ ಯಾವುದೇ ಸ್ಥಳಗಳ ಪ್ರವೇಶ ಮತ್ತು ತಪಾಸಣೆಗೆ, ಕೇಂದ್ರ ಸರ್ಕಾರ ಅಥವಾ, ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯನ್ನು ಅನುಮತಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಸಿ) ಅನುದಾನದ ಸಮರ್ಪಕವಾದ ಬಳಕೆಯನ್ನು ಖಾತರಿಪಡಿಸಿಕೊಳ್ಳವುದಕ್ಕಾಗಿ, ಅರ್ಜಿದಾರನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸುವುದು;

(ಡಿ) ಆತನ ಕಡೆಯಿಂದ ಮುಖ್ಯ ವಿಷಯಗಳ ಮಾಹಿತಿ ನೀಡುವಿಕೆಯಲ್ಲಿ ತಪ್ಪಿದ್ದಲ್ಲಿ ಅಥವಾ ಬಚ್ಚಿಟ್ಟಿರುವ ಸಂದರ್ಭದಲ್ಲಿ ಮಂಜೂರು ಮಾಡಿರುವ ಅನುದಾನವನ್ನು, ಒಂದೇ ಮೊತ್ತದಲ್ಲಿ ಸಮಿತಿಗೆ ಮರುಪಾವತಿ ಮಾಡಲು ಮತ್ತು ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಇ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವೊಬ್ಬ ಅರ್ಜಿದಾರನಿಂದ ಬಾಕಿಯಿರುವ ಯಾವುದೇ ಮೊತ್ತವನ್ನು ವಸೂಲಿ ಮಾಡುವುದು;

(ಎಫ್) ಅನುದಾನದ ಸಮರ್ಪಕ ಬಳಕೆಯನ್ನು ಸೂಚಿಸುವ ಒಂದು ನಿಯತಕಾಲಿಕ ವರದಿಯನ್ನು ಸಲ್ಲಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು, ಅಥವಾ ಅರ್ಜಿದಾರನ ವರ್ಗವನ್ನು ಅಗತ್ಯಪಡಿಸುವುದು;

(ಜಿ) ಅದರ ಮುಂದೆ ಇಡಲಾದ ಒಂದು ಅರ್ಜಿಯನ್ನು, ಸಂಗತಿಗಳ ಅಸಂಗತತೆ, ಅಥವಾ ಮುಖ್ಯ ವಿಷಯಗಳ ವಿವರಗಳಲ್ಲಿ ನಿಖರತೆಯಿಲ್ಲದಿರುವ ಕಾರಣದಿಂದಾಗಿ ತಿರಸ್ಕರಿಸುವುದು;

(ಹೆಚ್) ಅರ್ಜಿದಾರನಿಗೆ, ಆತನ ಹಣಕಾಸಿನ ಸ್ಥಿತಿಗತಿಯನ್ನು ಮತ್ತು ವೃತ್ತಿಯ ಅಡಿಯಲ್ಲಿನ ಚಟುವಟಿಕೆಯ ಸ್ವರೂಪದ ಮಹತ್ವ ಮತ್ತು ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಒದಗಿಸಲಾದ ಹಣಕಾಸಿನ ನೆರವು ದುರುಪಯೋಗವಾಗತಕ್ಕದ್ದಲ್ಲ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ ಅನುದಾನದ ರೂಪದಲ್ಲಿ, ಕನಿಷ್ಟ ಹಣಕಾಸಿನ ನೆರವನ್ನು ಶಿಫಾರಸ್ಸು ಮಾಡುವುದು;

(ಐ) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಹೂಡಿಕೆಗಳನ್ನು ಮಾಡಬಹುದಾಗಿದ್ದಲ್ಲಿ, ಪ್ರಯೋಜನಕರ ಮತ್ತು ಸುರಕ್ಷಿತ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಅದರ ಪ್ರಕಾರವಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಜೆ) ಒಬ್ಬ ಅರ್ಜಿದಾರನು ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆಯ ಅವಧಿಗಾಗಿ ಅಗತ್ಯಪಡಿಸಿದ ಷರತ್ತುಗಳನ್ನು ಸಡಿಲಗೊಳಿಸುವುದು;

(ಕೆ) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯ ನಿರ್ವಹಣೆ, ಆಡಳಿತ ಮತ್ತು ಲೆಕ್ಕಪರಿಶೋಧನೆಗಾಗಿ ಮಾರ್ಗದರ್ಶಿಗಳನ್ನು ರೂಪಿಸುವುದು.

(9) ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ ಮತ್ತು ಭಾರತೀಯ ಮಾನಕಗಳ ಬ್ಯೂರೋ, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ವೆಚ್ಚಗಳನ್ನು ಭರಿಸುವ ಉದ್ದೇಶಕ್ಕಾಗಿ ಯೋಜನೆಗಳು ಅಥವಾ ಪ್ರಸ್ತಾವನೆಗಳನ್ನು ಪರಿಗಣಿಸುವುದಕ್ಕಾಗಿ ವಿಶಾಲ ಮಾರ್ಗದರ್ಶಿಗಳನ್ನು, ಸರಕು ಮತ್ತು ಸೇವೆಗಳ ತೆರಿಗೆ ಪರಿಷತ್‌ಗೆ ಶಿಫಾರಸ್ಸು ಮಾಡತಕ್ಕದ್ದು.

[38][**97ಎ. ಖುದ್ದು ಸಲ್ಲಿಕೆ ಮತ್ತು ಸಂಸ್ಕರಣೆ,–** ಇದರಲ್ಲಿ ನಿಯಮಿಸಲಾದ ಯಾವುದೇ ಪ್ರಕ್ರಿಯೆ ಅಥವಾ ಕಾರ್ಯವಿಧಾನಕ್ಕೆ, ಒಂದು ಅರ್ಜಿಯ, ತಿಳಿವಳಿಕೆ ಪತ್ರದ, ಉತ್ತರದ, ಘೋಷಣೆಯ, ವಿವರ ಪತ್ರದ ವಿದ್ಯುನ್ಮಾನ ರೀತಿಯಲ್ಲಿನ ಸಲ್ಲಿಕೆಯ ಯಾವುದೇ ಉಲ್ಲೇಖಕ್ಕೆ ಅಥವಾ ಸಾಮಾನ್ಯ ಪೋರ್ಟಲ್‌ನಲ್ಲಿ ಒಂದು ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರ ನೀಡಿಕೆಗೆ ಸಂಬಂಧಿಸಿದಂತೆ ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆ ಪ್ರಕ್ರಿಯೆ ಅಥವಾ ಕಾರ್ಯ ವಿಧಾನವು, ಸದರಿ ಅರ್ಜಿಯ, ತಿಳಿವಳಿಕೆ ಪತ್ರದ, ಘೋಷಣೆಯ, ವಿವರ ಪತ್ರದ ಖುದ್ದು ಸಲ್ಲಿಕೆ ಅಥವಾ ಸದರಿ ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರದ ಖುದ್ದು ನೀಡಿಕೆಯನ್ನು ಒಳಗೊಳ್ಳತಕ್ಕದ್ದು.]

ಅಧ್ಯಾಯ–XI
ಕರನಿರ್ಧರಣೆ ಮತ್ತು ಲೆಕ್ಕಪರಿಶೋಧನೆ

98. ತಾತ್ಕಾಲಿಕ ಕರನಿರ್ಧರಣೆ.– (1) ಪ್ರಕರಣ 60ರ ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ ತಾತ್ಕಾಲಿಕ ಆಧಾರದಲ್ಲಿ ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ ಕೋರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ಅರ್ಜಿಯನ್ನು ಆತನ ಕೋರಿಕೆಗೆ ಪೂರಕವಾದ ದಸ್ತಾವೇಜುಗಳೊಂದಿಗೆ, **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–01**ರಲ್ಲಿ, ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

(2) ಯುಕ್ತ ಅಧಿಕಾರಿಯು, ಉಪನಿಯಮ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆತನ ಕೋರೀಕೆಗೆ ಪೂರಕವಾದ ಹೆಚ್ಚುವರಿ ಮಾಹಿತಿ ಅಥವಾ ದಸ್ತಾವೇಜುಗಳನ್ನು ಒದಗಿಸುವಂತೆ ನೋಂದಾಯಿತ ವ್ಯಕ್ತಿಯನ್ನು ಅಗತ್ಯಪಡಿಸಿ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–02**ರಲ್ಲಿ ಒಂದು ಸೂಚನಾ ಪತ್ರವನ್ನು ನೀಡಬಹುದು ಮತ್ತು ಅರ್ಜಿದಾರನು ಸೂಚನಾ ಪತ್ರಕ್ಕೆ ಉತ್ತರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–03**ರಲ್ಲಿ ಸಲ್ಲಿಸತಕ್ಕದ್ದು, ಮತ್ತು ಆತನು ಹಾಗೆ ಅಪೇಕ್ಷಿಸಿದಲ್ಲಿ ಸದರಿ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಬಹುದು.

(3) ಯುಕ್ತ ಅಧಿಕಾರಿಯು ತಾತ್ಕಾಲಿಕ ಆಧಾರದಲ್ಲಿ ತೆರಿಗೆ ಸಂದಾಯವನ್ನು ಅನುಮತಿಸಿ, ಯಾವ ಮೌಲ್ಯ ಅಥವಾ ದರ ಅಥವಾ ಅವುಗಳೆರಡರ ಆಧಾರದಲ್ಲಿ ಕರನಿರ್ಧರಣೆಯನ್ನು ತಾತ್ಕಾಲಿಕವಾಗಿ ಅನುಮತಿಸಬೇಕು ಮತ್ತು ಬಾಂಡ್‌ನ್ನು ಬರೆದುಕೊಡಬೇಕಾದ ಮೊತ್ತ ಮತ್ತು ಬಾಂಡ್‌ನ ಅಡಿಯಲ್ಲಿ ವ್ಯಾಪ್ತವಾದ ಮೊತ್ತದ ಶೇಕಡ ಇಪ್ಪತ್ತೈದರಷ್ಟನ್ನು ಮೀರಿದಂತೆ ಒದಗಿಸಬೇಕಾದ ಭದ್ರತೆಯನ್ನು ಸೂಚಿಸಿ, ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–04**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು

(4) ನೋಂದಾಯಿತ ವ್ಯಕ್ತಿಯು, ಪ್ರಕರಣ 60ರ ಉಪಪ್ರಕರಣ (2)ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಬಾಂಡನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–05**ರಲ್ಲಿ, ಉಪನಿಯಮ (3)ರಲ್ಲಿ ನಿರ್ಧರಿಸಿದ ಒಂದು ಮೊತ್ತಕ್ಕಾಗಿ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯ ಜೊತೆಗೆ ಬರೆದುಕೊಡತಕ್ಕದ್ದು.

ಪರಂತು, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಯುಕ್ತ ಅಧಿಕಾರಿಗೆ ಒದಗಿಸಿದ ಒಂದು ಬಾಂಡನ್ನು, ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳ ಅಡಿಯಲ್ಲಿ ಒದಗಿಸಿದ ಒಂದು ಬಾಂಡ್ ಎಂದು ಪರಿಗಣಿಸತಕ್ಕದ್ದು.

ವಿವರಣೆ.– ಈ ನಿಯಮಗಳ ಉದ್ದೇಶಗಳಿಗಾಗಿ, **"ಮೊತ್ತ"** ಎಂಬ ಪದಾವಳಿಯು ಆ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಉಪಕರವನ್ನು ಒಳಗೊಳ್ಳತಕ್ಕದ್ದು.

(**5**) ಯುಕ್ತ ಅಧಿಕಾರಿಯು ಪ್ರಕರಣ 60ರ ಉಪಪ್ರಕರಣ (3)ರ ಅಡಿಯಲ್ಲಿ ಕರನಿರ್ಧರಣೆಯನು ಅಂತಿಮಗೊಳಿಸುವುದಕ್ಕಾಗಿ ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳನ್ನು ಕರೆ ಮಾಡುವುದಕ್ಕಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–06**ರಲ್ಲಿ ನೀಡತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯಿಂದ ಸಂದಾಯ ಮಾಡಬೇಕಾದ ಮೊತ್ತ ಅಥವಾ ಮರುಪಾವತಿ ಮಾಡಬಹುದಾದ ಮೊತ್ತವೇನಾದರು ಇದ್ದಲ್ಲಿ ಅದನ್ನು ನಿರ್ದಿಷ್ಟಪಡಿಸಿ, ಒಂದು ಅಂತಿಮ ಕರನಿರ್ಧರಣಾ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–07**ರಲ್ಲಿ ನೀಡತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ಆದೇಶದವನ್ನು ನೀಡಿದ ನಂತರ ಉಪನಿಯಮ (4)ರ ಅಡಿಯಲ್ಲಿ ಒದಗಿಸಿದ ಭದ್ರತೆಯನ್ನು ಬಿಡುಗಡೆಗೊಳಿಸುವುದಕ್ಕಾಗಿ ಅರ್ಜಿದಾರನು ಒಂದು ಅರ್ಜಿಯನ್ನು**ನಮೂನೆ ಜಿಎಸ್‌ಟಿ ಎಎಸ್‌ಎಂಟಿ–08**ರಲ್ಲಿ ಸಲ್ಲಿಸತಕ್ಕದ್ದು.

(7) ಯುಕ್ತ ಅಧಿಕಾರಿಯು, ಅರ್ಜಿದಾರನು ಉಪನಿಯಮ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂದಾಯ ಮಾಡಿದ್ದಾನೆ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ, ಉಪನಿಯಮ (4)ರ ಅಡಿಯಲ್ಲಿ ಒದಗಿಸಿದ ಭದ್ರತೆಯನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಉಪನಿಯಮ (6)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–09**ರಲ್ಲಿ ಒಂದು ಆದೇಶವನ್ನು ನೀಡತಕ್ಕದ್ದು.

---

[38]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಜೆ/2017) ದಿನಾಂಕ 03–01–2018ರ ಮೂಲಕ ಸೇರಿಸಲಾಗಿದೆ.

99. ರಿಟರ್ನುಗಳ ಸೂಕ್ಷ್ಮಪರಿಶೀಲನೆ.– (1) ನೊಂದಾಯಿತ ವ್ಯಕ್ತಿಯಿಂದ ಒದಗಿಸಲಾದ ಯಾವುದೇ ರಿಟರ್ನನ್ನು ಸೂಕ್ಷ್ಮಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ, ಯುಕ್ತ ಅಧಿಕಾರಿಯು, ಅದನ್ನು ತನ್ನಲ್ಲಿ ಲಭ್ಯವಿರುವ ಮಾಹಿತಿಯ ಉಲ್ಲೇಖದೊಂದಿಗೆ, ಪ್ರಕರಣ 61ರ ಉಪಬಂಧಗಳಿಗೆ ಅನುಸಾರವಾಗಿ ಸೂಕ್ಷ್ಮಪರಿಶೀಲನೆ ಮಾಡತಕ್ಕದ್ದು, ಯಾವುದೇ ನ್ಯೂನ್ಯತೆಯ ಸಂದರ್ಭದಲ್ಲಿ, ಅಂಥ ನ್ಯೂನ್ಯತೆಯನ್ನು ಆತನಿಗೆ ತಿಳಿಸಿ ಮತ್ತು ಅದಕ್ಕಾಗಿ ಸೂಚನಾ ಪತ್ರವನ್ನು ಜಾರಿಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳನ್ನು ಅಥವಾ ಆತನಿಂದ ಅನುಮತಿಸಬಹುದಾದ ಅಂಥ ಹೆಚ್ಚಿನ ಅವಧಿಯನ್ನು ಮೀರದಂತ ಅಂಥ ಸಮಯದ ಒಳಗಾಗಿ, ಆತನಿಂದ ವಿವರಣೆಯನ್ನು ಬಯಸಿ, ಸಾಧ್ಯವಾಗುವಲ್ಲಿ, ಅಂಥ ನ್ಯೂನ್ಯತೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ ಮತ್ತು ಯಾವುದೇ ಇತರೇ ಮೊತ್ತವನ್ನು ಪರಿಮಾಣೀಕರಿಸಿ ಆತನು ಸದರಿ ವ್ಯಕ್ತಿಗೆ ಒಂದು ಸೂಚನಾ ಪತ್ರವನ್ನು,**ನಮೂನೆ ಜಿಎಸ್‌ಟಿ ಎಎಸ್‌ಎಂಟಿ–10**ರಲ್ಲಿ ನೀಡತಕ್ಕದ್ದು.

(2) ನೋಂದಾಯಿತ ವ್ಯಕ್ತಿಯು ಉಪನಿಯಮ (1)ರ ಅಡಿಯಲ್ಲಿ ನೀಡಿದ ಸೂಚನಾಪತ್ರದಲ್ಲಿ ನಮೂದಿಸಲಾದ ನ್ಯೂನ್ಯತೆಯನ್ನ ಒಪ್ಪಿಕೊಳ್ಳಬಹುದ ಮತ್ತು ಅಂಥ ನ್ಯೂನ್ಯತೆಯಿಂದ ಉದ್ಭವಿಸಿದ ತೆರಿಗೆ, ಬಡ್ಡಿ ಮತ್ತು ಯಾವುದೇ ಇತರೇ ಮೊತ್ತವನ್ನು ಸಂದಾಯ ಮಾಡಬಹದು ಮತ್ತು ಅದನ್ನು ತಿಳಿಸಬಹುದು ಅಥವಾ ಯುಕ್ತ ಅಧಿಕಾರಿಗೆ ನ್ಯೂನತೆಗೆ ಒಂದು ವಿವರಣೆಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–11**ರಲ್ಲಿ ಒದಗಿಸಬಹುದು.

(3) ನೊಂದಾಯಿತ ವ್ಯಕ್ತಿಯಿಂದ ಉಪನಿಯಮ (2)ರ ಅಡಿಯಲ್ಲಿ ಒದಗಿಸಿದ ವಿವರಣೆ ಅಥವಾ ಸಲ್ಲಿಸಿದ ಮಾಹಿತಿ ಅಂಗೀಕಾರಾರ್ಹ ಎಂದು ಕಂಡುಬಂದಲ್ಲಿ, ಯುಕ್ತ ಅಧಿಕಾರಿಯು ಅದಕ್ಕನುಸಾರವಾಗಿ ಆತನಿಗೆ **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–12**ರಲ್ಲಿ ಮಾಹಿತಿ ನೀಡತಕ್ಕದ್ದು.

100. ಕೆಲವೊಂದು ಪ್ರಕರಣಗಳಲ್ಲಿ ಕರನಿರ್ಧರಣೆ.– (1) ಪ್ರಕರಣ 62ರ ಉಪಪ್ರಕರಣದ ಅಡಿಯಲ್ಲಿನ ಕರನಿರ್ಧರಣಾ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–13**ರಲ್ಲಿ ನೀಡತಕ್ಕದ್ದು.

(2) ಯುಕ್ತ ಅಧಿಕಾರಿಯು, ತೆರಿಗೆದಾಯಕ ವ್ಯಕ್ತಿಗೆ ಪ್ರಕರಣ 63ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–14**ರಲ್ಲಿ, ಅತ್ಯುತ್ತಮ ವಿವೇಚನಾ ನಿರ್ಣಯದ ಮೇರೆಗೆ ಕರನಿರ್ಧರಣೆಯನ್ನು ಮಾಡಲು ಪ್ರಸ್ತಾಪಿಸಿಲು ಇರುವ ಆಧಾರಾಂಶಗಳನ್ನು ಒಳಗೊಂಡಂತೆ ನೀಡತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ತನ್ನ ಉತ್ತರವನ್ನು ನೀಡಲು ಹದಿನೈದು ದಿನಗಳ ಕಾಲಾವಕಾಶವನ್ನು ನೀಡಿದ ನಂತರ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–15**ರಲ್ಲಿ ಹೊರಡಿಸತಕ್ಕದ್ದು.

(3) ಪ್ರಕರಣ 64ರ ಉಪಪ್ರಕರಣ (1)ರ ಅಡಿಯಲ್ಲಿನ ಕ್ಷಿಪ್ರ ಕರನಿರ್ಧರಣೆ ಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–16**ರಲ್ಲಿ ನೀಡತಕ್ಕದ್ದು.

(4) ಪ್ರಕರಣ 64ರ ಉಪಪ್ರಕರಣ (2)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಕ್ಷಿಪ್ರ ಕರನಿರ್ಧರಣೆ ಆದೇಶದ ಹಿಂಪಡೆಯುವಿಕೆಗಾಗಿ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–17**ರಲ್ಲಿಸಲ್ಲಿಸಬಹುದು.

(5) ಹಿಂಪಡೆಯುವಿಕೆಯ ಅಥವಾ ಸಂದರ್ಭಾನುಸಾರವಾಗಿ ಪ್ರಕರಣ 64ರ ಉಪಪ್ರಕರಣ (2)ರ ಅಡಿಯಲ್ಲಿನ ಅರ್ಜಿಯ ತಿರಸ್ಕರಣೆಯಆದೇಶವನ್ನು **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–18**ರಲ್ಲಿ ನೀಡತಕ್ಕದ್ದು.

101. ಲೆಕ್ಕಪರಿಶೋಧನೆ.– ಪ್ರಕರಣ 65ರ ಉಪಪ್ರಕರಣ (1)ರ ಅಡಿಯಲ್ಲಿ ನಡೆಸಬೇಕಾದ ಲೆಕ್ಕಪರಿಶೋಧನೆಯ ಅವಧಿ ಒಂದು ಹಣಕಾಸಿನ ವರ್ಷ ಅಥವಾ ಅದರ ಗುಣಕಗಳಾಗಿರತಕ್ಕದ್ದು.

(2) ಪ್ರಕರಣ 65ರ ಉಪಬಂಧಗಳಿಗೆ ಅನುಸಾರವಾಗಿ ಒಬ್ಬ ನೋಂದಾಯಿತ ವ್ಯಕ್ತಿಯ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ನಿರ್ಧರಿಸಲಾಗಿದ್ದಲ್ಲಿ, ಯುಕ್ತ ಅಧಿಕಾರಿಯು, ಸದರಿ ಪ್ರಕರಣದ ಉಪಪ್ರಕರಣ (3)ರ ಉಪಬಂಧಗಳಿಗೆ ಅನುಸಾರವಾಗಿ ಒಂದು ಸೂಚನಾ ಪತ್ರವನ್ನು **ನಮೂನೆ ಜಿಎಸ್‌ಟಿ ಎಡಿಟಿ–01**ರಲ್ಲಿ ನೀಡತಕ್ಕದ್ದು.

(3) ನೋಂದಾಯಿತ ವ್ಯಕ್ತಿಯ ದಾಖಲೆಗಳು ಮತ್ತು ಲೆಕ್ಕಪತ್ರ ಪುಸ್ತಕಗಳ ಲೆಕ್ಕಪರಿಶೋಧನೆಯನ್ನು ನಡೆಸಲು ಪ್ರಾಧಿಕೃತನಾದ ಯುಕ್ತ ಅಧಿಕಾರಿಯು, ಆತನ ಜೊತೆಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡದ ನೆರವಿನೊಂದಿಗೆ ಲೆಕ್ಕಪತ್ರ ಪುಸ್ತಕಗಳನ್ನು ಅದರ ಆಧಾರದಲ್ಲಿ ನಿರ್ವಹಿಸಲಾಗಿರುವ ದಸ್ತಾವೇಜುಗಳನ್ನು ಮತ್ತು ಅಧಿನಿಯಮದ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಅಡಿಯಲ್ಲಿ ಒದಗಿಸಿದ ರಿಟರ್ನುಗಳು ಮತ್ತು ವಿವರ ಪತ್ರಗಳನ್ನು, ವಹಿವಾಟಿನ ಸರಿತನವನ್ನು, ಕ್ಲೇಮು ಮಾಡಿರುವ ವಿನಾಯಿತಿಗಳು ಮತ್ತು ಕಡಿತಗಳನ್ನು, ಸರಕು ಮತ್ತು ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಅನ್ವಯಿಸಿರುವ ತೆರಿಗೆ ದರ, ಉಪಯೋಗಿಸಿದ ಮತ್ತು ಬಳಕೆ ಮಾಡಿದ ಹೂಡುವಳಿ ತೆರಿಗೆ ಜಮೆ, ಕ್ಲೇಮು ಮಾಡಿರುವ ಮರುಪಾವತಿ, ಮತ್ತು ಇತರೇ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅಭಿಪ್ರಾಯೋಕ್ತಿಗಳನ್ನು ತನ್ನ ಲೆಕ್ಕಪರಿಶೋಧನೆಯ ಟಿಪ್ಪಣಿಗಳಲ್ಲಿ ದಾಖಲಿಸತಕ್ಕದ್ದು.

(4) ಯುಕ್ತ ಅಧಿಕಾರಿಯು, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತೆ, ಗಮನಿಸಿದ ನ್ಯೂನತೆಗಳನ್ನು ನೋಂದಾಯಿತ ವ್ಯಕ್ತಿಗೆ ತಿಳಿಸಬಹುದು ಮತ್ತು ಸದರಿ ವ್ಯಕ್ತಿಯು ತನ್ನ ಉತ್ತರವನ್ನು ಸಲ್ಲಿಸಬಹುದು ಮತ್ತು ಒದಗಿಸಿದ ಉತ್ತರವನ್ನು ಯುಕ್ತ ಅಧಿಕಾರಿಯು ಸೂಕ್ತವಾಗಿ ಪರಿಗಣಿಸಿದ ನಂತರ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು ಅಂತಿಮಗೊಳಿಸತಕ್ಕದ್ದು.

(5) ಲೆಕ್ಕಪರಿಶೋಧನೆಯ ಮುಕ್ತಾಯದ ನಂತರ, ಯುಕ್ತ ಅಧಿಕಾರಿಯು, ಲೆಕ್ಕಪರಿಶೋಧನೆಯ ನಿರ್ಣಯಗಳನ್ನು, ಪ್ರಕರಣ 65ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿತ ವ್ಯಕ್ತಿಗೆ **ನಮೂನೆ ಜಿಎಸ್‌ಟಿ ಎಡಿಟಿ–02**ರಲ್ಲಿ ತಿಳಿಸತಕ್ಕದ್ದು.

102. ವಿಶೇಷ ಲೆಕ್ಕಪರಿಶೋಧನೆ.– (1)ಪ್ರಕರಣ 66ರ ಉಪಬಂಧಗಳಿಗೆ ಅನುಸಾರವಾಗಿ ವಿಶೇಷ ಲೆಕ್ಕಪರಿಶೋಧನೆಯನ್ನು ನಡೆಸುವುದು ಅಗತ್ಯವಿದ್ದಲ್ಲಿ, ಸದರಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು, ನೋಂದಾಯಿತ ವ್ಯಕ್ತಿಗೆ, **ನಮೂನೆ ಜಿಎಸ್‌ಟಿ ಎಡಿಟಿ–03**ರಲ್ಲಿ, ಒಂದು ನಿರ್ದೇಶನವನ್ನು, ಆತನ ಸದರಿ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವಂತೆ ನೀಡತಕ್ಕದ್ದು.

(2) ವಿಶೇಷ ಲೆಕ್ಕಪರಿಶೋಧನೆಯ ಮುಕ್ತಾಯದ ನಂತರ, ನೋಂದಾಯಿತ ವ್ಯಕ್ತಿಗೆ ವಿಶೇಷ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು, **ನಮೂನೆ ಜಿಎಸ್‌ಟಿ ಎಡಿಟಿ–04**ರಲ್ಲಿ ತಿಳಿಸತಕ್ಕದ್ದು.

ಅಧ್ಯಾಯ –XII
ಪೂರ್ವಭಾವಿ ನಿರ್ಣಯ

[39][**103. ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಸದಸ್ಯರುಗಳ ಅರ್ಹತೆ ಮತ್ತು ನೇಮಕಾತಿ.**– ಸರ್ಕಾರವು ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿಗಳನ್ನು ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕಾತಿ ಮಾಡತಕ್ಕದ್ದು.]

104. ಪೂರ್ವಭಾವಿ ನಿರ್ಣಯದ ಪ್ರಾಧಿಕಾರಕ್ಕೆ ಅರ್ಜಿಯ ನಮೂನೆ ಮತ್ತು ವಿಧಾನ.– (1) ಪ್ರಕರಣ 97ರ ಉಪಪ್ರಕರಣ (1)ರ ಅಡಿಯಲ್ಲಿ ಪೂರ್ವಭಾವಿ ನಿರ್ಣಯಕ್ಕಾಗಿ **ನಮೂನೆ ಜಿಎಸ್‌ಟಿ ಎಆರ್‌ಎ–1ರಲ್ಲಿ** ಒಂದು ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅದು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಠೇವಣಿ ಮಾಡಬೇಕಾದ ಐದು ಸಾವಿರ ರೂಪಾಯಿಗಳ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

(2) ಉಪನಿಯಮ (1)ರಲ್ಲಿ ಉಲ್ಲೇಖಿಸಲಾದ ಅರ್ಜಿಯು, ಅದರಲ್ಲಿ ಒಳಗೊಂಡಿರುವ ಪರಿಶೀಲನೆ ಮತ್ತು ಅಂಥ ಅರ್ಜಿಯ ಜೊತೆಯಲ್ಲಿರುವ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳಿಗೆ ನಿಯಮ 26ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಸಹಿಯಾಗಿರತಕ್ಕದ್ದು.

105. ಪ್ರಾಧಿಕಾರದಿಂದ ಉಚ್ಚರಿತವಾದ ಪೂರ್ವಭಾವಿ ನಿರ್ಣಯಗಳ ಪ್ರತಿಗಳ ಪ್ರಮಾಣೀಕರಣ.–ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು, ಅದರ ಮೂಲಪ್ರತಿಯ ಯಥಾಪ್ರತಿ ಎಂದು ಪೂರ್ವಭಾವಿ ನಿರ್ಣಯದ ಪ್ರಾಧಿಕಾರದ ಯಾವೊಬ್ಬ ಸದಸ್ಯನಿಂದ ಪ್ರಮಾಣೀಕರಿಸತಕ್ಕದ್ದು.

106. ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರಕ್ಕೆ ಅಪೀಲಿನ ನಮೂನೆ ಮತ್ತು ವಿಧಾನ.– (1) ಪ್ರಕರಣ 98ರ ಉಪಪ್ರಕರಣ (6)ರ ಅಡಿಯಲ್ಲಿ ನೀಡಲಾದ ಪೂರ್ವಭಾವಿ ನಿರ್ಣಯದ ವಿರುದ್ಧವಾಗಿ ಒಂದು ಅಪೀಲನ್ನು, ಅರ್ಜಿದಾರನು, **ನಮೂನೆ ಜಿಎಸ್‌ಟಿ ಎಆರ್‌ಎ–2ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅದು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಠೇವಣಿ ಮಾಡಬೇಕಾದ ಹತ್ತು ಸಾವಿರ ರೂಪಾಯಿಗಳ ಶುಲ್ಕದಿಂದ ಜೊತೆಗೂಡಿರತಕ್ಕದ್ದು.

(2) ಪ್ರಕರಣ 98ರ ಉಪಪ್ರಕರಣ (6)ರ ಅಡಿಯಲ್ಲಿ ನೀಡಲಾದ ಪೂರ್ವಭಾವಿ ನಿರ್ಣಯದ ವಿರುದ್ಧವಾಗಿ ಒಂದು ಅಪೀಲನ್ನು, ಸಂಬಂದಪಟ್ಟ ಅಧಿಕಾರಿ ಅಥವಾ ಪ್ರಕರಣ 100ರಲ್ಲಿ ಉಲ್ಲೇಖಿಸಲಾದ ಕ್ಷೇತ್ರವ್ಯಾಪ್ತಿಯ ಅಧಿಕಾರಿಯು **ನಮೂನೆ ಜಿಎಸ್‌ಟಿ ಎಆರ್‌ಎ–3ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ ಹಾಕತಕ್ಕದ್ದು ಮತ್ತು ಅಪೀಲನ್ನು ಸಲ್ಲಿಸುವುದಕ್ಕಾಗಿ ಸದರಿ ಅಧಿಕಾರಿಯು ಯಾವುದೇ ಶುಲ್ಕವನ್ನು ಸಂದಾಯ ಮಾಡತಕ್ಕದ್ದಲ್ಲ.

(3) ಉಪನಿಯಮ (1)ರಲ್ಲಿ ಅಥವಾ ಉಪನಿಯಮ (2)ರಲ್ಲಿ ಉಲ್ಲೇಖಿಸಲಾದ ಅಪೀಲು, ಅದರಲ್ಲಿ ಒಳಗೊಂಡಿರುವ ಪರಿಶೀಲನೆ ಮತ್ತು ಅಂಥ ಅಪೀಲಿನ ಜೊತೆಯಲ್ಲಿರುವ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳನ್ನು ಕೆಳಕಂಡಂತೆ ಸಹಿಯಾಗಿರತಕ್ಕದ್ದು,–

(ಎ) ಸಂಬಂದಪಟ್ಟ ಅಧಿಕಾರಿ ಅಥವಾ ಕ್ಷೇತ್ರವ್ಯಾಪ್ತಿಯ ಅಧಿಕಾರಿಯ ಸಂದರ್ಭದಲ್ಲಿ, ಅಂಥ ಅಧಿಕಾರಿಯಿಂದ ಲಿಖಿತವಾಗಿ ಪ್ರಾಧಿಕೃತನಾದ ಒಬ್ಬ ಅಧಿಕಾರಿಯಿಂದ; ಮತ್ತು

(ಬಿ) ಅರ್ಜಿದಾರನ ಸಂದರ್ಭದಲ್ಲಿ, ನಿಯಮ 26ರಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ

107. ಪ್ರಾಧಿಕಾರದಿಂದ ಉಚ್ಚರಿತವಾದ ಪೂರ್ವಭಾವಿ ನಿರ್ಣಯಗಳ ಪ್ರತಿಗಳ ಪ್ರಮಾಣೀಕರಣ.– ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರದಿಂದ ಉಚ್ಚರಿತವಾದ ಮತ್ತು ಸದಸ್ಯರುಗಳಿಂದ ಯುಕ್ತವಾಗಿ ಸಹಿ ಮಾಡಿದ ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು, ಅಧಿನಿಯಮದ ಪ್ರಕರಣ 101ರ ಉಪಪ್ರಕರಣ (4)ರ ಉಪಬಂಧಗಳಿಗೆ ಅನುಸಾರವಾಗಿ ಕೆಳಕಂಡವರುಗಳಿಗೆ ಕಳುಹಿಸಿಕೊಡತಕ್ಕದ್ದು–

(ಎ) ಅರ್ಜಿದಾರ ಮತ್ತು ಅಪೀಲುದಾರ;

(ಬಿ) ಕೇಂದ್ರ ತೆರಿಗೆ ಮತ್ತು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂಬಂಧಪಟ್ಟ ಅಧಿಕಾರಿ;

(ಸಿ) ಕೇಂದ್ರ ತೆರಿಗೆ ಮತ್ತು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಅಧಿಕಾರಿ; ಮತ್ತು

(ಡಿ)ಪ್ರಾಧಿಕಾರ.

---

[39]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಸಿ/2017) ದಿನಾಂಕ 29–08–2017ರ ಮೂಲಕ ಪ್ರತಿಯೋಜಿಸಲಾಗಿದೆ.

[40][**107ಎ. ಖುದ್ದು ಸಲ್ಲಿಕೆ ಮತ್ತು ಸಂಸ್ಕರಣೆ,–** ಇದರಲ್ಲಿ ನಿಯಮಿಸಲಾದ ಯಾವುದೇ ಪ್ರಕ್ರಿಯೆ ಅಥವಾ ಕಾರ್ಯವಿಧಾನಕ್ಕೆ, ಒಂದು ಅರ್ಜಿಯ, ತಿಳಿಸುವಿಕೆಯ, ಉತ್ತರದ, ಘೋಷಣೆಯ, ವಿವರ ಪತ್ರದ ವಿದ್ಯುನ್ಮಾನ ರೀತಿಯಲ್ಲಿನ ಸಲ್ಲಿಕೆಯ ಯಾವುದೇ ಉಲ್ಲೇಖಕ್ಕೆ ಅಥವಾ ಸಾಮಾನ್ಯ ಪೋರ್ಟಲ್‌ನಲ್ಲಿ ಒಂದು ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರ ನೀಡಿಕೆಗೆ ಸಂಬಂಧಿಸಿದಂತೆ ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆ ಪ್ರಕ್ರಿಯೆ ಅಥವಾ ಕಾರ್ಯ ವಿಧಾನವು, ಸದರಿ ಅರ್ಜಿಯ, ತಿಳಿಸುವಿಕೆಯ, ಘೋಷಣೆಯ, ವಿವರ ಪತ್ರದ ಖುದ್ದು ಸಲ್ಲಿಕೆ ಅಥವಾ ಸದರಿ ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರದ ಖುದ್ದು ನೀಡಿಕೆಯನ್ನು ಒಳಗೊಳ್ಳತಕ್ಕದ್ದು.]

ಅಧ್ಯಾಯ–XIII
ಅಪೀಲುಗಳು ಮತ್ತು ಪುನರೀಕ್ಷಣೆ

108. ಅಪೀಲು ಪ್ರಾಧಿಕಾರಕ್ಕೆ ಅಪೀಲು.– (1) ಪ್ರಕರಣ 107ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಒಂದು ಅಪೀಲನ್ನು **ನಮೂನೆ ಜಿಎಸ್‌ಟಿ ಎಪಿಎಲ್–01**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ ಸಲ್ಲಿಸತಕ್ಕದ್ದು, ಮತ್ತು ಅಪೀಲುದಾರನಿಗೆ ಕೂಡಲೇ ಒಂದು ತಾತ್ಕಾಲಿಕ ಸ್ವೀಕೃತಿಯನ್ನು ನೀಡತಕ್ಕದ್ದು.

(2) **ನಮೂನೆ ಜಿಎಸ್‌ಟಿ ಎಪಿಎಲ್–01**ರಲ್ಲಿ ಒಳಗೊಂಡಂತೆ ಅಪೀಲಿನ ಕಾರಣಾಧಾರಗಳು ಮತ್ತು ಪರಿಶೀಲನೆಯ ನಮೂನೆಯನ್ನು ನಿಯಮ 26ರಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಸಹಿಮಾಡಿರತಕ್ಕದ್ದು.

(3) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ತದನಂತರ ಅಪೀಲು ಪ್ರಾಧಿಕಾರ ಅಥವಾ ಆತನಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಳಿಸಿದ ಒಬ್ಬ ಅಧಿಕಾರಿಯು, ಅಪೀಲು ಸಂಖ್ಯೆಯನ್ನು ಸೂಚಿಸಿದ ಒಂದು ಅಂತಿಮ ಸ್ವೀಕೃತಿಯನ್ನು, **ನಮೂನೆ ಜಿಎಸ್‌ಟಿ ಎಪಿಎಲ್–02**ರಲ್ಲಿ ನೀಡತಕ್ಕದ್ದು.

ಪರಂತು, ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್–01**ನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ತಾತ್ಕಾಲಿಕ ಸ್ವೀಕೃತಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು ಮತ್ತು ಸದರಿ ಪ್ರತಿಯನ್ನು ಏಳು ದಿನಗಳ ನಂತರ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯದಿನಾಂಕವು ಅಂಥ ಪ್ರತಿಯನ್ನು ಸಲ್ಲಿಸಿದ ದಿನಾಂಕವಾಗಿರತಕ್ಕದ್ದು

ವಿವರಣೆ.– ಈ ನಿಯಮದ ಉಪಬಂಧಗಳಿಗಾಗಿ, ಅಪೀಲು ಸಂಖ್ಯೆಯನ್ನು ಸೂಚಿಸಿದ ಒಂದು ಅಂತಿಮ ಸ್ವೀಕೃತಿಯನ್ನು ನೀಡಿದಾಗ ಮಾತ್ರ ಅಪೀಲು ಸಲ್ಲಿಕೆಯಾಗಿದೆ ಎಂದು ಪರಿಗಣಿಸತಕ್ಕದ್ದು.

109. ಅಪೀಲು ಪ್ರಾಧಿಕಾರಕ್ಕೆ ಅರ್ಜಿ.– (1) ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ಅಪೀಲು ಪ್ರಾಧಿಕಾರಕ್ಕೆ ಒಂದು ಅರ್ಜಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್–03**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ ಸಲ್ಲಿಸತಕ್ಕದ್ದು,

(2) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಮತ್ತು ತದನಂತರ ಅಪೀಲು ಪ್ರಾಧಿಕಾರ ಅಥವಾ ಆತನಿಂದ ಈ ಸಂಬಂಧದಲ್ಲಿ ಪ್ರಾಧಿಕೃತಗೊಳಿಸಿದ ಒಬ್ಬ ಅಧಿಕಾರಿಯಿಂದ, ಅಪೀಲು ಸಂಖ್ಯೆಯನ್ನು ಸೃಷ್ಟಿಸತಕ್ಕದ್ದು.

[41][**109ಎ.ಅಪೀಲು ಪ್ರಾಧಿಕಾರದ ನೇಮಕಾತಿ–** (1) ಈ ಅಧಿನಿಯಮ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಯಾವುದೇ ನಿರ್ಣಯ ಅಥವಾ ಆದೇಶದಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಅಪೀಲನ್ನು ಕೆಳಕಂಡವರುಗಳಿಗೆ–

(ಎ) ಅಂಥ ನಿರ್ಣಯ ಅಥವಾ ಆದೇಶವು ಜಂಟಿ ಆಯುಕ್ತರಿಂದ ಹೊರಡಿಸಲಾಗಿದ್ದಲ್ಲಿ, ಅಪರ ಆಯುಕ್ತರು (ಅಪೀಲುಗಳು);

(ಬಿ) ಅಂಥ ನಿರ್ಣಯ ಅಥವಾ ಆದೇಶವು ಉಪ ಅಥವಾ ಸಹಾಯಕ ಆಯುಕ್ತರು ಅಥವಾ ವಾಣಿಜ್ಯ ತೆರಿಗೆ ಅಧಿಕಾಯಿಂದ ಹೊರಡಿಸಲಾಗಿದ್ದಲ್ಲಿ, ಜಂಟಿ ಆಯುಕ್ತರು (ಅಪೀಲುಗಳು)ರವರಿಗೆ

ಸದರಿ ನಿರ್ಣಯ ಅಥವಾ ಆದೇಶವು ಅಂಥ ವ್ಯಕ್ತಿಗೆ ತಿಳಿಸಲ್ಪಟ್ಟ ದಿನಾಂಕದಿಂದ ಮೂರು ತಿಂಗಳುಗಳ ಒಳಗಾಗಿ ಸಲ್ಲಿಸಬಹುದು.

(2) ಈ ಅಧಿನಿಯಮ ಅಥವಾ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಯಾವುದೇ ನಿರ್ಣಯ ಅಥವಾ ಆದೇಶದ ವಿರುದ್ಧವಾಗಿ ಅಪೀಲನ್ನು ಸಲ್ಲಿಸಲು ಪ್ರಕರಣ 107ರ ಉಪಪ್ರಕರಣ (2)ರ ಅಡಿಯಲ್ಲಿ ನಿರ್ದೇಶಿತನಾದ ಒಬ್ಬ ಅಧಿಕಾರಿಯು ಅಪೀಲನ್ನು –

(ಎ) ಅಂಥ ನಿರ್ಣಯ ಅಥವಾ ಆದೇಶವು ಜಂಟಿ ಆಯುಕ್ತರಿಂದ ಹೊರಡಿಸಲಾಗಿದ್ದಲ್ಲಿ, ಅಪರ ಆಯುಕ್ತ (ಅಪೀಲುಗಳು) ರವರಿಗೆ;

(ಬಿ) ಅಂಥ ನಿರ್ಣಯ ಅಥವಾ ಆದೇಶವು ಉಪ ಅಥವಾ ಸಹಾಯಕ ಆಯುಕ್ತರು ಅಥವಾ ವಾಣಿಜ್ಯ ತೆರಿಗೆ ಅಧಿಕಾಯಿಂದ ಹೊರಡಿಸಲಾಗಿದ್ದಲ್ಲಿ, ಜಂಟಿ ಆಯುಕ್ತ (ಅಪೀಲುಗಳು)ರವರಿಗೆ

---

[40]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಜೆ/2017) ದಿನಾಂಕ 03–01–2018ರ ಮೂಲಕ ಸೇರಿಸಲಾಗಿದೆ.

[41]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಜೆ/2017) ದಿನಾಂಕ 03–01–2018ರ ಮೂಲಕ ಸೇರಿಸಲಾಗಿದೆ.

ಸದರಿ ನಿರ್ಣಯ ಅಥವಾ ಆದೇಶವು ತಿಳಿಸಲ್ಪಟ್ಟ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಸಲ್ಲಿಸಬಹುದು.]

110. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.– (1) ಪ್ರಕರಣ 112ರ ಉಪಪ್ರಕರಣ (1)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಒಂದು ಅಪೀಲನ್ನು **ನಮೂನೆ ಜಿಎಸ್‌ಟಿ ಎಪಿಎಲ್–05**ರಲ್ಲಿ, ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ, ವಿದ್ಯುನ್ಮಾನ ರೀತಿಯಾಗಲಿ ಅಥವಾ ರಿಜಿಸ್ಟ್ರಾರ್‌ರಿಂದ ಅಧಿಸೂಚಿಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು, ಮತ್ತು ಅಪೀಲುದಾರನಿಗೆ ಕೂಡಲೇ ಒಂದು ತಾತ್ಕಾಲಿಕ ಸ್ವೀಕೃತಿಯನ್ನು ನೀಡತಕ್ಕದ್ದು.

(2) ಪ್ರಕರಣ 112ರ ಉಪಪ್ರಕರಣ (5)ರ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಒಂದು ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು **ನಮೂನೆ ಜಿಎಸ್‌ಟಿ ಎಪಿಎಲ್–06**ರಲ್ಲಿ, ವಿದ್ಯುನ್ಮಾನ ರೀತಿಯಾಗಲಿ ಅಥವಾ ರಿಜಿಸ್ಟ್ರಾರ್‌ರಿಂದ ಅಧಿಸೂಚಿಸಬಹುದಾದಂತೆ ಅನ್ಯಥಾ ರೀತಿಯಲ್ಲಾಗಲಿ, ಸಲ್ಲಿಸತಕ್ಕದ್ದು,

(3) ಅಪೀಲು ಮತ್ತು ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು, ನಿಯಮ 26ರಲ್ಲಿ ನಿರ್ದಿಷ್ಟಪಡಿಸಿರುವ ವಿಧಾನದಲ್ಲಿ ಸಹಿಮಾಡಿರತಕ್ಕದ್ದು.

(4) ಅದರ ವಿರುದ್ಧವಾಗಿ ಅಪೀಲು ಮಾಡಲಾಗಿರುವ ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು ಉಪನಿಯಮ (5)ರಲ್ಲಿ ನಿರ್ದಿಷ್ಟಪಡಿಸಿದ ಶುಲ್ಕದೊಂದಿಗೆ, ಉಪನಿಯಮ (1)ರ ಅಡಿಯಲ್ಲಿ, ಅಪೀಲನ್ನು ಸಲ್ಲಿಸಿದ ಏಳು ದಿನಗಳ ಒಳಗಾಗಿ ರಿಜಿಸ್ಟ್ರಾರ್‌ಗೆ ಸಲ್ಲಿಸತಕ್ಕದ್ದು ಮತ್ತು ತದನಂತರ ರಿಜಿಸ್ಟ್ರಾರ್‌ರಿಂದ, ಅಪೀಲು ಸಂಖ್ಯೆಯನ್ನು ಸೂಚಿಸಿರುವ ಒಂದು ಅಂತಿಮ ಸ್ವೀಕೃತಿಯನ್ನು, **ನಮೂನೆ ಜಿಎಸ್‌ಟಿ ಎಪಿಎಲ್–02**ರಲ್ಲಿ ನೀಡತಕ್ಕದ್ದು.

ಪರಂತು, ನಿರ್ಣಯ ಅಥವಾ ಆದೇಶದ ಪ್ರಮಾಣೀಕರಿಸಿದ ಪ್ರತಿಯನ್ನು **ನಮೂನೆ ಜಿಎಸ್‌ಟಿ ಎಪಿಎಲ್–05**ನ್ನು ಸಲ್ಲಿಸಿದ ಏಳುದಿನಗಳ ಒಳಗಾಗಿ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ತಾತ್ಕಾಲಿಕ ಸ್ವೀಕೃತಿಯನ್ನು ನೀಡಿದ ದಿನಾಂಕವಾಗಿರತಕ್ಕದ್ದು ಮತ್ತು ಸದರಿ ಪ್ರತಿಯನ್ನು ಏಳು ದಿನಗಳ ನಂತರ ಸಲ್ಲಿಸಿದ್ದಲ್ಲಿ, ಅಪೀಲಿನ ಸಲ್ಲಿಸುವಿಕೆಯ ದಿನಾಂಕವು ಅಂಥ ಪ್ರತಿಯನ್ನು ಸಲ್ಲಿಸಿದ ದಿನಾಂಕವಾಗಿರತಕ್ಕದ್ದು

ರಾಜ್ಯದ ಸಂಚಿತ ನಿಧಿಯಿಂದ ವೆಚ್ಚವನ್ನು ಭರಿಸುತ್ತಿರುವ ಹಣಕಾಸು ಮತ್ತು ಇತರ ಸಬ್ಸಿಡಿಗಳು, ಪ್ರಯೋಜನಗಳು ಹಾಗೂ ಸೇವೆಗಳನ್ನು ಕರ್ನಾಟಕ ರಾಜ್ಯದಲ್ಲಿ ವಾಸಮಾಡುತ್ತಿರುವ ವ್ಯಕ್ತಿಗಳಿಗೆ ಉದ್ದೇಶಿತ ವಿತರಣೆಗಾಗಿ ಆಧಾರ್ ಅನ್ನು ಒಂದು ಏಕೈಕ ಗುರುತಿಸುವಿಕೆಯಾಗಿ ಬಳಸಿಕೊಂಡು, ದಕ್ಷ, ಪಾರದರ್ಶಕ ಮತ್ತು ಒಂದು ಉತ್ತಮ ಆಡಳಿತ ಕ್ರಮವನ್ನಾಗಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಕಾನೂನನ್ನು ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮವಾಗಲಿ ಎಂದರೆ.–

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–(1) ಈ ಅಧಿನಿಯಮವನ್ನು ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ರಾಜ್ಯ ಸರ್ಕಾರದ ಏಜೆನ್ಸಿ"** ಎಂದರೆ, ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಮತ್ತು ಅದರ ನಿಯಂತ್ರಣದಲ್ಲಿರುವ ಯಾವುದೇ ಇತರ ನಿಕಾಯವನ್ನು ಒಳಗೊಂಡಂತೆ ಕರ್ನಾಟಕ ರಾಜ್ಯದಲ್ಲಿನ ಯಾವುದೇ ಕೇಂದ್ರ ಅಥವಾ ರಾಜ್ಯ ಕಾನೂನಿನ ಮೂಲಕ ಸ್ಥಾಪನೆಯಾದ ಅಥವಾ ರಚನೆಯಾದ ಯಾವುದೇ ಪ್ರಾಧಿಕಾರ ಅಥವಾ ನಿಕಾಯ ಮತ್ತು ಇದು ರಾಜ್ಯ ಸರ್ಕಾರದ ಪ್ರಧಾನ ನಿಯಂತ್ರಣದಲ್ಲಿ ರಚನೆಯಾದ ಮತ್ತು ಆಡಳಿತ ಹೊಂದಿರುವ ನಿಕಾಯಗಳನ್ನು ಒಳಗೊಳ್ಳುತ್ತದೆ;

(ಬಿ) **"ಪ್ರಯೋಜನ"** ಎಂದರೆ, ಒಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಒದಗಿಸುವ ಯಾವುದೇ ಅನುಕೂಲ, ಕೊಡುಗೆ, ಬಹುಮಾನ, ಪರಿಹಾರ ಅಥವಾ ನಗದು ಅಥವಾ ಇತರ ರೂಪದಲ್ಲಿನ ಸಂದಾಯ ಹಾಗೂ ಇದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಪ್ರಯೋಜನಗಳನ್ನು ಒಳಗೊಳ್ಳುತ್ತದೆ;

(ಸಿ) "ಕೇಂದ್ರ ಅಧಿನಿಯಮ" ಎಂದರೆ, ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 18);

(ಡಿ) "ರಾಜ್ಯದ ಸಂಚಿತ ನಿಧಿ" ಎಂದರೆ, ಕರ್ನಾಟಕ ರಾಜ್ಯದ ಸಂಚಿತ ನಿಧಿ;

(ಇ) "ಸರ್ಕಾರ" ಅಥವಾ "ರಾಜ್ಯ ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಫ್) "ಸೇವೆಗಳು" ಎಂದರೆ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಯಾವುದೇ ರೂಪದಲ್ಲಿ ಒದಗಿಸುವ ಯಾವುದೇ ಅವಕಾಶ, ಸೌಲಭ್ಯ, ಉಪಯುಕ್ತತೆ ಅಥವಾ ಯಾವುದೇ ಇತರ ನೆರವು ಹಾಗೂ ಇದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಇತರ ಸೇವೆಗಳನ್ನು ಒಳಗೊಳ್ಳುತ್ತದೆ;

(ಜಿ) "ಸಬ್ಸಿಡಿ" ಎಂದರೆ, ಒಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ನಗದು ಅಥವಾ ಯಾವುದೇ ರೂಪದಲ್ಲಿ ನೀಡುವ ಯಾವುದೇ ವಿಧದ ನೆರವು, ಬೆಂಬಲ, ಅನುದಾನ, ಧನಸಹಾಯ ಅಥವಾ ವಿನಿಯೋಗ ಹಾಗೂ ಇದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಸಬ್ಸಿಡಿಗಳನ್ನು ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಮೇಲೆ ಎಲ್ಲಿಯೂ ಪರಿಭಾಷಿಸದೆ ಇರುವ ಪದಗಳು ಮತ್ತು ಪದಾವಳಿಗಳು ಅನುಕ್ರಮವಾಗಿ ಕೇಂದ್ರ ಅಧಿನಿಯಮದಲ್ಲಿ ಅವುಗಳಿಗೆ ನೀಡಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

3. ಕೆಲವು ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳು ಇತ್ಯಾದಿಗಳನ್ನು ಪಡೆಯುವುದಕ್ಕಾಗಿ ಆಧಾರ್ ಸಂಖ್ಯೆಯ ರುಜುವಾತಿನ ಅವಶ್ಯಕತೆ.– ರಾಜ್ಯದ ಸಂಚಿತ ನಿಧಿ ಅಥವಾ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಯ ಮೂಲಕ ರಚಿಸಿದ ಯಾವುದೇ ನಿಧಿಯಿಂದ ಸಂಪೂರ್ಣವಾಗಿ ಭರಿಸುವ ಮೂಲಕ ಅಥವಾ ಸ್ವೀಕರಿಸುವ ಮೂಲಕ ಮಾಡಿದ ವೆಚ್ಚದ ಭಾಗವಾಗುವ ಸಬ್ಸಿಡಿ, ಪ್ರಯೋಜನ ಅಥವಾ ಸೇವೆಯನ್ನು ಪಡೆಯುವುದಕ್ಕಾಗಿ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಯು ಒಬ್ಬ ವ್ಯಕ್ತಿಯ ಗುರುತನ್ನು ಸ್ಥಾಪಿಸುವ ಉದ್ದೇಶಕ್ಕಾಗಿ, ಆಧಾರ್ ಸಂಖ್ಯೆಯನ್ನು ಹೊಂದಿರುವ ಅಥವಾ ಆಧಾರ್ ಸಂಖ್ಯೆಯನ್ನು ನೀಡಿಲ್ಲದ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ವ್ಯಕ್ತಿಯು ಆಧಾರ್ ದಾಖಲು ನಮೂದನೆಗಾಗಿ (enrollment) ಅರ್ಜಿಯನ್ನು ಸಲ್ಲಿಸಿರುವ ರುಜುವಾತನ್ನು ಒದಗಿಸತಕ್ಕದ್ದು ಎಂಬ ಷರತ್ತನಿನಂತೆ, ಅಂಥ ವ್ಯಕ್ತಿಯು ದೃಢೀಕರಣಕ್ಕೆ (authentication) ಒಳಗಾಗುವುದನ್ನು ಅಗತ್ಯಪಡಿಸಬಹುದು.

ಪರಂತು, ಒಬ್ಬ ವ್ಯಕ್ತಿಗೆ ಆಧಾರ್ ಸಂಖ್ಯೆಯನ್ನು ನೀಡದಿದ್ದ ಅಂಥ ಅವಧಿಯವರೆಗೆ, ಸಬ್ಸಿಡಿ, ಪ್ರಯೋಜನ ಅಥವಾ ಸೇವೆಯನ್ನು ಅಂಥ ವ್ಯಕ್ತಿಗೆ ನೀಡುವುದಕ್ಕಾಗಿ ಪರ್ಯಾಯ ಮತ್ತು ಕಾರ್ಯಸಾಧುವಾಗಬಲ್ಲ (Viable) ರೀತಿಯ ಗುರುತನ್ನು ಕೋರತಕ್ಕದ್ದು.

4. ರಾಜ್ಯ ಸರ್ಕಾರದಿಂದ ಸ್ಕೀಮುಗಳನ್ನು ಅಧಿಸೂಚಿಸುವುದು.– ರಾಜ್ಯ ಸರ್ಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ಮತ್ತು ತದನಂತರ ಕಾಲಕಾಲಕ್ಕೆ 3ನೇ ಪ್ರಕರಣಕ್ಕೆ ಅನುಸಾರವಾಗಿ ಅಂಥ ದೃಢೀಕರಣ ಅಥವಾ ರುಜುವಾತು ಅಗತ್ಯವಿರುವ ಸ್ಕೀಮುಗಳು, ಸಬ್ಸಿಡಿಗಳು, ಪ್ರಯೋಜನ ಅಥವಾ ಸೇವೆಗಳ ಪಟ್ಟಿಯನ್ನು ಅಧಿಸೂಚಿಸತಕ್ಕದ್ದು.

5. ಕೇಂದ್ರ ಅಧಿನಿಯಮದ ಅಧ್ಯಾಯ III ಮತ್ತು VIರ ಅನ್ವಯ.– ಕೇಂದ್ರ ಅಧಿನಿಯಮದ ಅಧ್ಯಾಯ III ಮತ್ತು VIರ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿನ ದೃಢೀಕರಣಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

6. ಅಧಿನಿಯಮವು ಯಾವುದೇ ಇತರ ಕಾನೂನಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಣಗೊಳಿಸುವಂತಿಲ್ಲ.– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಣಗೊಳಿಸತಕ್ಕದ್ದಲ್ಲ.

7. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯ ಅಥವಾ ರಾಜ್ಯ ಸರ್ಕಾರದ ಇತರ ನೌಕರರ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ ಅನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

8. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದಾದರ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಆಧಾರ್ ಸಂಖ್ಯೆಯನ್ನು ಬಳಸಬಹುದಾದ ವಿವಿಧ ರೀತಿಯ ಸಬ್ಸಿಡಿಗಳು, ಪ್ರಯೋಜನಗಳು, ಸೇವೆಗಳು ಮತ್ತು ಇತರ ಉದ್ದೇಶಗಳನ್ನು ಒದಗಿಸುವ ಅಥವಾ ಪಡೆಯುವ ಉದ್ದೇಶಗಳಿಗಾಗಿ ಆಧಾರ್ ಸಂಖ್ಯೆಯನ್ನು ಬಳಸುವ ವಿಧಾನವನ್ನು ನಿರ್ದಿಷ್ಟಪಡಿಸುವುದು;

(ಬಿ) ಅಗತ್ಯಗೊಳಿಸಬೇಕಾದ, ಅಥವಾ ನಿರ್ದಿಷ್ಟಪಡಿಸಬಹುದಾದ, ಅಥವಾ ನಿಯಮಗಳ ಮೂಲಕ ರಚಿಸಬೇಕಾದ ಉಪಬಂಧಗಳಿಗೆ ಸಂಬಂಧಿಸಿದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿದ್ದರೆ ಅದರ ಪ್ರತಿಯೊಂದು ಸದನದ ಮುಂದೆ, ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ನಿಕಟ ತರುವಾಯದ ಒಟ್ಟು ಮೂವತ್ತು ದಿನಗಳ ಅವಧಿಯ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ

ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ನಿಯಮವನ್ನು ರದ್ದುಗೊಳಿಸಬೇಕೆಂದು ಒಪ್ಪಿದರೆ, ಆ ನಿಯಮವು, ಆ ಮಾರ್ಪಾಟನ್ನು ಅಥವಾ ರದ್ಧತಿಯನ್ನು ಅಧಿಸೂಚಿಸಿದಂಥ ದಿನಾಂಕದಿಂದ ಸಂದರ್ಭಾನುಸಾರವಾಗಿ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಜಾರಿಗೊಳ್ಳತಕ್ಕದ್ದು ಅಥವಾ ರದ್ದಾಗತಕ್ಕದ್ದು; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಅಥವಾ ಬಿಟ್ಟುಬಿಡಲು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

9. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಮತ್ತು ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ ಅಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಈ ಪ್ರಕರಣದ ಅಡಿಯಲ್ಲಿ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ದ್ವಾರಕನಾಥ್ ಬಾಬು
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 650

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಶುಕ್ರವಾರ, ಮಾರ್ಚ್ ೯, ೨೦೧೮ (ಫಾಲ್ಗುಣ ೧೮, ಶಕ ವರ್ಷ ೧೯೩೯)	ನಂ. ೩೭೧
Part–IVA	Bengaluru, Friday, March 9, 2018 (Phalguna 18, Shaka Varsha 1939)	No. 371

PARLIAMENTARY AFFAIRS SECRETARIAT
NOTIFICATION
NO. SAMVYASHAE 46 SHASANA 2017, BENGALURU, DATED: 09.03.2018.

Ordered that the translation of ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018 (2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 10) in the English language, be published as authorised by the Governor of Karnataka under clause (3) of Article 348 of the constitution of India in the Karnataka Gazette for general information.

The following translation of ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018 (2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 10) in the English language is published in the Official Gazette under the authority of the Governor of Karnataka under clause (3) of Article 348 of the Constitution of India.

KARNATAKA ACT NO. 10 OF 2018

(First Published in the Karnataka Gazette Extra-ordinary on the 9th day of March, 2018)

THE KARNATAKA AADHAAR (TARGETED DELIVERY OF FINANCIAL AND OTHER SUBSIDIES, BENEFITS AND SERVICES) ACT, 2018

(Received the assent of Governor on the 07th day of March, 2018)

An Act to provide for, as a good governance measure, efficient, transparent, and targeted delivery of financial and other subsidies, benefits and services, the expenditure for which is incurred from the Consolidated Fund of State to individuals residing in the State of Karnataka using Aadhaar as a sole identifier, and for matters connected therewith.

Whereas, it is expedient to make a law to provide for, as a good governance measure, efficient, transparent, and targeted delivery of financial and other subsidies, benefits and services, the expenditure for which is incurred from the Consolidated Fund of the State, to the individuals residing in the State of Karnataka using Aadhaar as a sole identifier, and to provide for matters connected therewith;

Be it enacted by the Karnataka State Legislature in the Sixty- ninth year of the Republic of India as follows:-

1. Short title, extent and commencement.- (1) This Act may be called the Karnataka Aadhaar (Targeted Delivery of Financial and Other Subsidies, benefits and Services) Act, 2018.

(2) It extends to the whole of the State of Karnataka.

(3) It shall come into force on such date as the State Government may, by notification in the Official Gazette, appoint.

2. Definitions.- (1) In this Act, unless the context otherwise requires,-

(a) "Agency of the State Government" means any authority or body established or constituted by any Central or State law in the State of Karnataka including the local bodies, and any other body owned and controlled by the State Government and includes the bodies whose composition and administration are predominantly controlled by the State Government;

(b) "Benefit" means any advantage, gift, reward, relief or payment, in cash or kind, provided to an individual or group of individuals and includes such other benefits as may be notified by the State Government, from time to time;

(c) "Central Act", means the Aadhaar (Targeted Delivery of Financial and Other Subsidies, benefits and Services) Act, 2016; (Central Act 18 of 2016)

(d) "Consolidated Fund of State" means a Consolidated Fund of State of Karnataka;

(e) "Government" or "State Government" means the Government of Karnataka;

(f) "Service" means any provision, facility, utility or any other assistance provided in any form to an individual or a group of individuals and includes such other services as may be notified by the State Government;

(g) "Subsidy" means any form of aid, support, grant, subvention or appropriation, in cash or kind provided to an individual or a group of individuals and includes such other subsidies as may be notified by the State Government, from time to time.

(2) Words and expressions used in this Act but not defined hereinabove shall have the same meanings as respectively assigned to them under the Central Act.

3. Proof of Aadhaar number necessary for receipt of certain subsidies, benefits and services, etc.- The State Government or, as the case may be, any Agency of the State Government, may, for the purpose of establishing identity of an individual as a condition for receipt of a subsidy, benefit or service for which the expenditure is incurred entirely by way of withdrawal from, or the receipt therefrom forms part of the Consolidated Fund of the State, or any fund set up by any Agency of the State Government, require that such individual undergo authentication, or furnish proof of possession of Aadhaar number or, in the case of an individual to whom no Aadhaar number has been assigned, such individual makes an application for enrolment:

Provided that, till such time an Aadhaar number is not assigned to an individual, the individual shall be offered alternate and viable means of identification for delivery of the subsidy, benefit or service.

4. Notifying Schemes by State Government.- The State Government shall, within a period of three months from the date of commencement of this Act, and thereafter, from time to time, notify the list of schemes, subsidies, benefit or services for which such authentication or proof is required as per section 3.

5. Application of Chapter III and VI of Central Act.- The provisions of Chapter III and Chapter VI of the Central Act shall mutatis mutandis apply to authentication under this Act.

6. Act to be in addition and not in derogation of any other law.- The provisions of this Act shall be in addition to, and not in derogation of, the provisions of any other law for the time being in force.

7. Protection of action taken in good faith.- No suit, prosecution or other legal proceeding shall lie against the State Government or any officer, or other employees of the State Government for anything which is in good faith done or intended to be done under this Act or rules made thereunder.

8. Power to make rules.- (1) The State Government may, by notification in the Official Gazette, make rules to carryout the purposes of this Act.

(2) In particular, and without prejudice to the generality of the foregoing power, such rules may provide for all or any of the following matters, namely:-

(a) specifying the manner of use of Aadhaar number for the purposes of providing or availing of various subsidies, benefits, services and other purposes for which Aadhaar number may be used;

(b) any other matter which is required to be, or may be, specified, or in respect of which provisions is to be made by rules.

(3) Every rule made under this Act shall be laid, as soon as may be, after it is made, before each House of the State Legislature, while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session or sessions immediately following, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be; so, however, that any such modification or annulment shall be without prejudice to the validity of anything previously done or omitted to be done under that rule.

9. Power to remove difficulties.- (1) If any difficulty arises in giving effect to the provisions of this Act, the State Government may, by an order, published in the Official Gazette, make such provisions not inconsistent with the provisions of this Act which appear to it to be necessary or expedient for the purposes of removing the difficulty:

Provided that, no such order shall be made under this section after the expiry of the period of two years from the date of commencement of this Act.

(2) Every order made under sub-section (1) shall be laid, as soon as may be, after it is made, before each House of the State Legislature.

The above translation of ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2018 (2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 10) be published in the official Gazette under clause (3) of Article 348 of the Constitution of India.

VAJUBHAI VALA
GOVERNOR OF KARNATAKA

By Order and in the name of
the Governor of Karnataka,

K.DWARAKANATH BABU
Secretary to Government
Department of Parliamentary Affairs

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 650

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಶುಕ್ರವಾರ, ಮಾರ್ಚ್ ೯, ೨೦೧೮ (ಫಾಲ್ಗುಣ ೧೮, ಶಕ ವರ್ಷ ೧೯೩೯)	ನಂ. ೩೭೨
Part–IVA	Bengaluru, Friday, March 9, 2018 (Phalguna 18, Shaka Varsha 1939)	No. 372

ಸಂಸದೀಯ ವ್ಯವಹಾರಗಳ ಸಚಿವಾಲಯ

ಸಂಖ್ಯೆ: ಸಂವ್ಯಶಾಇ 47 ಶಾಸನ 2017 ಬೆಂಗಳೂರು, ದಿನಾಂಕ: 09.03.2018

ಅಧಿಸೂಚನೆ

ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018ಕ್ಕೆ 2018ರ ಮಾರ್ಚ್ ತಿಂಗಳ ಏಳನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 08 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 08

(2018ರ ಮಾರ್ಚ್ ತಿಂಗಳ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2018

(2018ರ ಮಾರ್ಚ್ ತಿಂಗಳ ಏಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಮತ್ತು ಅದರ ಸುತ್ತಮುತ್ತ ಇರುವ ಪಾರಂಪರಿಕ ತಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಮತ್ತು ಅದರ ಸುತ್ತಮುತ್ತ ಇರುವ ಪಾರಂಪರಿಕ ತಾಣಗಳನ್ನು ಅಂತರರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಮತ್ತು ಅದನ್ನು ನಿರ್ವಹಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು 2ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಪ್ರದೇಶಕ್ಕೆ ಮತ್ತು ಇತರ ಪಾರಂಪರಿಕ ತಾಣಗಳಿಗೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಸೌಕರ್ಯ"** ಎಂಬುದರಲ್ಲಿ ರಸ್ತೆ, ಬೀದಿಗಳು, ಸುರಂಗ ಮಾರ್ಗಗಳು, ದೀಪದ ವ್ಯವಸ್ಥೆ, ಚರಂಡಿ ವ್ಯವಸ್ಥೆ, ನೈರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲತೆಗಳು, ಲೋಕೋಪಯೋಗಿ ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಆಸ್ಪತ್ರೆ, ಚಿಕಿತ್ಸಾಲಯ, ಗ್ರಂಥಾಲಯ, ಮನರಂಜನಾ ಕೇಂದ್ರಗಳು, ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವುದೇ ಸಾರ್ವಜನಿಕ ಉಪಯುಕ್ತ ಸೇವೆಯ ಸೇವಾ ಕೇಂದ್ರಗಳು ಅಥವಾ ಇತರ ಸೌಲಭ್ಯ; ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಕರ್ಯಗಳನ್ನು ಒಳಗೊಳ್ಳುತ್ತದೆ;

(ಬಿ) **"ಪ್ರಾಧಿಕಾರ"** ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಬನವಾಸಿ ಅಭಿವೃದ್ಧಿ ಪ್ರಾಧಿಕಾರ;

(ಸಿ) **"ಬನವಾಸಿ"** ಎಂದರೆ, ಬನವಾಸಿ ಗ್ರಾಮ ಪಂಚಾಯಿತಿಯ ಮಿತಿಗಳು ಮತ್ತು ಬನವಾಸಿ ಗ್ರಾಮ ಪಂಚಾಯಿತಿಯಿಂದ ಇಪ್ಪತ್ತು ಕಿಲೋಮೀಟರ್‌ಗಳ ವ್ಯಾಪ್ತಿಯೊಳಗಿನ ಪ್ರದೇಶ ಮತ್ತು ಬನವಾಸಿ ಪಾರಂಪರಿಕ ತಾಣಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಆರ್ಜಿಸಿದ ಭೂಮಿಗಳು ಹಾಗೂ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಲಾದ ಅಂಥ ಇತರ ಪ್ರದೇಶ ಮತ್ತು ಇವುಗಳೆಲ್ಲವನ್ನೂ ಒಳಗೊಳ್ಳುತ್ತದೆ;

(ಡಿ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಇ) "ಆಯುಕ್ತ" ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಿದ ಪ್ರಾಧಿಕಾರದ ಆಯುಕ್ತ; (ಎಫ್) "ನಿಧಿ" ಎಂದರೆ, ಪ್ರಾಧಿಕಾರದ ನಿಧಿ;

(ಜಿ) "ಪಾರಂಪರಿಕ ತಾಣ" ಎಂದರೆ, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಹಾಗೂ ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ ಸಂಖ್ಯೆ 24) ಅಡಿಯಲ್ಲಿ ಸಂರಕ್ಷಿತ ಪ್ರದೇಶವೆಂದು ಉಲ್ಲೇಖಿಸಲಾದ ಪ್ರದೇಶವನ್ನು ಹೊರತುಪಡಿಸಿದ ಆದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ತಾಣಗಳನ್ನು ಒಳಗೊಳ್ಳುವ ಸಂಪೂರ್ಣ ಪ್ರದೇಶವಾಗಿದೆ;

(ಹೆಚ್) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ;

(ಐ) "ವಿನಿಯಮಗಳು" ಎಂದರೆ, 44ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರದ ವಿನಿಯಮಗಳು;

(ಜೆ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ; ಮತ್ತು

(ಕೆ) "ಉಪಾಧ್ಯಕ್ಷ" ಎಂದರೆ, ಪ್ರಾಧಿಕಾರದ ಉಪಾಧ್ಯಕ್ಷ.

ಅಧ್ಯಾಯ – II

ಪ್ರಾಧಿಕಾರ ಮತ್ತು ಅದರ ಉದ್ಯೋಗಿಗಳು

3. ಪ್ರಾಧಿಕಾರದ ರಚನೆ.– (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಪ್ರಾಧಿಕಾರವು ತನ್ನ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರತಕ್ಕದ್ದು.

(3) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಮುಖ್ಯಮಂತ್ರಿ – ಅಧ್ಯಕ್ಷ

(ಬಿ) ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಮಂತ್ರಿ – ಉಪಾಧ್ಯಕ್ಷ

(ಸಿ) ಕಂದಾಯ ಇಲಾಖೆಯ ಪ್ರಭಾರ ಹೊಂದಿರುವ ಮಂತ್ರಿ – ಪದನಿಮಿತ್ತ ಸದಸ್ಯ

(ಡಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಹೊಂದಿರುವ ಮಂತ್ರಿ – ಪದನಿಮಿತ್ತ ಸದಸ್ಯ

(ಇ) ಬನವಾಸಿ ಪ್ರದೇಶವನ್ನು ಭಾಗಶಃವಾಗಿ ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ಲೋಕಸಭಾ ಸದಸ್ಯರು ಮತ್ತು ಕರ್ನಾಟಕ ವಿಧಾನಸಭಾ ಸದಸ್ಯರು – ಸದಸ್ಯ

(ಎಫ್) ಬನವಾಸಿಯಲ್ಲಿ ನೋಂದಾಯಿತ ಮತದಾರರಾಗಿರುವ ರಾಜ್ಯಸಭೆಯ ಮತ್ತು ಕರ್ನಾಟಕ ವಿಧಾನಸಭೆಯ (ಸ್ಥಳೀಯ) ಸದಸ್ಯ – ಸದಸ್ಯ

(ಜಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ – ಪದನಿಮಿತ್ತ ಸದಸ್ಯ

(ಎಚ್) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ – ಪದನಿಮಿತ್ತ ಸದಸ್ಯ

(ಐ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಪದನಿಮಿತ್ತ ಸದಸ್ಯ

(ಜೆ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ – ಪದನಿಮಿತ್ತ ಸದಸ್ಯ

(ಕೆ) ಜಿಲ್ಲಾಧಿಕಾರಿ, ಉತ್ತರ ಕನ್ನಡ, ಕಾರವಾರ – ಪದನಿಮಿತ್ತ ಸದಸ್ಯ

(ಎಲ್) ಪ್ರಾಧಿಕಾರದ ಆಯುಕ್ತ – ಸದಸ್ಯ ಕಾರ್ಯದರ್ಶಿ

(ಎಂ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಬನವಾಸಿಯ ಇತಿಹಾಸ ಮತ್ತು ಪರಂಪರೆಯಲ್ಲಿ ತಜ್ಞರಾದ ಇಬ್ಬರು ಸರ್ಕಾರೇತರ ಸದಸ್ಯರು.

4. ಪದಾವಧಿ ಮತ್ತು ಸೇವಾ ಷರತ್ತುಗಳು.– (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು.

(2) ಯಾವೊಬ್ಬ ಸರ್ಕಾರೇತರ ಸದಸ್ಯನು, ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು. ಆದರೆ ಆತನ ರಾಜೀನಾಮೆಯು ಅಂಗೀಕಾರವಾಗುವವರೆಗೂ ಪದದಲ್ಲಿ ಮುಂದುವರೆಯತಕ್ಕದ್ದು.

(3) ಸರ್ಕಾರೇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

5. ಸದಸ್ಯತ್ವದ ಪದಕ್ಕೆ ಅನರ್ಹತೆಗಳು.– ಒಬ್ಬ ವ್ಯಕ್ತಿಯು,–

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಒಂದು ಸಂಸ್ಥೆ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಲ್ಪಟ್ಟವನಾಗಿದ್ದರೆ ಅಥವಾ ವಜಾ ಮಾಡಲ್ಪಟ್ಟವನಾಗಿದ್ದರೆ; ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿದ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಆತನು ಅಥವಾ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ, – ಅವನು ಸದಸ್ಯನಾಗಿ ನೇಮಕ ಹೊಂದಲು ಅಥವಾ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸಲಾದ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

6. ಸದಸ್ಯನನ್ನು ತೆಗೆದು ಹಾಕುವುದು.– ರಾಜ್ಯ ಸರ್ಕಾರವು, ಸರ್ಕಾರೇತರ ಸದಸ್ಯನನ್ನು,–

(ಎ) ಆತನು 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟರೆ:

ಪರಂತು, ಯಾವೊಬ್ಬ ಸದಸ್ಯನನ್ನು, ಆತನು 5ನೇ ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದು ಹಾಕತಕ್ಕದ್ದಲ್ಲ; ಅಥವಾ

(ಬಿ) ಆತನು ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅವನು ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜನಾದರೆ:

ಪರಂತು, ಈ ಖಂಡವು ಪದನಿಮಿತ್ತ ಸದಸ್ಯರಿಗೆ ಅನ್ವಯವಾಗತಕ್ಕದ್ದಲ್ಲ; ಅಥವಾ

(ಡಿ) ಆತನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಹಾನಿ ಉಂಟಾಗುವಂತೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ,

– ಅವನನ್ನು ತೆಗೆದುಹಾಕತಕ್ಕದ್ದು:

ಪರಂತು, ಯಾವೊಬ್ಬ ಸದಸ್ಯನನ್ನು, ಆತನಿಗೆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ತೆಗೆದುಹಾಕತಕ್ಕದ್ದಲ್ಲ.

7. ಮರು ನೇಮಕಾತಿಗೆ ಅರ್ಹತೆ.– ಯಾವೊಬ್ಬ ಸದಸ್ಯನು, ಸರ್ಕಾರೇತರ ಸದಸ್ಯನಾಗಿರುವುದು ಸಮಾಪ್ತಿಯಾದಾಗ, 5ನೇ ಪ್ರಕರಣದ ಅಡಿಯಲ್ಲಿ ಅನ್ಯಥಾ ಹೇಳಲಾದ ಅನರ್ಹತೆಗೊಳಗಾಗದ ಹೊರತು, ಸರ್ಕಾರೇತರ ಸದಸ್ಯನಾಗಿ ಮರುನೇಮಕ ಹೊಂದಲು ಅರ್ಹನಾಗಿರತಕ್ಕದ್ದು.

8. ಪ್ರಾಧಿಕಾರದ ಅಧಿಕಾರಗಳು.– (1) ಈ ಅಧಿನಿಯಮದ ಉದ್ದೇಶ ಮತ್ತು ಉಪಬಂಧಗಳನ್ನು ಜಾರಿಗೊಳಿಸಲು, ಪ್ರಾಧಿಕಾರವು ತಾನು ಅವಶ್ಯಕವೆಂದು ಅಭಿಪ್ರಾಯಪಡುವಂಥ ಯಾವುವೇ ಕಾರ್ಯಗಳನ್ನು ಮಾಡುವುದಕ್ಕೆ ಸಾಮಾನ್ಯವಾಗಿ ಅಧಿಕಾರ ಹೊಂದಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಇತರ ಪ್ರಾಧಿಕಾರವು ನಿರ್ವಹಿಸಬೇಕೆಂದು ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ಹೇಳಲಾದ, ಅಂಥ ಕಾರ್ಯವನ್ನು ನೆರವೇರಿಸುವುದಕ್ಕೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಪ್ರಾಧಿಕರಿಸಿದೆ ಎಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು,

(ಎ) ನಿಯಮಿಸಬಹುದಾಂತಹ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಯಾವುವೇ ಉದ್ದೇಶಗಳನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ತಾನು ಪರಿಗಣಿಸಬಹುದಾದ ಅಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ನೆರವೇರಿಸಲು ಹಾಗೂ ಪ್ರತಿಯೊಂದು ಕರಾರನ್ನು, ಪ್ರಾಧಿಕಾರದ ಪರವಾಗಿ ಪ್ರಾಧಿಕಾರದ ಆಯುಕ್ತರು ಮಾಡಿಕೊಳ್ಳತಕ್ಕದ್ದು:

ಪರಂತು, ಐದು ಲಕ್ಷ ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಿನ ವೆಚ್ಚವನ್ನೊಳಗೊಳ್ಳುವ ಯಾವುದೇ ಕರಾರನ್ನು, ರಾಜ್ಯ ಸರ್ಕಾರದ ಪೂರ್ವಮಂಜೂರಾತಿ ಇಲ್ಲದೇ ಮಾಡಿಕೊಳ್ಳತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರದ ಪೂರ್ವಮಂಜೂರಾತಿಯೊಂದಿಗೆ ಮತ್ತು ಈ ಸಂಬಂಧವಾಗಿ ನಿಯಮಿಸಬಹುದಾದಂತಹ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಅಗತ್ಯವಾಗುವ ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಲು; ಮತ್ತು

(ಸಿ) 38ನೇ ಪ್ರಕರಣ ಮತ್ತು ನಿಯಮಿಸಬಹುದಾದಂತಹ ನಿಬರ್ಂಧಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು, ತನಗೆ ಸೇರಿದ ಚರ ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆಗೆ ನೀಡಲು, ಮಾರಾಟ ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡಲು ಮತ್ತು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ತನ್ನಲ್ಲಿ ನಿಹಿತವಾಗಿರುವ ಅಥವಾ ತಾನು ಆರ್ಜಿಸಿದ ಯಾವುದೇ ಭೂಮಿಯನ್ನು ಮೈದಾನಗಳನ್ನು ರೂಪಿಸುವ ಅಥವಾ ಕಟ್ಟಡವನ್ನು ನಿರ್ಮಿಸುವ ಉದ್ದೇಶಗಳಿಗಾಗಿ ಅಥವಾ ಇನ್ಯಾವುದೇ ಇತರ ರೀತಿಯಲ್ಲಿ ವಿನಿಯೋಗಿಸಲು ಅಥವಾ ಬಳಸಲು, – ಅಧಿಕಾರವನ್ನು ಹೊಂದಿರತಕ್ಕದ್ದು.

9. ಪ್ರಾಧಿಕಾರದ ಉಪ ಸಮಿತಿ.– (1) ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಪ್ರತಿಯೊಂದು ಉಪ ಸಮಿತಿಗೆ ಸಂಬಂಧಿಸಿದಂತೆ ಆಯುಕ್ತನು ಅಧ್ಯಕ್ಷನಾಗಿರುವ ಐದು ಜನರನ್ನು ಮೀರದಂಥ ಇತರ ಸದಸ್ಯರಿರುವ ಒಂದು ಉಪಸಮಿತಿಯನ್ನು ರಚಿಸಬಹುದು.

(2) ಪ್ರಾಧಿಕಾರವು ಅದಕ್ಕೆ ಪ್ರತ್ಯಾಯೋಜಿಸಿದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಉಪಸಮಿತಿಯ ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಉಪಸಮಿತಿಯು, ಕನಿಷ್ಠ ಪಕ್ಷ ತಿಂಗಳಿಗೆ ಒಂದು ಸಲವಾದರೂ ಸಭೆ ಸೇರತಕ್ಕದ್ದು ಮತ್ತು ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂತೆ, ಅದರ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

10. ಆಯುಕ್ತನ ನೇಮಕಾತಿ.– (1) ರಾಜ್ಯ ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳ (ಹಿರಿಯ ಶ್ರೇಣಿ) ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಆಯುಕ್ತನನ್ನಾಗಿ ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯೆಗಳನ್ನು ಆಯುಕ್ತನು ಸ್ವೀಕರಿಸತಕ್ಕದ್ದು. ಆಯುಕ್ತನ ಸೇವಾ ಷರತ್ತುಗಳನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿರುವಂತೆ ರಾಜ್ಯ ಸರ್ಕಾರವು ನಿರ್ವಹಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಾನು ಯುಕ್ತವೆಂದು ಭಾವಿಸುವಂಥ ಅವಧಿಗೆ ಆಯುಕ್ತನಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಬಹುದು.

11. ಆಯುಕ್ತನ ಅಧಿಕಾರಗಳು ಮತ್ತು ಕರ್ತವ್ಯಗಳು.– (1) ಆಯುಕ್ತನು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಆಯುಕ್ತನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಆತನಿಗೆ ಪ್ರದತ್ತವಾಗಿರುವಂತಹ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,–

(ಎ) ಪ್ರಾಧಿಕಾರದ ಗೊತ್ತುವಳಿಗಳನ್ನು ಕಾರ್ಯಗತಗೊಳಿಸತಕ್ಕದ್ದು;

(ಬಿ) ಪ್ರಾಧಿಕಾರದ ವ್ಯವಹಾರವನ್ನು ನಡೆಸುವುದು ಮತ್ತು ಪತ್ರ ವ್ಯವಹಾರವನ್ನು ನಡೆಸುವುದು;

(ಸಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದ ಅಂಥ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮತ್ತು ಜಾರಿಗೊಳಿಸುವುದು ಹಾಗೂ ಅದಕ್ಕೆ ಸಂಬಂಧಿಸಿದ ಅಗತ್ಯ ವೆಚ್ಚಗಳನ್ನು ಭರಿಸುವುದು;

(ಡಿ) ಪ್ರಾಧಿಕಾರದ ಯೋಜನೆಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿರತಕ್ಕದ್ದು;

(ಇ) ಪ್ರಾಧಿಕಾರದ ಬ್ಯಾಂಕಿನ ಖಾತೆಗಳ ವ್ಯವಹಾರವನ್ನು ನಡೆಸತಕ್ಕದ್ದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು;

(ಎಫ್) ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ಮೇಲೆ ಕಾರ್ಯನಿರ್ವಹಣೆ ಆಡಳಿತ ವಿಷಯಗಳು ಮತ್ತು ಅಂತಹ ಅಧಿಕಾರಿಗಳು ಮತ್ತು ನೌಕರರ ಸೇವಾ ಷರತ್ತುಗಳು ಹಾಗೂ ಅವರ ವೇತನ ಮತ್ತು ಭತ್ಯೆಗಳನ್ನು ವಿನಿಯಮನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಚಲಾಯಿಸತಕ್ಕದ್ದು;

(ಜಿ) ಪ್ರಾಧಿಕಾರದ ವ್ಯವಹರಣೆಗಳ ಸಂಕ್ಷಿಪ್ತ ಟಿಪ್ಪಣಿಗಳ ಪ್ರತಿಯನ್ನು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದ ಯಾವುದೇ ಲಿಖಿತ ಅಥವಾ ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು; ಮತ್ತು

(ಎಚ್) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಆತನಿಗೆ ಪ್ರದತ್ತವಾದ ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

12. ಪ್ರಾಧಿಕಾರದ ನೌಕರರು.– (1) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಪ್ರಾಧಿಕಾರವು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯವೆಂದು ಕಂಡುಬರುವಂಥ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ರಾಜ್ಯ ಸರ್ಕಾರವು, ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಸೇವೆಯಿಂದಾಗಲಿ ಅಥವಾ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಸೇವೆಗಳಿಂದಾಗಲಿ, "ಎ" ಗುಂಪಿನ ಕಿರಿಯ ವೇತನ ಶ್ರೇಣಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೇಲೆ ಹಣಕಾಸು ಮತ್ತು ಲೆಕ್ಕಪತ್ರಗಳ ನಿಯಂತ್ರಣಾಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು.

(2) ಹಣಕಾಸು ಮತ್ತು ಲೆಕ್ಕಪತ್ರಗಳ ನಿಯಂತ್ರಣಾಧಿಕಾರಿಯು, ಆಯುಕ್ತನಿಗೆ ವರದಿ ಮಾಡತಕ್ಕದ್ದು ಮತ್ತು ಪ್ರಾಧಿಕಾರದ ಹಣಕಾಸು ವ್ಯವಹಾರಗಳ ಬಗ್ಗೆ ವಾಸ್ತವಿಕವಾದ ಹಾಗೂ ನ್ಯಾಯಯುತವಾದ ಚಿತ್ರಣವನ್ನು ನೀಡುವ ಮೂಲಕ, ಹಣಕಾಸು ನಿಯಮಗಳನ್ನು ಪಾಲಿಸಲಾಗುತ್ತಿದೆ; ಮತ್ತು ಲೆಕ್ಕಪತ್ರಗಳನ್ನು ಅಂದಂದಿನವರೆಗೆ ನಿರ್ವಹಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೌಕರರ ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಆಯುಕ್ತನು, ಪ್ರಾಧಿಕಾರದ ನೌಕರರಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಚಲಾಯಿಸತಕ್ಕದ್ದು.

13. ಪ್ರಾಧಿಕಾರದ ಅಡಿಯಲ್ಲಿನ ಸೇವೆಗಳಿಗಾಗಿ ಸಾಮಾನ್ಯ ಅನರ್ಹತೆ.– ಯಾವೊಬ್ಬ ವ್ಯಕ್ತಿಯು, ಖುದ್ದಾಗಿ ಅಥವಾ ಆತನ ಪಾಲುದಾರನ ಮೂಲಕ ಅಥವಾ ಆತನ ಏಜೆಂಟ್‌ನ ಮೂಲಕ, ಪ್ರಾಧಿಕಾರದ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ, ಅಥವಾ ಪ್ರಾಧಿಕಾರದ ಅಡಿಯಲ್ಲಿ, ಮೂಲಕ ಅಥವಾ ಅದರ ಪರವಾಗಿ ಅನ್ಯಥಾ ಅದರ ಅಧಿಕಾರಿ ಅಥವಾ ನೌಕರನ ಹೊರತು ಯಾವುದೇ ನಿಯೋಜನೆಯನ್ನು ಹೊಂದದೆ, ಪ್ರಾಧಿಕಾರದ ಅಧಿಕಾರಿ ಅಥವಾ ಉದ್ಯೋಗಿಯಾಗತಕ್ಕದ್ದಲ್ಲ ಅಥವಾ ಆಗಿರತಕ್ಕದ್ದಲ್ಲ.

14. ಪ್ರಾಧಿಕಾರದ ಸಭೆಗಳು.– (1) ಪ್ರಾಧಿಕಾರದ ಆಯುಕ್ತನು, ಪ್ರಾಧಿಕಾರದ ಅಧ್ಯಕ್ಷರ ಪೂರ್ವಾನುಮತಿಯೊಂದಿಗೆ ಮತ್ತು ಅಧ್ಯಕ್ಷನು ಯುಕ್ತವೆಂದು ಭಾವಿಸಬಹುದಾದಂತಹ ಅವಧಿಗಳ ಅಂತರದಲ್ಲಿ ಮತ್ತು ಅಧ್ಯಕ್ಷನು ನಿರ್ಧರಿಸಬಹುದಾದಂತಹ ಸ್ಥಳದಲ್ಲಿ, ಪ್ರಾಧಿಕಾರದ ಸಭೆಗಳನ್ನು ನಡೆಸತಕ್ಕದ್ದು:

ಪರಂತು, ಪ್ರಾಧಿಕಾರವು ಒಂದು ಕ್ಯಾಲೆಂಡರ್ ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ಸಭೆಯ, ಅಧ್ಯಕ್ಷತೆಯನ್ನು ಅಧ್ಯಕ್ಷನು ವಹಿಸಿಕೊಳ್ಳತಕ್ಕದ್ದು ಮತ್ತು ಯಾವುದೇ ಕಾರಣದಿಂದಾಗಿ ಅಧ್ಯಕ್ಷನಿಗೆ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಉಪಾಧ್ಯಕ್ಷನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು ಹಾಗೂ ಯಾವುದೇ ಕಾರಣದಿಂದಾಗಿ ಉಪಾಧ್ಯಕ್ಷನಿಗೆ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡುವ ಯಾವೊಬ್ಬ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಪ್ರಾಧಿಕಾರದ ತೀರ್ಮಾನಗಳನ್ನು ಹಾಜರಿದ್ದು ಮತ ಹಾಕುವ ಸದಸ್ಯರ ಅವಿರೋಧ ಸಮ್ಮತಿ ಸೂಚನೆ ಮೂಲಕ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ಮುಂದೆ ತೀರ್ಮಾನಕ್ಕಾಗಿ ಬಂದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿದ್ದಲ್ಲಿ, ಆಯುಕ್ತನು, ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯಗಳ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿವಾಗಿರತಕ್ಕದ್ದು.

(4) ಆಯುಕ್ತನು, ಪ್ರಾಧಿಕಾರದ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು:

ಪರಂತು, ಪ್ರಾಧಿಕಾರವು ಕೈಗೊಂಡ ನಿರ್ಣಯವು, ಈ ಅಧಿನಿಯಮದ ಅಥವಾ ಇತರ ಕಾನೂನಿನ ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ ಅಥವಾ ವಿನಿಯಮಗಳ ಯಾವುದೇ ಉಪಬಂಧವನ್ನು ಅಥವಾ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಪ್ರಾಧಿಕಾರದ ಹಿತಾಸಕ್ತಿಗಳಿಗೆ ಅಥವಾ ಪ್ರಾಧಿಕಾರದ ಅಭಿವೃದ್ಧಿ ಮತ್ತು ನಿರ್ವಹಣೆಯ ಹಿತಾಸಕ್ತಿಗಳಿಗೆ ಧಕ್ಕೆ ಉಂಟುಮಾಡುತ್ತದೆ ಅಥವಾ ಹಾನಿಕಾರಕವಾಗುತ್ತದೆಯೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಆತನು ನಿರ್ಣಯವನ್ನು ಅನುಮೋದಿಸಿದ ಹದಿನೈದು ದಿನಗಳ ಒಳಗಾಗಿ ವಿಷಯದ ಬಗ್ಗೆ ಆದೇಶಗಳನ್ನು ಕೋರಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ಮತ್ತು ಆಯುಕ್ತನು ಕಳುಹಿಸಿಕೊಟ್ಟ ಅಂತಹ ವಿಷಯ ಬಗ್ಗೆ ರಾಜ್ಯ ಸರ್ಕಾರವು ಆದೇಶವನ್ನು ನೀಡುವವರೆಗೆ, ಆಯುಕ್ತನು ಅಂಥ ನಿರ್ಣಯವನ್ನು ಜಾರಿಗೆ ತರಲು ಬದ್ಧನಾಗಿರತಕ್ಕದ್ದಲ್ಲ.

(5) ಪ್ರಾಧಿಕಾರವು ವಿನಿಮಯಗಳ ಮೂಲಕ ಅದರ ಸಭೆಗಳ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ ಕಾರ್ಯವಿಧಾನಗಳನ್ನು ನಿರ್ದಿಷ್ಟಪಡಿಸಬಹುದು.

15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಸಿಂಧುವೆಂದು ಪೂರ್ವಭಾವನೆ ಮಾಡುವುದು.– ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ನ್ಯೂನತೆಯು, ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ನಡುವಳಿಯು ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿದ್ದರೆ, ಅಂತಹ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುತ್ತದೆಂದು ಭಾವಿಸತಕ್ಕದ್ದಲ್ಲ.

16. ಪರಿಚಲನೆಯ ಮೂಲಕ ಪ್ರಾಧಿಕಾರದ ತೀರ್ಮಾನಗಳನ್ನು ಸೂಚಿಸುವುದು.– (1) ಪ್ರಾಧಿಕಾರದ ಅಧ್ಯಕ್ಷನು ಯಾವುದೇ ಪ್ರಕರಣವನ್ನು, ಪ್ರಾಧಿಕಾರದ ಒಂದು ಸಭೆಯಲ್ಲಿ ಚರ್ಚೆಗೆ ಬದಲಾಗಿ ಆ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ಕೋರಿ ಪ್ರಾಧಿಕಾರ ಸದಸ್ಯರ ನಡುವೆ ಪರಿಚಲನೆ ಮಾಡಿಸಲು ನಿರ್ದೇಶಿಸಬಹುದು. ಹಾಗೆ ಪರಿಚಲನೆ ಮಾಡಲಾದ ಟಿಪ್ಪಣಿಯಲ್ಲಿರುವ ಪ್ರಸ್ತಾವವನ್ನು ಎಲ್ಲಾ ಸದಸ್ಯರು ಅವಿರೋಧವಾಗಿ ಒಪ್ಪಿಕೊಂಡಲ್ಲಿ, ಅದನ್ನು ಪ್ರಾಧಿಕಾರದ ಸಮ್ಮತಿಸೂಚಕ ನಿರ್ಣಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ತೀರ್ಮಾನಕ್ಕಾಗಿ ಪರಿಚಲನೆ ಮಾಡಲಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ವ್ಯಕ್ತವಾದರೆ, ಆಯುಕ್ತನು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಲಾದ ಸಂದರ್ಭಗಳಲ್ಲಿ, ಯಾವೊಬ್ಬ ಸದಸ್ಯನು ಟಿಪ್ಪಣಿಯಲ್ಲಿ ನಿರ್ದಿಷ್ಟಪಡಿಸಬೇಕಾದ ದಿನಾಂಕದೊಳಗೆ ತನ್ನ ಅಭಿಪ್ರಾಯವನ್ನು ತಿಳಿಸಲು ತಪ್ಪಿದರೆ, ಅಂತಹ ಸದಸ್ಯನು ಪರಿಚಲನೆ ಮಾಡಿದ ಟಿಪ್ಪಣಿಯಲ್ಲಿರುವ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾನೆಂದು ಭಾವಿಸತಕ್ಕದ್ದು.

(3) 14ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಪ್ರಕರಣದ ಅಡಿಯಲ್ಲಿ ಪರಿಚಲನೆ ಮೂಲಕ ಕೈಕೊಂಡ ಪ್ರಾಧಿಕಾರದ ತೀರ್ಮಾನಗಳಿಗೆ ಅನ್ವಯವಾಗತಕ್ಕದ್ದು.

17. ಕೆಲವು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷನ ಅಧಿಕಾರ.–(1) ಯಾವೊಂದು ವಿಷಯವು 14ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಸಭೆಗಾಗಿ ಅಥವಾ 16ನೇ ಪ್ರಕರಣದ ಅಡಿಯಲ್ಲಿ ಪರಿಚಲನೆ ಮಾಡುವ ಮೂಲಕ ಪ್ರಾಧಿಕಾರವು ತೀರ್ಮಾನ ಕೈಗೊಳ್ಳುವವರೆಗೂ ಕಾಯಲು ಸಾಧ್ಯವಾಗದಷ್ಟು ತುರ್ತು ಸ್ವರೂಪದ್ದಾಗಿದೆಯೆಂದು ಅಧ್ಯಕ್ಷನು ಭಾವಿಸಿದರೆ, ಆತನು ಯುಕ್ತವೆಂದು ಭಾವಿಸುವ ಅಂಥ ಆದೇಶಗಳನ್ನು ಜಾರಿಗೊಳಿಸಬಹುದು ಮತ್ತು ಅದನ್ನು ಪ್ರಾಧಿಕಾರದ ನಿರ್ಣಯಗಳ ರೀತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು:

ಪರಂತು ಈ ಪ್ರಕರಣದ ಅಡಿಯಲ್ಲಿ ಅಧ್ಯಕ್ಷನು ಹಾಗೆ ಕೈಗೊಂಡ ಪ್ರತಿಯೊಂದು ನಿರ್ಣಯವನ್ನು ಪ್ರಾಧಿಕಾರದ ಮುಂದೆ ಅದರ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ – III

18. ಪಾರಂಪರಿಕ ತಾಣಗಳು.– (1) ಯಾವುದೇ ಪದ್ಧತಿ, ಸಂಪ್ರದಾಯ, ರೂಢಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸೃಜಿಸಲಾದ ಮತ್ತು ಅಸ್ತಿತ್ವದಲ್ಲಿರುವ ಯಾವುದೇ ನ್ಯಾಸದ ನಿಬಂಧನೆಗಳಲ್ಲಿ ಏನೇ ಇದ್ದರೂ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬನವಾಸಿಯಲ್ಲಿನ ಎಲ್ಲ ಅಥವಾ ಯಾವುದೇ ಪಾರಂಪರಿಕ ತಾಣಗಳ ಸಂಪೂರ್ಣ ನಿಯಂತ್ರಣ, ಮಾಲೀಕತ್ವ, ನಿರ್ವಹಣೆ ಮತ್ತು ಮೇಲ್ವಿಚಾರಣೆಯು, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ, ರಾಜ್ಯ ಸರ್ಕಾರವು, ನ್ಯಾಯಸಮ್ಮತ ಪರಿಹಾರ ಮತ್ತು ಭೂ ಆರ್ಜನೆಯಲ್ಲಿ ಪಾರದರ್ಶಕತೆಯ ಹಕ್ಕು (ಪುನರ್ವಸತಿ ಮತ್ತು ಪುನರ್ವ್ಯವಸ್ಥೆ) ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಹಾಗೂ ಅದರಡಿಯಲ್ಲಿ ರಚಿಸಿದ ನಿಯಮಗಳ ಅನುಸಾರವಾಗಿ ಆರ್ಜಿಸತಕ್ಕದ್ದು, ಮತ್ತು ತದನಂತರ ಅದನ್ನು ರಾಜ್ಯ ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು.

(2) ರಾಜ್ಯ ಸರ್ಕಾರದ, ಅಭಿಪ್ರಾಯದಲ್ಲಿ ತಾತ್ಕಾಲಿಕ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯವಾಗಿದ್ದರೆ, ಅದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಾಗೆ ಮಾಡಬಹುದು.

19. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.– ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಅನುಸೂಚಿಯಲ್ಲಿ ಯಾವುದೇ ನಮೂದನ್ನು ಸೇರಿಸಿ ಅಥವಾ ಮಾರ್ಪಡಿಸಿ ಅದನ್ನು ತಿದ್ದುಪಡಿ ಮಾಡಬಹುದು.

20. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು.– (1) ಪ್ರಾಧಿಕಾರವು, ಅದರ ರಚನೆಯಾದ ಮೇಲೆ, ಆದಷ್ಟು ಬೇಗನೆ, ಬನವಾಸಿಯನ್ನು ಅಂತಾರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ, ಸಾಂಸ್ಕೃತಿಕ ಹಾಗೂ ಪ್ರವಾಸಿ ಕೇಂದ್ರವನ್ನಾಗಿ ಮತ್ತು ಆದಿಕವಿ ಪಂಪ ಮತ್ತು ಆತನ ಸಮಕಾಲೀನರ ಮತ್ತು ಶಿಷ್ಯವೃಂದದ ಸಿದ್ಧಾಂತಗಳ ಚರ್ಚೆ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಮಾಡಿ ಅದನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಯಾವುದೇ ಪಾರಂಪರಿಕ ತಾಣ ಅಥವಾ ನಿರ್ಮಿತಿಯ ಸಂರಕ್ಷಣೆ ಮತ್ತು ಪುನರ್‌ನಿರ್ಮಾಣ ಹಾಗೂ ಅದರ ನಿರ್ವಹಣೆಗಾಗಿ ಕಾರ್ಯಕ್ರಮಗಳು;

(ಬಿ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾದ ಭೂಮಿಯನ್ನು ಆರ್ಜನೆ ಅಥವಾ ಖರೀದಿಯ ಮೂಲಕ, ವಿನಿಯಮ ಅಥವಾ ಅನ್ಯಥಾ ರೀತಿಯಲ್ಲಿ ಆರ್ಜಿಸುವುದಕ್ಕಾಗಿ ಪ್ರಸ್ತಾವಗಳು;

(ಸಿ) ಸಾರ್ವಜನಿಕ ಉದ್ಯಾನವನಗಳು, ತೋಟಗಾರಿಕಾ ಅಥವಾ ಪ್ರಾಣಿಜೈವಿಕ ಉದ್ಯಾನಗಳು, ಚಿಲುಮೆಗಳಿರುವ ವನಗಳು, ಕೃತಕ ಜಲಪಾತಗಳು, ಆಟದ ಉದ್ಯಾನವನಗಳು, ದೋಣಿ ವಿಹಾರದ ಅಥವಾ ಇತರ ಜಲಕ್ರೀಡೆಯ ಸರೋವರಗಳನ್ನು ಅಥವಾ ಅಂಥ ಇತರ ಪ್ರವಾಸಿ ಆಕರ್ಷಣೆಗಳ ಉಂಟುಮಾಡುವಂಥವುಗಳನ್ನು ನಿರ್ಮಿಸುವುದು;

(ಡಿ) ಬೇರೆ ಬೇರೆ ವರ್ಗದ ಪ್ರವಾಸಿಗರಿಗಾಗಿ ಛತ್ರಗಳು, ವಸತಿ–ಗೃಹಗಳು, ಕಾಟೇಜುಗಳು, ಹೋಟೆಲುಗಳು, ರೆಸ್ಟೋರೆಂಟುಗಳು ಮತ್ತು ಊಟದ ಮನೆಗಳನ್ನು ನಿರ್ಮಿಸುವುದು;

(ಇ) ಅವಶ್ಯಕ ಅಂಗಡಿಗಳ ಸಾಲುಗಳನ್ನು ಅಥವಾ ಅಂಗಡಿ–ಸಂಕೀರ್ಣಗಳನ್ನು ನಿರ್ಮಿಸುವುದು;

(ಎಫ್) ಸಭಾಂಗಣದ ನಿರ್ಮಾಣ;

(ಜಿ) ಆಯಕಟ್ಟಿನ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರಗಳು ಮತ್ತು ಧ್ಯಾನಮಂದಿರಗಳ ನಿರ್ಮಾಣ;

(ಹೆಚ್) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸೌಕರ್ಯಗಳನ್ನು ಕಲ್ಪಿಸುವುದು;

(ಐ) ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಮತ್ತು ನೀರು ಪೂರೈಕೆ ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಕಲ್ಪಿಸುವುದು;

(ಜೆ) ಪ್ರಾಧಿಕಾರ, ಸಾಧಾರಣವಾಗಿ ತನ್ನ ಯೋಜನಾ ಕಾರ್ಯಕ್ಕೆ ಅನುವಾಗುವಂತೆ ಮತ್ತು ಮುಖ್ಯವಾಗಿ ಉತ್ತಮ ಚರಂಡಿ ವ್ಯವಸ್ಥೆಯನ್ನು ಒದಗಿಸಲು, ಯಾವುದೇ ಭೂಮಿಯನ್ನು ಎತ್ತರಿಸುವುದು ಸೂಕ್ತವೆಂದು ಭಾವಿಸಿದರೆ ಅಂಥ ಭೂಮಿಯನ್ನು ಎತ್ತರಿಸುವುದು;

(ಕೆ) ಬನವಾಸಿ ಪ್ರದೇಶದಲ್ಲಿ ಅಥವಾ ಅದಕ್ಕೆ ಲಗತ್ತಾಗಿರುವ ಪ್ರದೇಶದಲ್ಲಿ ಉತ್ತಮ ಗಾಳಿ–ಬೆಳಕಿನ ವ್ಯವಸ್ಥೆಗಾಗಿ ಖಾಲಿ ಜಾಗಗಳನ್ನು ಬಿಡುವುದು;

(ಎಲ್) ಅಡಚಣೆಯನ್ನುಂಟುಮಾಡುವ ಕಟ್ಟಡಗಳನ್ನು ಅಥವಾ ಆ ಕಟ್ಟಡಗಳ ಭಾಗಗಳನ್ನು ಕೆಡಹುವುದು;

(ಎಂ) ಕಟ್ಟಡಗಳ ನಿರ್ಮಾಣ ಮತ್ತು ಪುನರ್‌ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆ;

(ಎನ್) 24ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯೋಜನೆಯಲ್ಲಿ ಒಳಗೊಂಡ ಯಾವುದೇ ಸ್ವತ್ತಿನ ಮಾರಾಟ, ಬಾಡಿಗೆಗೆ ನೀಡುವುದು ಅಥವಾ ವಿನಿಮಯ ಮಾಡುವುದು;

(ಒ) ಪ್ರಾಧಿಕಾರದ ಸಿಬ್ಬಂದಿಗೆ ವಾಸ್ತವ್ಯವನ್ನು ಒದಗಿಸುವುದು;

(ಪಿ) ಸಂಪರ್ಕ ಮತ್ತು ಸಾಗಣೆ ಸೌಲಭ್ಯಗಳಿಗಾಗಿ ಏರ್ಪಾಟು;

(ಕ್ಯು) ಅಭಿವೃದ್ಧಿ ಯೋಜನೆಯ ಭೌಗೋಳಿಕ ಪ್ರದೇಶದಲ್ಲಿ ಈಗಿರುವ ಮತೀಯ ಸಂಸ್ಥೆಗಳೊಂದಿಗೆ, ಅವು ಅಭಿವೃದ್ಧಿ ಯೋಜನೆಯ ಸ್ಕೀಮಿಗೆ ಸರಿಹೊಂದುವಷ್ಟರಮಟ್ಟಿಗೆ ಅವುಗಳನ್ನು ಮುಂದುವರಿಸಲು ಅನುಮತಿಸಬಹುದಾದಂಥ ಹೊಂದಾಣಿಕೆಗಳು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು;

(ಆರ್) ಬನವಾಸಿ ಕ್ಷೇತ್ರವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ, ಯಾತ್ರಾ ಸ್ಥಳವನ್ನಾಗಿ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಮತ್ತು ಆದಿ ಕವಿ ಪಂಪ ಮಾತ್ರವಲ್ಲದೆ, ಆತನ ಸಮಕಾಲೀನರ ಸಾಹಿತ್ಯದ ಚರ್ಚೆ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಮಾಡುವುದಕ್ಕಾಗಿ ಮತ್ತು ಆದಿ ಕವಿ ಪಂಪ ಮತ್ತು ಆತನ ಸಮಕಾಲೀನರ ಜೀವನ, ಮತ್ತು ಧರ್ಮಕ್ಕೆ ಸಂಬಂಧಪಟ್ಟ ಇತರ ಮಹತ್ವದ ಸ್ಥಳಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಮತ್ತು ಅಧ್ಯಯನಕ್ಕೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಸ್ಥಾಪನೆಗಾಗಿ ಹಾಗೂ ಆ ವಿಷಯದ ಬಗ್ಗೆ ವಿಶೇಷ ಗ್ರಂಥಾಲಯದ ಸ್ಥಾಪನೆಗಾಗಿ, ಯುಕ್ತ ಹಾಗೂ ಆನುಷಂಗಿಕವೆಂದು ಪ್ರಾಧಿಕಾರವು ಅಭಿಪ್ರಾಯಪಡುವಂಥ ಇತರ ಯಾವುದೇ ವಿಷಯ;

(ಎಸ್) ಪ್ರಾಧಿಕಾರದ ಪ್ರಾದೇಶಿಕ ಪರಿಮಿತಿಯೊಳಗಿನ ಯಾವುದೇ ಐತಿಹಾಸಿಕ ಮತ್ತು ಪಾರಂಪರಿಕ ಸ್ಥಳದಲ್ಲಿ ಮಣ್ಣಿನಲ್ಲಿ ಹೂತು ಹೋಗಿವೆ ಎಂದು ನಂಬಲಾದ ಪ್ರಾಚೀನ ಸ್ಮಾರಕಗಳು ಯಾವುದಾದರೂ ಇದ್ದರೆ ಅದನ್ನು ಭೂಮಿಯಿಂದ ತೆಗೆಯುವುದಕ್ಕಾಗಿ ಉತ್ಖನನ ಮತ್ತು ಪುರಾತತ್ವದ ಸ್ವರೂಪದ ಅನ್ವೇಷಣೆ:

ಪರಂತು, ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ ಸಂಖ್ಯೆ: 24) ಉಪಬಂಧಗಳನ್ನು ಅಧ್ಯಾರೋಹಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಡಿ ಸಿದ್ಧಪಡಿಸಲಾದ ಅಭಿವೃದ್ಧಿ ಯೋಜನೆಯನ್ನು, ಆಯುಕ್ತರು, ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು, ಯಾವುವೇ ಮಾರ್ಪಾಟುಗಳ ಸಹಿತವಾಗಿ ಅಥವಾ ಮಾರ್ಪಾಟುಗಳಿಲ್ಲದೆ ಯೋಜನೆಯನ್ನು ಅನುಮೋದಿಸಬಹುದು.

(3) (2)ನೇ ಉಪಪ್ರಕರಣದಡಿ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ ತರುವಾಯ, ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಪಾರಸುಗಳ ಮೇಲೆ ಕಾಲ ಕಾಲಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಯೋಜನೆಯಲ್ಲಿ ಮಾಡಬಹುದು.

(4) ಈ ಪ್ರಕರಣದಡಿ ರಾಜ್ಯ ಸರ್ಕಾರವು ಅನುಮೋದಿಸಿದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಮತ್ತು ವೆಚ್ಚವನ್ನು ವಹಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

21. ಬನವಾಸಿ ಪಾರಂಪರಿಕ ತಾಣಗಳ ನಿರ್ವಹಣೆ.– ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸುಗಳ ಮೇಲೆ ಅಥವಾ ಅನ್ಯಥಾ, ಬನವಾಸಿಯೂ ಸೇರಿದಂತೆ ಪ್ರಾಧಿಕಾರದ ಸ್ವತ್ತುಗಳನ್ನು ಬಳಸಿಕೊಳ್ಳಬಹುದು ಎಂಬ ರೀತಿಯನ್ನು, ಬನವಾಸಿ ಮತ್ತು ಪಾರಂಪರಿಕ ತಾಣಗಳಿಗೆ ಬರುವ ಭಕ್ತಾದಿಗಳು, ಯಾತ್ರಾರ್ಥಿಗಳು, ಪ್ರವಾಸಿಗಳು ಮತ್ತು ಇತರ ಸಂದರ್ಶಕರು ಬಳಸಿಕೊಳ್ಳಬಹುದಾದ ಹಲವಾರು ಸೌಲಭ್ಯಗಳಿಗಾಗಿ ಅವರಿಂದ ವಸೂಲು ಮಾಡಬಹುದಾದ ದರಗಳು, ಶುಲ್ಕಗಳು ಅಥವಾ ಇತರ ವೆಚ್ಚಗಳನ್ನು ಮತ್ತು ಪರಂಪರೆಯ ತಾಣಗಳ ಆವರಣಗಳಿಂದ ವ್ಯಕ್ತಿಗಳನ್ನು ಹೊರಹಾಕುವ ಅಧಿಕಾರಗಳು, ಬಾಡಿಗೆ ಅಥವಾ ನಷ್ಟ ಪರಿಹಾರವನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವ ಅಧಿಕಾರ ಇತ್ಯಾದಿ ಇನ್ನಿತರ ವಿಷಯಗಳಿಗಾಗಿ ಒಳಗೊಂಡಂತೆ ಬನವಾಸಿ ಪಾರಂಪರಿಕ ತಾಣಗಳ ನಿರ್ವಹಣೆಗಾಗಿ ಯಾವ ರೀತಿಯಲ್ಲಿ ಪಾರಂಪರಿಕ ತಾಣಗಳನ್ನು ಮೂಲಕ ಉಪಬಂಧ ಕಲ್ಪಿಸತಕ್ಕದ್ದು.

22. ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ.– ಕರ್ನಾಟಕ ಪುರಾತತ್ವ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪ್ರಾಚ್ಯವಸ್ತು ಸ್ಥಳಗಳು ಹಾಗೂ ಅವಶೇಷಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 7) ಏನೇ ಇದ್ದರೂ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅದು ಚಲಾಯಿಸಬಹುದಾದ ಅದರ ಅಧಿಕಾರಗಳನ್ನು ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ನಂತರ, ಪ್ರಾಧಿಕಾರವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಪರಂಪರೆಯ ತಾಣಗಳ ಆವರಣಗಳಿಂದ ವ್ಯಕ್ತಿಗಳನ್ನು ಹೊರಹಾಕುವ ಅಧಿಕಾರಗಳು, ಬಾಡಿಗೆ ಅಥವಾ ನಷ್ಟ ಪರಿಹಾರವನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವ ಅಧಿಕಾರ ಇತ್ಯಾದಿ ಇನ್ನಿತರ ವಿಷಯಗಳನ್ನು ಒಳಗೊಂಡಂತೆ ಬನವಾಸಿ ಪಾರಂಪರಿಕ ತಾಣಗಳ ನಿರ್ವಹಣೆಗಾಗಿ ಯಾವ ರೀತಿಯಲ್ಲಿ ಪಾರಂಪರಿಕ ತಾಣಗಳನ್ನು ನಿರ್ವಹಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು.

23. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರದ ಆವರಣಗಳಿಗೆ ಅನ್ವಯಿಸುವುದು.–(1) ರಾಜ್ಯ ಸರ್ಕಾರವು; (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು 1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32) ಸಾರ್ವಜನಿಕ ಆವರಣಗಳಿಗೆ ಸಂಬಂಧಿಸಿ ಅನ್ವಯಿಸುವಂತೆ ಪ್ರಾಧಿಕಾರಕ್ಕೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಅದು ಗುತ್ತಿಗೆಗೆ ತೆಗೆದುಕೊಂಡ ಆವರಣಕ್ಕೆ ಅನ್ವಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಮೇಲ್ಕಂಡ ಅಧಿನಿಯಮ ಮತ್ತು ಅದರಡಿ ರಚಿಸಿದ ನಿಯಮಗಳು ಈ ಮುಂದಿನ ಮಾರ್ಪಾಡುಗಳೊಡನೆ ಪ್ರಾಧಿಕಾರಕ್ಕೆ ಸೇರಿದ ಆವರಣಗಳಿಗೆ ಅನ್ವಯಿಸತಕ್ಕದ್ದು, ಎಂದರೆ:–

(ಎ) ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಭಾವಿಸುವಂತೆ, ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿಯೆಂದು ನೇಮಿಸಬಹುದು.

(ಬಿ) ಆ ಅಧಿನಿಯಮದಲ್ಲಿ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ "ಸಾರ್ವಜನಿಕ ಆವರಣಗಳಿಗೆ" ಮಾಡಿದ ಉಲ್ಲೇಖಗಳನ್ನು ಪ್ರಾಧಿಕಾರದ ಆವರಣಗಳಿಗೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು, ಮತ್ತು ಆ ಅಧಿನಿಯಮದ 6, 7, 8, 14, 15, 16 ಮತ್ತು 17ನೇ ಪ್ರಕರಣಗಳಲ್ಲಿ "ರಾಜ್ಯ ಸರ್ಕಾರಕ್ಕೆ" ಮಾಡಿದ ಉಲ್ಲೇಖಗಳನ್ನು ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

24. ಪ್ರವಾಸೋದ್ಯಮಕ್ಕೆ ಮತ್ತು ಯಾತ್ರೆ ಕೈಗೊಳ್ಳುವುದಕ್ಕೆ ಪ್ರಾಧಿಕಾರವು ಉತ್ತೇಜನ ನೀಡುವುದು.– ಈ ಪಾರಂಪರಿಕ ತಾಣಗಳಿಗೆ ಸಾಕಷ್ಟು ಪ್ರಚಾರಗಳನ್ನು ನೀಡಲು ಪ್ರವಾಸೋದ್ಯಮ, ಸಂಸ್ಕೃತಿ, ಚರಿತ್ರೆ ಮತ್ತು ಯಾತ್ರೆಗೆ ಉತ್ತೇಜನ ನೀಡುವುದಕ್ಕಾಗಿ, ಪ್ರಾಧಿಕಾರವು ಕಾರ್ಯಕ್ರಮಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ವ್ಯವಸ್ಥೆ ಮಾಡಬಹುದು. ಅಂಥ ಕಾರ್ಯಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ಕದಂಬೋತ್ಸವ;

(ಬಿ) ಕಲಾ ಪ್ರದರ್ಶನಗಳು ಮತ್ತು ಮಾರಾಟಗಳು;

(ಸಿ) ಸಮ್ಮೇಳನಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು; ಮತ್ತು

(ಡಿ) ವಾರ್ಷಿಕ ಜಾತ್ರೆಗಳು ಮತ್ತು ವಿಶೇಷ ಸ್ವರೂಪದ ಉತ್ಸವಗಳು.

25. ಅಧಿಕಾರಗಳ ಪ್ರತ್ಯಾಯೋಜನೆ.– (1) 46ನೇ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅದಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಯಾವುದೇ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

(2) 44ನೇ ಪ್ರಕರಣದ ಅಡಿಯಲ್ಲಿ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಪ್ರಾಧಿಕಾರವು, ವಿನಿಯಮಗಳ ಮೂಲಕ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು, ಆಯುಕ್ತನಿಗೆ ಅಥವಾ ಪ್ರಾಧಿಕಾರದ ಇತರ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.

ಅಧ್ಯಾಯ – IV

ಹಣಕಾಸು ಮತ್ತು ಸ್ವತ್ತು

26. ಪ್ರಾಧಿಕಾರದ ನಿಧಿ.– (1) ಬನವಾಸಿ ಅಭಿವೃದ್ಧಿ ಪ್ರಾಧಿಕಾರ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯ, ದೇಣಿಗೆಗಳು ಮತ್ತು ದಾನಗಳನ್ನು;

(ii) ಪ್ರಾಧಿಕಾರವು ಸಾಲ ಪಡೆದ ಮೊಬಲಗನ್ನು ; ಮತ್ತು

(iii) ಯಾವುದೇ ಮೂಲದಿಂದಾಗಲಿ, ಪ್ರಾಧಿಕಾರವು ಅಥವಾ ಪ್ರಾಧಿಕಾರದ ಪರವಾಗಿ ಪಡೆದುಕೊಂಡ ಇತರ ಎಲ್ಲಾ ಮೊತ್ತಗಳನ್ನು – ಜಮೆ ಮಾಡತಕ್ಕದ್ದು;

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದ ಖಜಾನೆಯಲ್ಲಿ ಇರಿಸತಕ್ಕದ್ದು.

(4) ಪ್ರಾಧಿಕಾರದ ಆಯುಕ್ತನಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯನೀಯ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನವೇನಾದರೂ ಇದ್ದಲ್ಲಿ, ಅದನ್ನೂ ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

27. ನಿಧಿಯ ಬಳಕೆ.– ನಿಧಿಯನ್ನು ಮತ್ತು ಪ್ರಾಧಿಕಾರವು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತನ್ನು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬಳಸತಕ್ಕದ್ದು.

28. ರಾಜ್ಯ ಸರ್ಕಾರದಿಂದ ಅನುದಾನ.– ರಾಜ್ಯ ಸರ್ಕಾರವು, ಪ್ರಾಧಿಕಾರವು ತನ್ನದೇ ಸಂಪನ್ಮೂಲಗಳಿಂದ ಸ್ವಯಂ ನಿರ್ವಹಣೆ ಮಾಡಿಕೊಳ್ಳುವ ಹಂತವನ್ನು ತಲುಪುವವರೆಗೆ ಮತ್ತು ಪಾರಂಪರಿಕ ತಾಣಗಳ ಅಭಿವೃದ್ಧಿಗಾಗಿ ಕಾಲಕಾಲಕ್ಕೆ ಸಹಾಯಾನುದಾನವನ್ನು ನೀಡಲು ಸಹ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತವನ್ನು ಪ್ರತಿ ವರ್ಷವೂ ಪ್ರಾಧಿಕಾರಕ್ಕೆ ಅನುದಾನದ ರೂಪದಲ್ಲಿ ನೀಡತಕ್ಕದ್ದು.

29. ಪ್ರಾಧಿಕಾರದ ಆಯವ್ಯಯ.– (1) ಪ್ರಾಧಿಕಾರವು, ಪ್ರತಿ ವರ್ಷವೂ, ನಿಯಮಿಸಬಹುದಾದಂತಹ ದಿನಾಂಕಕ್ಕೆ ಮೊದಲು ಮತ್ತು ಅಂತಹ ನಮೂನೆಯಲ್ಲಿ ಮುಂಬರುವ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ಅದರ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸತಕ್ಕದ್ದು. ಅವಶ್ಯವಾದರೆ, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಪ್ರಾಧಿಕಾರವು ಪೂರಕ ಆಯವ್ಯಯ ಅಂದಾಜುಗಳನ್ನು ಸಹ ಸಿದ್ಧಪಡಿಸಬಹುದು.

(2) ರಾಜ್ಯ ಸರ್ಕಾರವು, ಈ ಆಯವ್ಯಯ ಅಂದಾಜುಗಳನ್ನು ಮತ್ತು ಪೂರಕ ಬಜೆಟ್ ಅಂದಾಜುಗಳನ್ನು ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಿ ಅಥವಾ ಮಾಡದೇ ಅನುಮೋದಿಸತಕ್ಕದ್ದು.

(3) ಅತ್ಯಂತ ತುರ್ತು ಸನ್ನಿವೇಶಗಳಲ್ಲಿ, ಒಂದು ಹಣಕಾಸು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರದಂತೆ ವೆಚ್ಚವನ್ನು, ಅಂತಹ ವೆಚ್ಚವನ್ನು (2)ನೇ ಉಪಪ್ರಕರಣದಡಿ ರಾಜ್ಯ ಸರ್ಕಾರವು ಅನುಮೋದಿಸಿದ ವಾರ್ಷಿಕ ಅಥವಾ ಪೂರಕ ಆಯವ್ಯಯ ಅಂದಾಜಿನಲ್ಲಿ ಸೇರಿಸಿಲ್ಲದಿದ್ದಾಗ್ಯೂ ಭರಿಸಲು ಆಯುಕ್ತನು ಸಕ್ಷಮರಾಗಿರತಕ್ಕದ್ದು.

(4) ಆಯುಕ್ತನು ಒಂದು ಬಾರಿಗೆ ಒಂದು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು ವೆಚ್ಚದ ಒಂದು ಘಟಕದಿಂದ ಇನ್ನೊಂದು ಘಟಕ್ಕೆ ನಿಧಿಗಳ ಪುನರ್‌ವಿನಿಯೋಗ ಮಾಡುವ ಅಧಿಕಾರವನ್ನೂ ಹೊಂದಿರತಕ್ಕದ್ದು.

30. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಆಯುಕ್ತನು, ನಿಯಮಿಸಬಹುದಾದಂಥ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ಸಿದ್ಧಪಡಿಸಸತಕ್ಕದ್ದು.

(2) ಪ್ರಾಧಿಕಾರದ ಹಣಕಾಸು ವರ್ಷವು, ಪ್ರತಿ ಕ್ಯಾಲೆಂಡರ್ ವರ್ಷದ ಏಪ್ರಿಲ್ 1ನೇ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷದ ಮಾರ್ಚ್ 31ನೇ ದಿನದಂದು ಕೊನೆಗೊಳ್ಳತಕ್ಕದ್ದು.

(3) ನಿಯಂತ್ರಕರು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ ಇವರು ವಾರ್ಷಿಕವಾಗಿ ಪ್ರಧಾಪ್ರಾಧಿಕಾರದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು. ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಸಮವರ್ತಿ ಮತ್ತು ವಿಶೇಷ ಲೆಕ್ಕಪರಿಶೋಧನೆಗಾಗಿಯೂ ಸಹ ಆದೇಶಿಸಬಹುದು.

(4) ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಪ್ರಾಧಿಕಾರವು, ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗನೆ, ಪ್ರಾಧಿಕಾರವು ಅದರ ಸಭೆಯಲ್ಲಿ ಅದನ್ನು ಪರಿಶೀಲಿಸತಕ್ಕದ್ದು ಮತ್ತು ವಾರ್ಷಿಕ ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ಹಾಗೂ ಲೆಕ್ಕಪರಿಶೋಧಕನ ವರದಿಯ ಪ್ರತಿಯನ್ನು, ಲೆಕ್ಕಪರಿಶೋಧಕನು ನೀಡಿದ ಅಭಿಪ್ರಾಯಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಪ್ರಾಧಿಕಾರವು ಕೈಗೊಂಡ ಕ್ರಮದ ವಿವರಣೆಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕನ ವರದಿಯನ್ನು ಮತ್ತು (5)ನೇ ಉಪಪ್ರಕರಣದ ಅಡಿಯಲ್ಲಿ ಅದಕ್ಕೆ ಸಲ್ಲಿಸಲಾದ ಇತರ ದಸ್ತಾವೇಜುಗಳನ್ನು ಪರಿಶೀಲಿಸಿದ ನಂತರ, ಪ್ರಾಧಿಕಾರಕ್ಕೆ ಅದು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

31. ವರದಿಗಳು.– (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಅದರ ಕಾರ್ಯನಿರ್ವಹಣೆ ಬಗ್ಗೆ ವಾರ್ಷಿಕ ವರದಿಯೊಂದನ್ನು ಸಿದ್ಧಪಡಿಸತಕ್ಕದ್ದು ಮತ್ತು ಇತರ ವರದಿಗಳೊಂದಿಗೆ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ರಾಜ್ಯ ಸರ್ಕಾರವು, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ವಾರ್ಷಿಕ ವರದಿಗಳನ್ನು ಮಂಡಿಸತ್ತಕ್ಕದ್ದು.

ಅಧ್ಯಾಯ – V
ಸಂಕೀರ್ಣ

32. ಪ್ರಾಧಿಕಾರವು ಅದರ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಜಮೀನನ್ನು ಮಾರಾಟ ಮಾಡಕೂಡದು.– ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆಯದೆ, ಯಾವುದೇ ಉದ್ದೇಶಕ್ಕಾಗಿ ಮತ್ತು ಯಾವೊಬ್ಬ ವ್ಯಕ್ತಿಗೆ ಅದರ ಅಧಿಕಾರ ವ್ಯಾಪ್ತಿಯಲ್ಲಿನ ಯಾವುದೇ ಜಮೀನನ್ನು ಮಾರಾಟ ಮಾಡತಕ್ಕದ್ದಲ್ಲ.

33. ಕೆಲವು ವ್ಯಕ್ತಿಗಳು ಲೋಕಸೌಕರರಾಗಿರತಕ್ಕದ್ದು.– ಪ್ರಾಧಿಕಾರದ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ, ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕಸೌಕರರು ಎಂಬುದಾಗಿ ಭಾವಿಸತಕ್ಕದ್ದು.

34. ಈ ಅಧಿನಿಯಮದ ಅಡಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.– ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

35. ಕರ್ತವ್ಯ ನಿರ್ವಹಣೆಯಲ್ಲಿ ಲೋಪ.– (1) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಲಾದ ಯಾವುದೇ ಕರ್ತವ್ಯದ ನಿರ್ವಹಣೆಯನ್ನು ಪ್ರಾಧಿಕಾರವು ಮಾಡಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಆ ಕರ್ತವ್ಯದ ನಿರ್ವಹಣೆಗಾಗಿ ಅದು ಒಂದು ಅವಧಿಯನ್ನು ನಿಗದಿಪಡಿಸಸತಕ್ಕದ್ದು.

(2) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಪ್ರಾಧಿಕಾರದ ಕರ್ತವ್ಯ ನಿರ್ವಹಣೆಗಾಗಿ ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಅದು ವಿಫಲವಾದರೆ ಅಥವಾ ನಿರ್ಲಕ್ಷ್ಯ ತೋರಿದರೆ, 3ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಪ್ರಾಧಿಕಾರವನ್ನು ರದ್ದುಗೊಳಿಸುವುದು ಮತ್ತು ನಿಯಮಿಸಲಾದ ವಿಧಾನದಲ್ಲಿ ಅದನ್ನು ಪುನಃ ರಚಿಸುವುದು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಪ್ರಾಧಿಕಾರವನ್ನು ರದ್ದುಪಡಿಸಿದ ತರುವಾಯ ಮತ್ತು ಅದನ್ನು ಪುನಾರಚಿಸುವವರೆಗೆ, ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ರಾಜ್ಯ ಸರ್ಕಾರವು ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದ ಅಂಥ ಅಧಿಕಾರಿ ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು.

36. ಪ್ರಾಧಿಕಾರದ ವಿಘಟನೆ.– (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಪ್ರಾಧಿಕಾರವು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು:

ಪರಂತು, ಅಂಥ ಯಾವುದೇ ಘೋಷಣೆಯನ್ನು, ಆ ಪರಿಣಾಮಕ್ಕೆ ಒಂದು ನಿರ್ಣಯವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಿ ಅವುಗಳು ಅದನ್ನು ಅನುಮೋದಿಸಿದ ಹೊರತು, ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ,–

(ಎ) ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಅದು ವಸೂಲಿ ಮಾಡಬಹುದಾದ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾಗಿರತಕ್ಕದ್ದು.

(ಬಿ) ಪ್ರಾಧಿಕಾರದ ವಿರುದ್ಧ ಜಾರಿ ಮಾಡಬಹುದಾದ ಎಲ್ಲ ಹೊಣೆಗಾರಿಕೆಗಳು, ರಾಜ್ಯ ಸರ್ಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಿಯಾದ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳಷ್ಟರಮಟ್ಟಿಗೆ ರಾಜ್ಯ ಸರ್ಕಾರದ ವಿರುದ್ಧ ಜಾರಿಯಾಗಬಹುದಾಗಿರತಕ್ಕದ್ದು.

37. ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ನಿಯಂತ್ರಣ.– (1) ಪ್ರಾಧಿಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಪರಿವೀಕ್ಷಣೆಯನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರದ, ಆಯುಕ್ತರ ಅಥವಾ ಪ್ರಾಧಿಕಾರದ ಅಧೀನದ ಯಾವೊಬ್ಬ ಅಧಿಕಾರಿಯ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಸರಿತನ, ಕಾನೂನುಬದ್ಧತೆ ಅಥವಾ ಔಚಿತ್ಯಗಳ ಬಗ್ಗೆ ಸ್ವತ: ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ತರಿಸಿಕೊಳ್ಳಬಹುದು ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅದಕ್ಕೆ ಸಂಬಂಧಿಸಿದಂತೆ ಅಂಥ ಆದೇಶವನ್ನು ಹೊರಡಿಸಬಹುದು.

38. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರಗಳು.– ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅದು ಅವಶ್ಯಕ ಅಥವಾ ಮತ್ತು ಸಮಯೋಚಿತವೆಂದು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

39. ತೊಂದರೆಗಳ ನಿವಾರಣೆ.– ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಆ ತೊಂದರೆಯ ನಿವಾರಣೆಗಾಗಿ, ಅದು ಅವಶ್ಯಕ ಮತ್ತು ಸಮಯೋಚಿತವೆಂದು ಅಬಿಪ್ರಾಯಪಡುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ಮೇಲೆ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

40. ನಿಯಮಗಳ ರಚನಾಧಿಕಾರ.– (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಪೂರ್ವ ಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಬಹುದು.

